ಮಲ್ಲನಗೌಡಾ ತಂದಿ ಫಕೀರಗೌಡಾ ವಾಟೇಲ ಸಾಕೀನ ಹುಲ್ಲೂರ ತಾಲ್ಲುಕ ರೋಣ ಇವರಿಗೆ—

ಕಳಗೆ ಹೆಬ್ಬುಟ್ಟಿನ ಗುರ್ತಾ ಮಾಡುವ ತಾವು ವ್ಯಾ ಕೋಮು ಮಲ್ಲನಗೌಡಾ ವಾಟೇಲ ಸಾಕೀನ ಹುಲ್ಲೂರ ಹಾಲಿವಸ್ತಿ ಬೆಳವಣಕಿ ಈಕೆಯು ನಿಮಗೆ ಈ ನೋಟೀಸಿನಿಂದ ಉತ್ತರ ಕೊಡುವದೇನಂದರೆ-

ನೀವು ಧಾರವಾಡ ವಿಜಯ ತಾರೀಖು ೭ ನೇ ಜನೆವರಿ ೧೯೨೬ ನೇ ಪತ್ರದಲ್ಲಿ ಕೊಟ್ಟ ನೋಟೀಸು ನೋಡಿದೆನು ನೀವು ಸದರ ನೋಟೀಸಿನಲ್ಲಿ ಬರೆದ ಯಾವತ್ತು ಮಜಕೂರು ಸಳ್ಳು ಅದೆ ನಾನು ಬಾಳಿವೆ ಮಾಡಲಿಕ್ಕೆ ಯಾವಾಗಲು ತಯಾರ ಇದ್ದೇನೆ ನೀವು ದೊಡ್ಡ ಮನೆತನಕ್ಕೆ ಸೇರಿದವರು ನಾನು ನಿಮ್ಮ ಮನೆಗೆ ಬಂದವಳು ನಾನು ಪತಿಸಂಬಂಧ ಬಿಟಕೊಂಡು, ಅಪಮಾನಿತಳಾಗಿ ಹೋಗೆ ತಕ್ಕಂಥ ಹೆಣ್ಣುಮಗಳಲ್ಲ ಇದರಿಂದ ನನ್ನ ಮತ್ತು ನಿಮ್ಮ ಮನೆತನದ ಅಬ್ರು ಮಾತ್ರ ಹೋಗುತ್ತದೆ. ಇದನ್ನು ಪಕ್ಕಾ ತಿಳಕೊಂಡು, ಜಲೋ ರೀತಿಯಿಂದ ಬಾಳಿವೆ ಮಾಡಬೇಕು ನೀವು ನಾಲ್ಕು ಜನ ಸಂಭಾವಿತರನ್ನು ಕೂಡಿಸಿ, ಅಪರ ಹೇಳಿಕೆಯ ಪ್ರಕಾರ ರಫಾವು ಮಾಡಿಕೊಂಡು ಹೋಗಬೇಕು ನನ್ನ ಮೇಲೆ ಸುಳ್ಳೇ ಕೆಟ್ಟ ಆರೋಪ ಹೊರಿಸಿದ್ದೀರಿ ದುಷ್ಟ ಜನರ ಸಂಗತಿಯಲ್ಲಿ ಬಿದ್ದಿರಕೇನೆಂದು ನೋಟೀಸಿನಲ್ಲಿ ಬರೆದು ನನ್ನ ಬೇ ಅಬ್ರು ಮಾಡುತೀರಿ ಇದು ನಿಮ್ಮಂಥ ದೊಡ್ಡ ವತನದಾರರಿಗೆ ಶೋಭಿಸುವದಿಲ್ಲ ನೀವು ಈ ಶಬ್ದವನ್ನ ಪರಕ ತಕ್ಕೊಂಡು ನನ್ನ ಅಬ್ರು ಕಾಯಬೇಕು ನನ್ನ ಮರ್ಯಾದೆ ಹೋದರೂ ಒಂದೇ, ನಿಮ್ಮ ಮರ್ಯಾದೆ ಹೋದರೂ ಒಂದೇ. ನೀವು ಈ ತರದ ಆರೋಪ ಹೊರಿಸಿ, ನೋಟೀಸು ಕೊಡುವ ಮುಂಚಿಗೆ ಹೋಗುವಿರೆಂದು ನಾನು ಎಂದೂ ತಿಳಿದಿದ್ದಿಲ್ಲ ನಿಮಗೂ ನಿಮ್ಮ ಸಂಬಾಜು ವತನದಾರರಿಗೂ ಬೇ ಅಬ್ರು ಆಗುವಂತಾಯಿತು. ಆದ್ದರಿಂದ ನೋಟೀಸಿನೊಳಗಿನ ವ್ಯಾಗಳನ್ನು ರದ್ದು ಪಡಿಸಿ ಮನೆತನದ ಮರ್ಯಾದೆ ಕಾಯ್ದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ ಮತ್ತು ಸದರ ನೋಟೀಸಿನಲ್ಲಿ ದಾಗೀನೆಗಳನ್ನು ತಾಣಿಸಿದೀರಿ ಅಂಥ ದಾಗೀನೆಗಳನ್ನು ನನ್ನ ಮೈಮೇಲೆ ಸಹಾ ಇದ್ದಿಲ್ಲ. ನಾನು ತವರ ಮನಿಗೆ ಹಡಿಯಲಿಕ್ಕೆ ಬರುವಾಗ್ಯೆ ಯಾವ ದಾಗೀನೆ ತಂದಿಲ್ಲ ಕಾರಣ ಈ ನೋಟೀಸು ಮುಟ್ಟಿದ ಎಟು ದಿವಸಗಳಲ್ಲಿಂದು, ಇಲ್ಲಿಯ ವರೆಗೆ ನನ್ನ ಬಾಣಂತಿ ಮತ್ತು ಉಪಜೀವನದ ದಿನೆಯಿಂದಾ ಅದ ಖರ್ಚು ನಾಲ್ಕು (೪೦೦) ನೂರು ರೂಪಾಯಿ ಕೊಟ್ಟು ದಾಗೀನೆಗಳ ಸೊಟ್ಟು ನೆವ ಮಾಡಿಕೊಂಡು, ಕೊಟ್ಟ ನೋಟೀಸನ್ನು ಪರತ ತಗೊಂಡು ನನ್ನನ್ನು ಕರಕೊಂಡು ಹೋಗಿ ಸುಖ ಬಾಳಿವೆ ಮಾಡಬೇಕು ಇಲ್ಲವಾದರೆ- ನಿರ್ವಾಹವಿಲ್ಲೆಂದು ಉಸಜೀವನದ ಒಗ್ಗೆ ಕಾಯದೇ ತೀರ ಇಲಾಜ ಮಾಡಲಾದೀತು ಈ ಬಾಬತು ಆ ಪ ಕೋರ್ಟ ಕಚೇರಿ ಖರ್ಚು ಮತ್ತು ನೋಟೀಸಿನ ಖರ್ಚು ನಿಮ್ಮ ತಲಿಯ ಮೇಲೆ ಅದೆ ತಿಳಿಯುವದು

ತಾ॥ ೧೫ ಜನೆವರಿ ೧೯೨೬

ಈ ಎಡಗೈ ಹೆಬ್ಬುಟ್ಟಿನ ಗುರ್ತಾ ಈರವ್ವಾ ಕೋಮು ಮಲ್ಲನಗೌಡಾ ವಾಟೇಲ ಈಕೆ ಕೈದು ಇರುತ್ತದೆ.

— —

ಜಾಹೀರ ನೋಟೀಸು

ಪಂವ್ವಾ ತಂದಿ ಸೂಗವ್ವಾ ಕಲಿಂಗಣವರ ಸಾಕೀನ ಇನಾಮಗ್ರಾಮ ನರಸಾಪೂರ ತಾಲ್ಲುಕ ಗದಗ ಈಕೆಗೆ-

ಸೂವ್ವಾ ಬಿನೆ ಪ್ರಭಣ್ಣಾ ಬೆಟಗೇರಿ ಸಾಕೀನ ಇನಾಮಗ್ರಾಮ ನರಸಾಪೂರ ತಾಲ್ಲುಕ ಗದಗ ನಾನು ನಿನಗೆ ನೋಟೀಸು ಕೊಡುವದೇನಂದರೆ- ನೀನು ನನ್ನ ಲಗ್ನದ ಹೆಂಡತಿ ಇದ್ದು ನಿನ್ನಿಂದಾ ನನಗೆ ಇಬ್ಬರು ಹೆಣ್ಣು ಮಕ್ಕಳು ಆಗಿದ್ದು ಅದರ ಪೈಕಿ ಬರಡನೇ ಹುಡಗಿ ಎರಡು ೨ ವರ್ಷದ್ದು ಇರುತ್ತದೆ ಮೊದಲನೇ ಹುಡಗಿ ಐದು ೫ ವರ್ಷದ್ದು ಅದೆ. ಆದರೆ ಈಗ ವರ್ಷದ ಹಾಗಾಯಿತ ನೀನು ದುಷ್ಟ ಜಾಕಿಗೆ ಬಿದ್ದು ನಿನ್ನ ಹೆಂಡಮ್ಮಾ ಅಂದಾನೆನ್ನುವ ದುರುಧ್ಧನಿಗೆ ಮಳಗಾಗಿ ನಂನೆ ಕೂಡಾ ಜನ್ಮಾಗಿ ಬಾಳ್ವೆ ಮಾಡಲಿಲ್ಲ ಹಾಗು ವೈಭಿಜಾರಕ್ಕೆ ಬಿದ್ದು ಅಜಮಾಸು ವಂದು ತಿಂಗಳ ಹಿಂದೆ ನನ್ನ ಗೈರಹಾಜರಿಯಲ್ಲಿ ನನ್ನ ಮನಮಿಂದ ಪೆಟಿ ಹೋಗಿರುತ್ತೀ ದಿ ಹಾಗು ನೀನು ಹೋಗುವಮುಂಚೆ ಭಂಗಾರದ ತಾಳೀನರಾ ವಂದು ಬೆಳ್ಳಿಪಟ್ಟಿ ವಂದು ಬುರಡು ತೀರಿಗಳು ಮತ್ತು ಸುತ್ತಿದ ಒಂಗಾರದ ಬಿಲಿಗಬಟ್ಟು ಒಂದು ಇಪ್ಪತ್ತೈದು ೨೫ ರೂಪಾಯಿಗಳು ರೋಮ ತಕ್ಕೊಂಡು ಹೋಗಿರುತ್ತೀದಿ ಮಲಿಕೂಸಿನ ಕಾಳಜಿ ಮಾಡದೆ ಬರಡು ಹುಡಗಿಯೊನ್ನು ಬಿಟ್ಟು ಹೋಗಿದಿ ನಿನ್ನ ದಸಿಂದಾ ನಾನು ಪುಸ್ಕಳ ಹುಡಕಿದರೂ ತಿಗಲಿಲ್ಲ ನೀನು ಈಗ ತಿರಿಗಿ ನಿಮ್ಮ ಅಜ್ಜಿಯ ಮನಿಗೆ ಬಂದು ಎರಡು ದಿವಸಗಳಾದವು ಬಂದನಂತರ ಮನಿಗೆ ಬರಲಿಕ್ಕೆ ಹೇಳಿದರೆ ಇನಕಾತ ಮಾಡಿದಿ ಹುಡಗಿಯೊನ್ನು ಸಂಕ್ಷನೆ ಮಾಡಲಿಕ್ಕೆ ಹಾಂಗು ನನ್ನ ಕೂಡಾ ಬಾಳ್ವೆ ಮಾಡಲಿಕ್ಕೆ ಜನಕಾರ ಮಾಡಿದಿ ನೀನ ಸಡಾವಳೆ ಜಲೋ ಇಲ್ಲಾ ಇಪಲ್ಲಾ ಕಾರಣಗಳ ಮೆಲಿಂದ ನಾನು ನಿನ್ನನ್ನು ಈ ಲೇಬದಿಂದ ಬಿಟ್ಟು ಬಿಟ್ಟಿರುತ್ತೇದೆ ಇದೇ ನೋಡಬೇಟಿ ಇರುತ್ತದೆ ತಿಳಿಯುವದು ಯಂಬ ಮಜಕೂರಿನ ವಂದು ಹ್ಯಾಂಡ ನೋಟೀಸು ತಾರೀಖು ೧೮-೧೨-೧೯೨೬ ಇಸ್ವಿ ದಿವಸ ಟಪಾಲದ್ವಾರ ರಜಿಷ್ಟರಿ ನೋಟೀಸು ನಾವು ನಿನಗೆ ಕೊಟ್ಟಿರುತ್ತೇವೆ. ಅದಕ್ಕೆ ನೀನು ಸಹಿ ಸಹಿತಾ ಮಾಡಿದಿ ಉತ್ತರ ಕೊಡಲಿಲ್ಲ ಕಾರಣ ಈ ಜಾಹೀರ ನೋಟೀಸು ಮಾಡಿರುತ್ತದೆ ತಾರೀಖು ೧೩ ಜನೆವರಿ ೧೯೨೭ ಇಸ್ವಿ

ಸಹಿ ಸುಗದ್ವಾ ಬಿನ್ನ ಪ್ರಭಣ್ಣಾ ಬೆಟಗೇರಿ

ಮದ್ರಾಸ ಕೌನ್ಸಿಲದ ಲೋಕನಿಯುಕ್ತ ಮೆಂಬರರಾದ ಡಾಕ್ಟರ ಮುಲ್ಲಯ್ಯನವರಿಂದ ಪರಿಶೋಧಿಸಲ್ಪಟ್ಟ

ಮೆಸರ್ಸ ಪಿ. ವ್ಹಿ. ರಾಜನ ಕಂಪನಿಯ

ಸುಗಂಧ ನಸ್ಯದ ಪುಡಿಯು.

ಪ್ರಖ್ಯಾತಿ ಹೊಂದಿದ ಈ ನಸ್ಯದ ಪುಡಿಯು ಅಮೂಲ್ಯವಾದದ್ದಿದ್ದು ಒಕ್ಕಾವಧಿ ಜನರು ತದರ ಉಪಯೋಗ ಮಾಡಿದ್ದಾರೆ. ಇದರ ಗುಣದ ಒಗ್ಗೆ ಸಾವಿರಾರು ಜನರು ಸರ್ಟೀಫಿಕೇಟುಗಳನ್ನು ಕೊಟ್ಟಿದ್ದಾರೆ. ಈ ಪುಡಿಯ ಉಪಯೋಗದಿಂದ ಗುಣವಾಗುವ ವ್ಯಾಧಿಗಳು:— ಪಿನಸಿ, ಅರತಲೆನೋವು, ತಲೆಯಲ್ಲಾಗುವ ಬೇರ ವಿಕಾರಗಳು ಕಣ್ಣುಗಳಲ್ಲುಂಟಾಗುವ ಎಲ್ಲ ವ್ಯಾಧಿಗಳು ದೂರಾಗಿ ಸ್ಮರಣ ಶಕ್ತಿಯು ಹೆಚ್ಚುತ್ತದೆ. ಬೇರೆ ನಸ್ಯದಲ್ಲಿ ಈ ನಸ್ಯದ ಒಂದು ಬಟಿಯನ್ನು ಕೂಡಿಸಿದರ ಎಲ್ಲವೂ ಸುಗಂಧವಾಗುವದು. ಮಾದರಿ ತಿಕೆ ಉಚಿತವಾಗಿ ದೊರೆಯುವದು.



ಸಾದಾ ಮದ್ರಾಸ ನಸ್ಯ ೧೨೦ ತೊ ವೀಸಿ ಒಂದಕ್ಕೆ ನಂಬರು ೧ ೪-೦-೦
,, ೨ ೫-೪-೦

ದಯವಿಟ್ಟು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಶ್ರೀ ವಿಳಾಸ- **ನಸ್ಯಮ** | **ಪಿ. ವ್ಹಿ. ರಾಜನ ಮತ್ತು ಕಂಪನಿ,**
ಳಳ ಗೋವಿಂದಪ್ಪ ನಾಯಕನ ಬೀದಿ ಜಾರ್ಜಟೌನ, ಮದ್ರಾಸ

ಈ ಪತ್ರವನ್ನ ಅಣ್ಣಾಚಾರ್ಯ ಬಾಳಾಚಾರ್ಯ ಹೊನಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಕಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿಸಿರುವರು.

R. N. B. 1443

ವಿಜಯ

ಸತ್ಯ ಪ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೪ ಧಾರವಾಡ ಸೋಮವಾರ ತಾರೀಖು ೧೭ನೇ ಜನವರಿ ೧೯೨೨ ಸಂಚಿಕೆ ೧೪

ಕಿರ್ಲೋಸ್ಕರ ಕಬ್ಬಿನ ಗಾಣಗಳು.



ಮೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಮಾಲ ಗಾಣಕ್ಕೆ ಸದರವು ದೊರೆತಿದೆ ಹೆಚ್ಚಿನ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ಧಿ ಧಾರವಾಡ ಅರ್ಬನ ಕೋ. ಆಪರೆಟಿವ್ವ ಬ್ಯಾಂಕ ಲಿಮಿಟೆಡ

ಮುಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ವ ಕ್ರೆಡಿಟ ಸೊಸಾಯಟಿಯ ರೀತ ಪ್ರಕಾರ ರಿಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸಾನ.

ಜಿಂದಗೆಯು ಅರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಚಾಲ್ತಿಯಾದುವು. ಠೇವಣಿ ಮತ್ತು ಬೇರೆ ತರದ ಪಿರಾಟಿಗಳಿಗೆ ಅನ್ನಾಗಿ ಬಡ್ಡಿ ದೊರೆಯುವದು.

ಬೇರೆ ಸಂಗತಿಗಳನ್ನು ತಿಳಿಗೆ ಸಹೀ ಮಾಡಿದವರಿಂದ ತಿಳಿಕೊಳ್ಳಬೇಕು.

ವರಾಜ ಬಿ. ಬಳಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಅರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ದಿವಾಜಿಟ ಇಟ್ಟುಕೊಳ್ಳಿಲಾಗುವದು. ದರವನ್ನು ಸಮಕ್ಷ ಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಿವಾಗೀನೆಗಳನ್ನು ವತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಕಾಲ್ಕೆರಡು ಆಣೆಯಂತಿರುತ್ತದೆ.

ಎ. ಕೃ. ಕಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ಮೂರು ಮೋಟಾರಗಳ ಮಾರಾಟ.

ಶಿವರಲೆಟ ಮೋಟಾರ ಕಾರು ಹದಿನಾರು ಜನರು ಕೂಡುವದು ಒಂದು, ಗಿಳ ಜನರು ಕೂಡುವದು ಮತ್ತು, ಬೇಬಿಗೈಟ ಸ್ಪೆಶಲೆಟ ಟೂರಿಂಗ ಕಾರ ಈ ಮೂರು ಮೋಟಾರಗಳನ್ನು ಮಾರಕ್ಕಾಗುವ್ವೇನೆ. ಇವು ಉತ್ತಮ ಸ್ಥಿತಿಯಲ್ಲಿದ್ದು, ಸದ್ಯದಲ್ಲಿ ಸರ್ವಿಸದಲ್ಲಿರುತ್ತವೆ. ಕೊಳ್ಳಲಿಚ್ಛಿಸುವವರು ಮಾಲ್ಪಿ ನೋಡಿ ಕೊಳ್ಳಬಹುದು. ಕ್ರಯ ಮುಂತಾದ ವರ ಬಗ್ಗೆ ಸಮಕ್ಷನು ಅಗರ ನಮ್ಮ ವಿಜಂಟಗಾದ ಅಲ್ಲಾಭಕ್ಷ ಎ ಹ ರಪನಹಳ್ಳಿ ವಾಚ ರಿಪೇರರ ಅಂಡ ಡೀಲರ ಹಾಲುಗೆ ಎದುರಿಗೆ ಧಾರವಾಡ ಇವರನ್ನು ವಿಚ ರಿಸಬೇಕು.

ಎ ನಾಯ್ ಭಸ್ಮರಿ ಕಿರ್ಲೋಸ್ಕರ
ಕಿರ್ಲೋಸ್ಕರ ಮೋಟಾರ ಸರ್ವಿಸ

ಸೂಚನೆ— ಮೂರೂ ಮೋಟಾರ ತೊಗೊಂಡಲ್ಲಿ ಕೋ ವಿ ಸವಾಗಬಹುದು

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹಕ್ಕು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಸಿ ಂದು ವಳಿಗೆ ಒಂದುವರಿ ಅಣೆ ಇಂಗ್ಲಿಷ ಪ್ರತಿಯೊಂದು ಒಳಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ನೇಮಕ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷದಿಂದ ಭಿನತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರು ಆಣೆ ಹಬಲ್‌ಕಾಲಮಿನ ಒಳಗಳಿಗೆ ಇಮ್ಮಡಿ ತಾರ್ಜು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು. ವ್ಯವಸ್ಥಾಪಕ ವಿಜಯ

ವಿಜಯದ ವರ್ಗಣೀ ದರ

—೦—

ವಿಳಾಸಪತ್ರಕ್ಕೆ

೧೨ ತಿಂಗಳಿಗೆ	೧೨—೦—೦ ರೂ.	
೬ ,,	೬—೮—೦ ರೂ.	
೩ ,,	೩—೦—೨ ರೂ.	
ನಮೂನೆ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ.	

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೧೭-೧-೨೭ ನೇ ಇಸ್ವಿ

ವಿಜಾಪೂರ ಜಿಲ್ಲೆಯ ಬರವು.

ಈ ಜಿಲ್ಲೆಯಲ್ಲಿ ಬಿದ್ದ ಬರದ ಬಗ್ಗೆ ಕಲೆಕ್ಟರರಾದ ಮಿ. ನಾಯಿಕ ಇವರ ಕಡೆಗೆ ವಿಜಾಪೂರದ ಪ್ರಮುಖ ಗೃಹಸ್ಥರ ಒಂದು ನಿಷ್ಠ ಮಂಡಲ ಹೋಗಿತ್ತು. ರಾ ಬ. ರಾಘವೇಂದ್ರರಾವ ಕೆಂಭಾವಿಯವರು ಇದರ ಮುಖ್ಯಸ್ಥರಾಗಿದ್ದರು. ಕೌನ್ಸಿಲದ ಮೆಂಬರರಾದ ಸರದೇಸಾಯಿ ಮತ್ತು ಜಾನವೇಕರ, ಡಿ. ಲೋಕಲಬೋರ್ಡಿನ ಅಧ್ಯಕ್ಷರಾದ ಮಿ ನಾಟೇಲ ಮೊದಲಾದವರು ಇದರ ಮೆಂಬರ್ಕಾಗಿದ್ದರು. ಬರದ ದಯನದಿಂದ ಸಾವಿರಾರು ಜನರು ಜಿಲ್ಲೆ ಬಿಟ್ಟು ಹೋಗುತ್ತಿದ್ದಾರೆ. ಅನ್ನದ ತುಟ್ಟಾಗ್ರತೆಯಾಗಿದೆ. ಇಪೆರೇರ ಬಂದೋಬಸ್ತು ಮಾಡಬೇಕು. ಮುಕ್ತು ನಾನ ಅಫಸಿಯಲರಾದಂಥ ಸದ್ಗೃಹಸ್ಥರ ಸಹಾಯ ತಕ್ಕೊಂಡು ಬೆಳೆಯು ಆಣೆವಾರಿಯನ್ನು ನಿರ್ಣಯಿಸಬೇಕು. ಹಳೇ ಕೆರೆಗಳನ್ನು ದುರಸ್ತಿಗೆ ಹಚ್ಚಿ, ನೀರಿನ ಸಂಗ್ರಹವಾಗುವಂತೆ ಏರ್ಪಾಡು ಮಾಡಬೇಕು. ಮತ್ತು ಧನದ ಹೀನ ಸ್ಥಿತಿಯನ್ನು ಲಕ್ಷಿಸಬೇಕು. ಎಂಬದಾಗಿ ಇವರು ಏನಂತಿ ಮಾಡಿಕೊಂಡರು.

ಈ ವಿನಂತಿಯ ವಿಚಾರವನ್ನು ಸಿಸಾಸಗುಪ್ತತೆಯಿಂದ ಮಾನ್ಯವೆಂದು ಸಾಹೇಬರು ಉತ್ತರ ಕೊಟ್ಟರು. ಬೆಳೆಯ ಆಣೆವಾರಿಯ ನಿರ್ಣಯ ಮಾಡಲಿಕ್ಕೆ ನಾನಾ-ಅಫಸಿಯಲ್ಲರ ಸಹಾಯ ತಕ್ಕೊಳ್ಳಲಿಕ್ಕೆ ಬಹುಪದಿಲ್ಲ. ಏಕಂದರೆ ಆ ಪ್ರಕಾರ ಲ್ಯಾಂಡ ರಿವ್ಹಿನ್ಯೂ ಕೋಡಿನಲ್ಲಿ ನಿಯಮವಿರುವದಿಲ್ಲೆಂದು ಹೇಳಿದರು. ರಿಲೀಫ ಕಾಮಗಾರಿಗಳನ್ನು ತೆಗೆಯುವವೆ ವಿಷಯೋಗ ಮಂದಿರದ ಹತ್ತರ ಮತ್ತು ಕೊಲಚಿಯಲ್ಲಿ ಇಂಗ್ಲೇಶನದ ಕ್ಷಾಮಗಾರಿ ನಡಿಯುವದು. ಶಾಲೆಗಳಲ್ಲಿ ಓದ್ದುಗಳನ್ನು ಹಾಕಲಿಕ್ಕೆ ತಗಾಯಿಯನ್ನು ಕೈ ಸಡಿಲು ಬಿಟ್ಟು ಕೊಡುವೆವು. ಇವನ್ನು ಹೇಗೆ ಹಾಕಬೇಕೆಂಬದನ್ನು ಕಲಿಸುವದಕ್ಕಾಗಿ ಬೇಳಗಿಯಲ್ಲಿ ಒಂದು ವರ್ಗ ತೆಗೆದಿದ್ದೇವೆ. ಕೃಷ್ಣಾದ ಧಾಡೆಗುಂಟ ಅಲ್ಲಲ್ಲಿ ಸಿಮೆಂಟಿನಗಳಿಂದ ನೀರು ತೆಗೆದು ಭೂಮಿಯ ಸಾಗುವಳಿಗೆ ಅನುಕೂಲ ಮಾಡಿಕೊಡುವ ವಿಚಾರ ನಡೆದಿದೆ. ಸಾಹೇಬರು ಸರಕಾರಿ ರೀತಿಯಾಗಿ ನಡೆದ ವಿಚಾರವನ್ನು ಶಿಷ್ಟ ಮಂಡಳಕ್ಕೆ ತಿಳಿಸಿದರು.

ಮುಂಬಯಿಯ ಕೂಡ ಪಂಜಾಬದ ಮೇಕಾಟ.
ಕನ್ನಡಿಗರಿಗೆ ಉಪಯುಕ್ತ ಸೂಚನೆ.

ಮುಂಬಯಿಯಲ್ಲಿರುವ ಗಿರಣಿಗಳು ಉತ್ತರ ಹಿಂದುಸ್ಥಾನಕ್ಕೆ ಅರಿವೆಯನ್ನು ಪೂರೈಸುತ್ತವೆ. ಮುಂಬಯಿಯು ಹಿಂದುಸ್ಥಾನದಲ್ಲಿ ಮಾಂಚೆಸ್ಟರವಾಗಿದೆ. ಈ ಪ್ರಕಾರ ಅದಕ್ಕೆ ಜನ್ಮಸಿದ್ಧ ಹಕ್ಕು ಉಂಟಾಗಲಿಕ್ಕೆ ಯಾವ ಕಾರಣವೂ ಇರುವದಿಲ್ಲ. ಪಂಜಾಬದಲ್ಲಿ ನೀರಿನ ಸಮೃದ್ಧಿಯುಂಟು. ಹತ್ತಿಯು ಬೆಳೆಯುವದು. ಅಂದುಒಳಿಕ ಮುಂಬಯಿಯ ತನಕ ಅರಳಿ ಕಳಿಸಿ, ಅಲ್ಲಿ ಒಟ್ಟೆ ಮಾಡಿಸಿ ಅಡಸ್ಸು ಪುನಃ ಅಮೃತಸರದ ಪದಿಮೂಲಿಗೆ ತಂದು, ಕೊಳ್ಳುವದೇಕೆ? ಪಂಜಾಬದಲ್ಲಿಯೇ ಗಿರಣಿಗಳನ್ನು ಕಟ್ಟಬೇಕು. ಕೈನೂಲು, ಕೈಮಗ್ಗದ ಕಾರಖಾನೆಗಳನ್ನು ಬೆಳೆಸಬೇಕು. ಫ್ಲಾಯಶೆಟಲ ಮತ್ತು ಇಂಜನದ ಶಕ್ತಿಯ ಮಗ್ಗಗಳನ್ನು ಹಾಕಬೇಕೆಂಬ ಜಳವಳಿಯು ನಡದಿದೆ. ಇದಕ್ಕೆ ಸರಕಾರದ ಬೆಂಬಲವಿರುವದೊಂದು ವಿಶೇಷವು.

ಮುಂಬಯಿ ಕರ್ನಾಟಕದಲ್ಲಿಯೂ ಬೇಕಾದಷ್ಟು ಹತ್ತಿ ಬೆಳೆಯುತ್ತದೆ. ಕರ್ನಾಟಕದ ದುರ್ದೈವವು ಏಕಂದರೆ- ಭೇಕಾದಷ್ಟು ಗಿರಣಿಗಳು ಇಲ್ಲವೇ ಇಲ್ಲ. ಗೋಕಾವಿ, ಹುಬ್ಬಳ್ಳಿ ಮತ್ತು ಗದಗ ಸೇರಿ ಮೂರೇ ಗಿರಣಿಗಳುಂಟು. ನೇಯಕಾರರ ಸಂಖ್ಯೆಯಂತೂ ಎಷ್ಟೂ ಕಡಿಮೆ ಇಲ್ಲ. ಆದರೂ ಮುಂಬಯಿ ಮತ್ತು ವಿಲಾಯತಿಯ ಸನಗು ಕೋಟಿ ಸಂಖ್ಯೆಯಿಂದ ಸಾವಿರಾರು ಅಂಗಡಿಗಳಲ್ಲಿ ಮಾರುತ್ತಿರುವರು. ಇದು ಕರ್ನಾಟಕದ ಉದ್ದಿಮೆದಾರರಿಗೆ ಅತ್ಯಂತ ನಾಚಿಕೆಯ ಮಾತು.

ಕರ್ನಾಟಕದ ಶ್ರೀಮಂತರೂ, ಜವಳಿಯ ವರ್ತಕರೂ, ಸಾಹುಕಾರರೂ ಬ್ರಾಹ್ಮಣ- ಬ್ರಾಹ್ಮಣೇತರವೆಂಬ ಮನಃಕ್ಲೇಶವಾಗುವ ಕಲಹದಲ್ಲಿ ತೊಡಗದೆ, ಗಿರಣಿ, ಕಾರಖಾನೆ, ರಾಟೆಯು ಉದ್ಯೋಗದಲ್ಲಿ ಮನಸ್ಸು ಹಾಕಿದರೆ- ಮುಂಬಯಿ, ಅಹಮದಾಬಾದಿನಂತೆ ಕರ್ನಾಟಕದಲ್ಲಿ ಉದ್ಯೋಗಾಧಿವೃದ್ಧಿಯಾಗಿ, ಸ್ವತಂತ್ರ ಸ್ಥಾಪತ್ತು ಹೆಚ್ಚುವದಲ್ಲದೆ, ಲಕ್ಷಾವಧಿ ಬಡಜನರ ಪೋಷಣೆಮಾಡುವ ಪುಣ್ಯವೂ ಲಭಿಸುವದು.

ಮುಂಬಯಿಯಲ್ಲಿ ಜವಾನದ ಒಂದು ಹುದಗಕ್ಕೆ ಬೆಂಕಿ ಹತ್ತಿ, ಅದರಲ್ಲಿದ್ದ ೮೦೦ ಅರಳೆಯ ಅಂಡಿಗೆಗಳು ಸುಟ್ಟು ಹತ್ತು ಲಕ್ಷದ ಹಾನಿಯಾಯಿತು.

ಅಮೇರಿಕೆ ಮತ್ತು ಮೆಕ್ಸಿಕೋ ದೇಶಗಳಿಗೆ ಬಂದ ಸಂಕ್ರಾಂತಿಯು.

—೦೦೦—

ಆಶಿಯಾ ಖಂಡದಲ್ಲಿ ಚೀನದೇಶದಲ್ಲಿ ಯುರೋಪಿಯನ್ನರ ಮೇಲೆ ಸಂಕ್ರಾಂತಿಯ ದೃಷ್ಟಿ ಬಿದ್ದಂತೆ ಅಮೇರಿಕೆ ಮತ್ತು ಮೆಕ್ಸಿಕೋ ದೇಶಗಳ ಮೇಳೆಯೂ ದೃಷ್ಟಿ ಬಿದ್ದಿರುತ್ತವೆ ಅಲ್ಲಿರುವ ನಿಕಾರಾಗೋವಾ ಎಂಬ ಪ್ರಾಂತದಲ್ಲಿ ಬೊಲ್ಸೆವಿಕ ಭೂತ ಸಂಚಾರವಾಗಿದ್ದು, ಈ ಭೂತವು ಬರಬರುತ್ತಾ ಅಮೇರಿಕೆಯ ಎದೆಯ ಮೇಲೆ ಕೂಡುವದೆಂದು ಅಮೇರಿಕಾ ಸರಕಾರಕ್ಕೆ ಭಯವುಂಟಾಗಿದೆ. ಆ ಪ್ರಕಾರ ಅಧ್ಯಕ್ಷರಾದ ಮೆ. ಕಾಲಿಜ ಸಾಹೇಬರು ಭಾಷಣ ಮಾಡಿ, ಈ ಭೂತವನ್ನು ಓಡಿಸಬೇಕೆಂಬ ವಿಷಯದಲ್ಲಿ ಚಿಂತಾಕ್ರಾಂತರಾಗಿದ್ದಾರೆ. ಮೆಕ್ಸಿಕೋ ದೇಶದಲ್ಲಿ ಧರ್ಮ ವಿಷಯವಾದ ಯಾದವ ಕಲಹವುಂಟಾಗಿ, ರಕ್ತದ ಕಾಲಿವೆ ಹರಿಯುತ್ತಿರುವದು. ಪ್ರೊಟೆಸ್ಟಂಟ ಮತ್ತು ರೋಮನ ಕ್ಯಾಥಲಿಕ ಪಂಥಗಳಲ್ಲಿ ಕಲಹೋತ್ಪತ್ತಿಯಾಗಿರುತ್ತದೆ. ಜನಸಂಖ್ಯೆಯಿಂದ ರೋಮನಕ್ಯಾಥಲಿಕರೇ ಹೆಚ್ಚಿದ್ದರೂ, ಪ್ರೊಟೆಸ್ಟಂಟರು ಅಧಿಕಾರ ಪದಾರೂಢರಾಗಿದ್ದಾರೆ ಅದುದರಿಂದ ಇವರು ರೋಮನಕ್ಯಾಥಲಿಕರನ್ನು ಪದಪದಿಯಿಂದ ಪೀಡಿಸಿ, ಅವರನ್ನು ಹೊಸಿಗುತ್ತಿದ್ದಾರೆ. ಇವರ ಮುಖ್ಯ ಧರ್ಮಾಚಾರ್ಯರಾದ ಬಿಶಪ್ಪರನ್ನು ಹಿಡಿದು, ದೇಶಾಂತರ, ದ್ವೀಪಾಂತರಕ್ಕೆ ಕಳಿಸುತ್ತಿದ್ದಾರೆ. ಈ ಪ್ರಕಾರವಿರುವ ಧರ್ಮ ಕಲಹದಲ್ಲಿ ಕುಲಭೇದವೂ ಉಂಟು. ವಿಲಾಯತಿಯಲ್ಲಿ ಲಾಟಿನರೂ, ಸಾಕ್ಸನರೂ ಎಂಬ ಜನಾಂಗ ಭೇದವುಂಟು. ನಿಕಾರಾಗೋವಾ ಮತ್ತು ಮೆಕ್ಸಿಕೋದಲ್ಲಿರುವ ಲಾಟಿನ ಜನಾಂಗವಾಸಿಗಳು ಸೇರಿ ಸಾಕ್ಸನರಾದ ತಮ್ಮನ್ನು ವಾತಾವಳಕ್ಕೆ ಒತ್ತಬೇಕೆಂದು ಸಂಚು ಮಾಡಿದ್ದಾರೆಂದೂ ಅಮೇರಿಕೆಯವರು ಅಡಿಕೊಳ್ಳುವರು. ಇಂಗ್ಲಿಷರೂ ಸಾಕ್ಸನ ಕುಲಕ್ಕೆ ಸೇರಿದವರು.

ಬಲೂಚಿಸ್ಥಾನದ ಖಾನಸಾಹೇಬರು ತಮ್ಮ ರಾಜ್ಯದಲ್ಲಿದ್ದ ಗುಲಾಮಗಿರಿಯನ್ನು ತೆಗೆದುಹಾಕಿದರು. ಸ್ತ್ರೀಯರನ್ನು ಕ್ರಾಸಿಯಲ್ಲಿಡುವ ಪುರಾತನ ಕಾಲದಿಂದ ನಡೆದು ಬಂದ ಪದ್ಧತಿಯನ್ನು ಒಂದಾಯಿತು.

ಮದ್ರಾಸಿನ ಹಿಂದೂ ದೇವಸ್ಥಾನಗಳ ಧರ್ಮಾದಾಯ ಭಿನ್ನಿಗೆ ಈಗಿನ ಸ್ವರೂಪದಲ್ಲಿ ಆರ್ಡರ ಆಯವರ್ನಿನ್ಸಸಾಹೇಬರು ಒಪ್ಪಿಗೆ ಕೊಡುವದಿಲ್ಲೆಂದು ಪ್ರಸಿದ್ಧವಾಗಿದೆ. ಲೋಕಮತದ ವಿಜಯವೇ ಸರಿ.

ಅಬ್ದುಲ ರಸೀದನ ಹುಚ್ಚನ ಸೋಗು.

—೦—

ಅಬ್ದುಲ ರಸೀದನು ಹುಚ್ಚನ ಸೋಗು ಹಾಕಿದ್ದಾನೆಯೇ; ಜವಾಬಿಗಾಗಿ ಆಬ್ಬರು ಸಿಪಾಯರು ಈತನನ್ನು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದ ಬಳಿಕ ಪ್ರಾಸೀಕ್ಯೂಟಿಂಗ ಇನಸ್ಪೆಕ್ಟರರು ಮಾಡಿದ ಪ್ರಶ್ನೆ—

ನಿನ್ನ ಹೆಸರೇನು? ಆರೋಪಿಯು ಉತ್ತರ ಕೊಡದೆ ಪಿರಿ ಪಿರಿ ಇವರನ್ನು ನೋಡಿದನು.

ಆಗ ಇನ್ಸಪೇಕ್ಟರರು- ಈತನು ಹುಚ್ಚನಂತೆ ನಟಿಸುತ್ತಿದ್ದಾನೆ. ಇವರಂತೆ ಮ್ಯಾಜಿಸ್ಟ್ರೇಟರೂ ನಿನ್ನ ಹೆಸರೇನೆಂದು ಕೇಳಿದರೂ ರಸೀದನು ಉತ್ತರ ಕೊಡಲಿಲ್ಲ.

ಮ್ಯಾಜಿ- ಈತನೇನು ಕಿವುಡನೇ?

ಆರೋಪಿ ವಕೀಲ- ಈತನು ಹುಚ್ಚನಿದ್ದಾನೆ

ಪುನಃ ಇನ್ಸಪೇಕ್ಟರ- ಈತನು ಹುಚ್ಚನಿಲ್ಲ. ಹುಚ್ಚನ ಸೋಗು ಹಾಕಿದ್ದಾನೆ. ನಮ್ಮನ್ನೆ ಮಾತ್ರ ಶ್ರ ಶಾದ್ದಾನೆ. ಇವರ ಹೊರತು ಜಯರ್ಾವೆಲ್ಲ ಸರ್ವಸಾಧಾರಣ ಮನುಷ್ಯಸಂತೆಯೇ ಉಂಟು.

ಮ್ಯಾಜಿಸ್ಟ್ರೇಟರು ಆರೋಪಿಯನ್ನು ಸೆಶನ ಕಮಿಟ ಮಾಡಿದರು.

ವಿವಿಧ ವರ್ತಮಾನಗಳು

—೦—

ಜರ್ಮನಿಯಲ್ಲಿ ವಿಜೇತ್ವರವೆಂಬ ಪಂಥದವರು ಇನ್ನೂ ಕೇಸರಿ ಭಕ್ತರಾಗಿದ್ದಾರೆ. ಇವರ ಸಂಖ್ಯೆ ಒಂದು ಲಕ್ಷವುಂಟು. ಇವರು ಸ್ವದೇಶದ ಪ್ರಭಾಸತ್ತಾತ್ಮಕ ರಾಜ್ಯವನ್ನು ಇಂದಿಗೂ ಒಪ್ಪಿಲ್ಲ. ಇವರಿಗೂ ಬೇರೆ ರಾಷ್ಟ್ರೀಯರಿಗೂ ಒಡಂಬಡಿಕೆ ಮಾಡಿಸಬೇಕೆಂದು ಜನರಲ ಹಿಂಡನಬರ್ಗರು ಮಾಡುತ್ತಿರುವ ಪ್ರಯತ್ನವು ಹೊಳೆಯಲ್ಲಿ ಹೋಮ ಮಾಡುವಂತಾಗುತ್ತಲಿದೆ.

———

ಬೆಳಗಾವ ಮ್ಯುನಿಸಿಪಾಲಿಟಿಯ ಉತ್ಪನ್ನವು ೧,೮೬,೪೦೦ ಮತ್ತು ವೆಚ್ಚವು ೧,೮೨,೫೫೦ ರೂಪಾಯಿಯಾಗಿರುತ್ತದೆ.

———

ವೈಸೂರ ಇಲಾಖೆಯಲ್ಲಿ ಶಿವಮೊಗ್ಗೆಯಿಂದ ಅರಸಲಿನ ತನಕ ಮಲ್ಲಾಡದಲ್ಲಿ ರೇಲ್ವೆ ಹಾಕುವರು.

———

ಜಿ. ಆರ್. ಪಿ. ರೇಲ್ವೆಯವರು ಒಂದು ಕೋಟಿ ರೂಪಾಯಿ ವೆಚ್ಚ ಮಾಡಿ, ಕಲ್ಯಾಣದಲ್ಲಿ ವಿದ್ಯುತ್ತಿನ ಕಾಂಪೌನ್ಡ ಕಟ್ಟುವರು.

———

ಕುಡಪಲಿಯಲ್ಲಿ ಶಿಕ್ಷಕರ ಸಮ್ಮೇಲನ.

ರಾಣೇಬಿನ್ನೂರ ತಾಲೂಕ ಕುಡಪಲಿಯಲ್ಲಿ ರಾಣೇಬಿನ್ನೂರ ಮತ್ತು ಹಿರೇಕೆರೂರ ತಾಲೂಕಿನ ಶಿಕ್ಷಕರ ಸಮ್ಮೇಲನ ಕೂಡಿತ್ತು. ರಾ. ಬ. ವೆಂಕಣ್ಣನಾಯಿಕರು ಅಧ್ಯಕ್ಷರಾಗಿದ್ದರು. ಈ ಕಾರ್ಯಕ್ಕಾಗಿ ಡ್ರಾಯಿಂಗ ಕಲಾ ನಿಪುಣರಾದ ಮಿ. ಕರೇಗೌಡರ ಇವರ ವ್ಯವಸ್ಥೆಯಲ್ಲಿ ಭವ್ಯ ಮಂಟಪ ಹಾಕಲ್ಪಟ್ಟಿತು. ಪರಿಷತ್ತಿಗೆ ಒಂದು ನೂರು ಜನ ಶಿಕ್ಷಕರು ಸೇರಿದ್ದರು. ಅಧ್ಯಕ್ಷರಾದ ರಾ. ಬ. ನಾಯಿಕರನ್ನು ಬ್ಯಾಂಡ ಮೇಳದವಾದ್ಯಗಳಿಂದ ಎದುರುಗೊಂಡು ಬಹು ಸಮಾರಂಭದಿಂದ ಅವರನ್ನು ಸಭಾಸ್ಥಾನಕ್ಕೆ ಕರಕೊಂಡು ಬಂದರು ಇದೇ ಸಮಯದಲ್ಲಿ ಶ್ರೀ ವೀರಮಪೇಶ್ವರರ ಜಾತ್ರೆ ಇದ್ದು, ಜಾತ್ರೆಗಾಗಿ ಸಾವಿರಾರು ಜನರು ಕೂಡಿದ್ದರು. ಅನೇಕ ಸುಶಿಕ್ಷಿತರು ಪರಿಷತ್ತಿಗೆ ಬಂದಿದ್ದರಿಂದ, ಪರಿಷತ್ತಿಗೆ ವಿಶೇಷ ಶೋಭೆ ಒಂಹು. ವಿದ್ಯಾರ್ಥಿಗಳು ಬಾಲಜನಮನದ ಧರ್ತಿ ಪ್ರಕಾರ ಚಾಕ್ರಿ ಮತ್ತು ಸಭೆಯಲ್ಲಿ ಸುಸ್ತು ಕಾಯ್ದುಕೊಂಡು, ಕೆಲಸ ಮಾಡಿದರು. ವಿದ್ಯಾರ್ಥಿಗಳು ಅಧ್ಯಕ್ಷ ಮೊದಲಾದ ಅತಿಥಿ ಅಭ್ಯಾಗತರ ಸ್ವಾಗತವನ್ನು ಮಂಜುಳವಾದ ಪದಪದ್ಯಗಳಿಂದ ಮಾಡಿದ ಬಳಿಕ, ಹೆಡ್ಡ ಮಾಸ್ತರರಾದ ಸಿ. ಕುಲಕರ್ಣಿಯವರು ಸಭಿಕರ ಹಾಗು ಪ್ರೇಕ್ಷಕರ ಸ್ವಾಗತದ ಭಾಷಣ ಮಾಡಿದರು. ಅಧ್ಯಕ್ಷರು ಕುಡುಪಲಿಯ ಶೈತರಿದ್ದಾರೆ. ಈ ಊರು ಪೈತನಾಗಿರುವದರಿಂದ ಇಲ್ಲಿ ತಮ್ಮೆಲ್ಲರ ಅನುಮತಿಯಿಂದ ಕೆಲಸ ಮಾಡಲು ತಮಗ ಆನಂದವಾಗುತ್ತದೆಂದು ಅಧ್ಯಕ್ಷರು ವ್ಯಾಸಾತ್ಮಕ ಭಾಷಣ ಮಾಡಿ, ಸಭೆಯ ಕೆಲಸವನ್ನ ವ್ಯಾರಂಭಿಸಿದರು. ಬಳಿಕ ಆ॥ ಡಿಪುಟೆಯಸರಾದ ಮಿ. ಕಲಿವಾಳರು ಕುಡುಪಲಿಯು ಸಣ್ಣ ಪಳ್ಳಿಯಾವರೂ, ಸಮ್ಮೇಲನ ಕೂಡಿಸಿದ್ದಕ್ಕಾಗಿ ಮಾಸ್ತರರ ಹಾಗು ಇದಕ್ಕೆ ಸಹಾಯ ಮಾಡಿದ ಗ್ರಾಮವಾಸಿಗಳ ಅಭಿನಂದನ ಮಾಡಿದರು. ಶಿಕ್ಷಕರು ಇಬ್ಬರೇ ಇದ್ದರೂ, ಎಳೂ ಇಯತ್ತೆಗಳನ್ನಿಟ್ಟು ಪ್ರಾಥಮಿಕ ಶಿಕ್ಷಣವನ್ನು ಪೂರ್ಣವಾಗಿ ಕೊಡುವದನ್ನು ನೋಡಿ, ಅನಂದವಟ್ಟರು. ಈ ಊರಿನಿಯ ವಿದ್ಯಾರ್ಥಿಗಳು ಮುಷ್ಠಿ ಧಾನ್ಯ ಕೂಡಿಸಿ, ಶಾಲೆಗೆ ಬೇಕಾಗುವ ಉಪಕರಣಗಳನ್ನು ಕೊಂಡಿರುತ್ತಾರೆ. ಇವರ ಅನುಕರಣವನ್ನು ಬೇರೆ ಊರುಗಳ ವಿದ್ಯಾರ್ಥಿಗಳು ಅವಶ್ಯ ಮಾಡುವಂತಾಗುವುದು. ಕುಡುಪಲಿಯ ಶಿಕ್ಷಕರು ನಾಲ್ಕು ವರ್ಗಗಳನ್ನು ಏಳ ಕಾಲಕ್ಕೆ ಕಲಿಸುವದನ್ನು ಬಾಯಿಲೆಕ್ಕ ಕಲಿಸುವದನ್ನೂ ತೋರಿಸಿದರು. ಬಳಿಕ ಪೆನಕರ ಶಿಕ್ಷಕರಾದ ಮಿ. ಗುರುಕಾಚಾರ್ಯ ಕುಂಡೂರರವರು ಮತ್ತು ಕೋಡದ ಮಾಮುಲೆದಾರಸಾಹೇಬರು ಸಮಯೋಚಿತ ಭಾಷಣ ಮಾಡಿದರು. ಸಭೆಯ ಕೆಲಸ ಮುಗಿದ ಬಳಿಕ, ಫೋಟೋ ತೆಗೆಯಲ್ಪಟ್ಟಿತು. ವಿದ್ಯಾರ್ಥಿಗಳ ಕವಾಯಿತು ಮತ್ತು ತಿಳಿಯ ಆಟಗಳಾದವು. ರಾತ್ರಿಯಲ್ಲಿ ವಿದ್ಯಾರ್ಥಿಗಳು ಸ್ವಾಮಿನಿಷ್ಠೆ ಎಂಬ ಆಖ್ಯಾನ ಮಾಡಿ, ಸಭಿಕರನ್ನು ಆನಂದಗೊಳಿಸಿದರು, ಮಿ. ಕರೇಗೌಡರೇ ಮೊದಲಾಗಿ ಊರ ಜನರೂ, ಶಾಲೆಯ ಪಂಜರೂ, ದೊಡ್ಡ ದೊಡ್ಡ ರೈತರೂ ಈ ಕಾರ್ಯಕ್ಕಾಗಿ ಸಹಾಯ ಮಾಡಿದ್ದು, ಅವರಿಗೆ ಭೂಷಣವಾಗಿರುತ್ತದೆ.

ಒಬ್ಬ ಪ್ರೇಕ್ಷಕ.

———

ಧಾರವಾಡ—

ಇಲ್ಲಿಯ ಮ್ಯುನಿಸಿಪಾಲಿಟಿಯ ಜುನಾವಣೆಯು ಆರು ತಿಂಗಳು ಮುಂದೆ ಬಿತ್ತೆಂದು ನಾವು ಬರೆದುದಕ್ಕೆ ಪೂರಾ ಆಧಾರವಿಲ್ಲ. ಇದೇ ವಿಷಯವಾಗಿ ಮೆ ಪ್ರೆಸಿಡೆಂಟಸಾಹೇಬರು ಪತ್ರವ್ಯವಹಾರ ನಡಿಸಿದ್ದಾರೆ ಸರಕಾರದಿಂದ ಬೇಗನೆ ಸಮಾಧಾನಕಾರಕವಾದ ಉತ್ತರ ಒಂದರೆ- ಜುನಾವಣೆಯು ಈ ಸೊಗಲು ನೇಮಿಸಿದ ತಾರೀಖಿಗೆ ಆಗುವದು. ಅದನ್ನು ಲಕ್ಷ್ಯದಲ್ಲಿಟ್ಟುಕೊಂಡು, ಜುನಾವಣೆಯ ಕೆಲಸವನ್ನು ಕಾರ್ಯಕ್ರಮ ಪ್ರಕಾರ ಮಾಡುತ್ತಲಿದ್ದಾರೆ.

ರಾಜಾರವಿವರ್ಮರ ಚಿತ್ರಗಳ ಕಾಂಪೌನೆಯೆ ಮಾಲೀಕರಾದ ಮುಂಬಯಿಯ ಮೆ ಸರ್ಸ ಎ. ಪಿ ಜೋಷಿಯವರು ೧೯೦೩ ನೆಯ ಇಸವಿಯ ಕ್ಯಾಲಂಡರವನ್ನು ವಿಜಯಾಕ್ಕಾಗಿ ಕಾಣಿಕೆ ಕಳಿಸಿದ್ದನ್ನು ಆಭಾರಪೂರ್ವಕ ಸ್ವೀಕಾರ ಮಾಡಿದ್ದೇವೆ. ಮಧ್ಯದಲ್ಲಿರುವ ರಾಧಾ-ಕೃಷ್ಣರ ಚಿತ್ರವು ರವಿವರ್ಮರ ಕೀರ್ತಿಗೆ ಒಪ್ಪುವಂತೆ ಮನೋಹರವಾಗಿದ್ದು, ಇದನ್ನು ಪ್ರತಿಯೊಬ್ಬನು ಸಂಗ್ರಹಿಸುವಂತಿರುತ್ತದೆ.

ಇಲ್ಲಿಯ ಟ್ರೇನಿಂಗ ಕಾಲೇಜಿನ ವ್ಯಾಕ್ಟಿಸಿಂಗ ಸ್ಕೂಲಿನ ಹೆಡ್ಡ ಮಾಸ್ತರರಾದ ಶ್ರೀ. ಕುಡಿಯವರು ರಚಿಸಿದ ಪದ್ಮಿನಿ ಎಂಬ ಪುಸ್ತಕವು ಅಭಿನವ್ಯಾಯಕ್ಕಾಗಿ ಒಂದಿಯುತ್ತದೆ. ಮದ್ರಾಸ ವಿಶ್ವವಿದ್ಯಾಲಯದವರು ಇಂಟರ ಪರೀಕ್ಷೆಗೂ, ಮುಂಬಯಿಯ ಯುನಿವರ್ಸಿಟಿಯವರು ಹಾಯಸ್ಕೂಲುಗಳಲ್ಲಿಯೂ ಪಠ್ಯಪುಸ್ತಕವಾಗಿ ಮಂಜೂರ ಮಾಡಿದ್ದಾರೆ ಆದ್ದರಿಂದ ಇವರ ಬಗ್ಗೆ ವಿಜಯಕ್ಕೆ ತನ್ನ ಅಭಿಪ್ರಾಯ ಬರೆಯುವ ಅಗತ್ಯವೇ ಉಳಿದಿಲ್ಲ. ಇದು ಸಾಲ್ಯ ನೆಯ ಪುಟದ್ರಣವಾಗಿರುವದೊಂದೇ ಸಂಗತಿಯಿಂದ ಇವರ ಪೋಪ್ರೀತಿಯು ತಾನಾಗಿ ವಿದಿತವಾಗುತ್ತದೆ ಬೆಲೆ ೧೭ ಆಣೆ. ಧಾರವಾಡ ಶ್ರೀ. ಸರಸ್ವತೀಪುಂದಿರನಲ್ಲಿ ದೊರೆಯುವದು.

ಜಾಹೀರ ನೋಟೀಸು

ಳಗಿನ ಹೆಬ್ಬಟ್ಟಿನ ಗುರ್ತ ಮಾಡುವಂಥಾ ಸಂಕವ್ವಾ ಕೋಮ ಈರವ್ವಾ ಯಳ್ಳೂರ ಸಾ|| ಸಿಗ್ಗಾವಿ ತಾಲೀವಸ್ತು ಕುಂಕೂರ ಈಕಯು ಜಾಹೀರ ನೋಟೀಸಿನಿಂದ ಪ್ರಸಿದ್ಧ ಮಾಡುವದೇನಂದರೆ-

ನಾನು ವಿಜಯ ವರ್ತಮಾನ ಪತ್ರದಲ್ಲಿ ೮-೧೧-೨೫ ನೇ ತಾರೀಪಿನ ದಿವಸ ಒಂದು ನೋಟೀಸು ಪ್ರಸಿದ್ಧ ಮಾಡಿದೆ. ಮತ್ತು ಅದನ್ನು ನನ್ನ ಗಂಡನ ಹೆಸರ್ಲೆ ರಚಿಸ್ಟರ ಮಾಡಿಸಿ ಗೈರ ಹಾಜರ ಎಂದು ಏನಕಾಂ ಆಗಿ ಬಂದಿರುತ್ತಿನಿ ಆಗಿನಿಂದ ಈವತ್ತಿನ ತನಕ ನನ್ನ ಗಂಡನನ್ನು ತವಾಸ ಮಾಡಿದೆ ಅವನು ಇಂಥ ಊರಲ್ಲಿ ಇರುವನೆಂದು ಪತ್ತೆ ಹತ್ತಲಿಲ್ಲ ಒಮ್ಮೊಮ್ಮೆ ಸಿಗ್ಗಾವಿಯಲ್ಲಿ ಇರತಾನೆ ಒಮ್ಮೊಮ್ಮೆ ಇರುವದಿಲ್ಲ ಅಂತ ತೀರ್ಮಾನು ಸ್ವತಃ ನಾನು ತವಾಸ ಮಾಡಲಿಕ್ಕೆ ಹೋದಾಗ್ಗೆ ಇದ್ದಿಲ್ಲ ಆದ್ದರಿಂದ ಈ ಜಾಹೀರ ನೋಟೀಸು ಕೊಡುವ ಭಾಗ ಬಿತ್ತು ಈ ನೋಟೀಸಿನಿಂದ ಸದ್ರಿ ನನ್ನ ಗಂಡನಾದ ಈರವ್ವಾ ತಂದಿ ನೀಲವ್ವಾ ಯಳ್ಳೂರ ಊತನು ತಾನು ಎಲ್ಲಿದ್ದರೂ ಬಂದು ನಾನು ಮೊದಲಿನ ನೋಟೀಸಿನಲ್ಲಿ ಬರೆದ ಕರ್ತು ಪೂರಾ ಮಾಡಿ ನನ್ನ ದಾಗೀನೆ ನೆನಗೆ ಕೊಟ್ಟು ನನ್ನನ್ನು ಕರಕೊಂಬು ಹೋಗಬೇಕು ಇಲ್ಲದಿದ್ದರೆ ಆತನು ನನ್ನ ಕೂಡ ಪ್ರಪಂಚ ಮಾಡಲಿಕ್ಕೆ ಕಬೂಲ ಇಲ್ಲ ಅಂತ ತಿಳಕೊಂಡು ನಾನು ಎರಡನೆಯವನನ್ನು ಉಡಿಕಿ ಮಾಡಿಕೊಳ್ಳುವೆನು ಅನಂತರ ಆತನ ಹಕ್ಕು ಯಾವ ರೀತಿಯಿಂದಲೂ ನನ್ನ ಮೇಲೆ ಮತ್ತು ನನ್ನ ಉಡಿಕಿ ಗಂಡನ ಮೇಲೆ ನಡಿಯಲಾರದು ನಾನು ಈ ನೇಂತರ ಮಾಡಿಕೊಳ್ಳುವ ಉಡಿಕಿ ಗಂಡನಿಗೆ ಕಾಯದೆದಿಂದ ಯಾವದೇ ತರದಿಂದ ಧಕ್ಕಿ ಬಡಿಯಬಾರದೆಂದು ಆತನ ಹಿತದ ದೆಸೆಯಿಂದ ಸಾರ್ವಜನಿಕವಾದ ಈ ನೋಟೀಸ ಜಾಹೀರ ಮಾಡಿರತೇನೆ ತಿಳಯುವದು ತಾ| ೧೩-೧೧-೧೯೨೫ ನೇ ಇಸ್ವಿ

ಈ ಎಡಗ್ಯೆ ಹೆಬ್ಬಟ್ಟಿನ ಗುರ್ತ ಸಂಕವ್ವಾ ಕೋಮ ಈರವ್ವಾ ಯಳ್ಳೂರ ಹಾಲಿವಸ್ತು ಕುಂಕೂರ ಈಕಿ ಕೈದು ಅದೆ

ವಿಜಯ ಪುಸ್ತಕಾಲಯ

೨೦ ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂತಯ	೫೦
ಲೋ. ಟಿಳಕರ ಚರಿತ್ರ	೯೦
ಬೇತಬಂಧು ದಾಸರ-ಚರಿತ್ರ	೨೦
ದೇಶಭಕ್ತರ ಸಂದೇಶಗಳು	೧೯

ಈ ಪುಸ್ತಕವನ್ನು ಒಪ್ಪಾಗಿ ಕೊಳ್ಳುವವರಿಗೆ ರೂಪಾಯಿ ಕೊಡುವೆವು ಹ್ವಿ. ಪಿ. ಮತ್ತು ಟಪಾಲ ಖರ್ಚು ದೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ಮದ್ರಾಸ ಕೌನ್ಸಿಲದ ಲೋಕನಿಯುಕ್ತ ಮೆಂಬರರಾದ ಡಾಕ್ಟರ ಮುಲ್ಲಯ್ಯನವರಿಂದ
ಪರಿಶೋಧಿಸಲ್ಪಟ್ಟ
ಮೆಸರ್ಸ ಪಿ. ವ್ಹಿ. ರಾಜನ ಕಂಪನಿಯ

ಸುಗಂಧ ನಶ್ಯದ ಪುಡಿಯು.

ಪ್ರಖ್ಯಾತಿ ಹೊಂದಿದ ಈ ನಶ್ಯದ ಪುಡಿಯು ಅಮೂಲ್ಯವಾದದ್ದಿದ್ದು ಲಕ್ಷಾವಧಿ ಜನರು ಇದರ ಉಪಯೋಗ ಮಾಡಿದ್ದಾರೆ. ಇದರ ಗುಣದ ಬಗ್ಗೆ ಸಾವಿರಾರು ಒನರು ಸರ್ಟೀಫಿಕೇಟುಗಳನ್ನು ಕೊಟ್ಟಿದ್ದಾರೆ. ಈ ಪುಡಿಯ ಉಪಯೋಗದಿಂದ ಗುಣವಾಗುವ ವ್ಯಾಧಿಗಳು:— ಪಿನಸಿ, ಅರತಲೆನೋವು, ತಲೆಯಲ್ಲಾಗುವ ಬೇರೆ ವಿಕಾರಗಳು ಕಣ್ಣುಗಳಲ್ಲುಂಟಾಗುವ ಎಲ್ಲಾ ವ್ಯಾಧಿಗಳು ದೂರಾಗಿ ಸ್ಮರಣ ಶಕ್ತಿಯು ಹೆಚ್ಚುತ್ತದೆ. ಬೇರೆ ನಶ್ಯದಲ್ಲಿ ಈ ನಶ್ಯದ ಒಂದು ಚಟಿಕೆಯನ್ನು ಕೂಡಿಸಿದರೆ ಎಲ್ಲವೂ ಸುಗಂಧವಾಗುವದು. ಮಾದರಿ ತಿಕೆ ಉಚಿತವಾಗಿ ದೊರೆಯುವದು.

ಸಾದಾ ಮದ್ರಾಸ ನಸ್ಯ ೧೨೦ ತೊ ಏಸಿ ಒಂದಕ್ಕೆ ನಂಬರ ೧ ೪-೦-೦
,, ೨ ೩-೮-೦

ದರುವಿಟ್ಟು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ತಂತಿ ವಿಳಾಸ- ಧನ್ಯಮ | ಪಿ. ವ್ಹಿ. ರಾಜನ ಮತ್ತು ಕಂಪನಿ,
೪೪ ಗೋವಿಂದಪ್ಪ ನಾಯಕನ ಬೀದಿ ಜಾರ್ಜಟೌನು, ಮದ್ರಾಸ

ಶಿಕ್ಷಕರೇ! ಇತ್ತ ಲಕ್ಷಕೊಡಿರಿ
ವಿದ್ಯಾರ್ಥಿಗಳ ಪಾಲಕರೇ! ಇಗನ್ನು ಓದಿರಿ.

೨-೩-೪ ಹಾಗೂ ೫ ನೆಯ ಇಯತ್ತಿಗಳ
ಅಂದವಾದ ರೂಲಿನಿಂದ ಎಸೆವ
ಚಂದವಾದ ಕನ್ನಡಿನಿಂದ ಒಪ್ಪುವ
ಸುಂದರವಾದ ಕಾಪೀಬುಕ್ಕುಗಳು ನಮ್ಮಲ್ಲಿ ಸಿಗುವವು
ಪ್ರತಿಯೊಂದು ಕಾಪಿಯು ಬುಕ್ಕಿಗೆ ಒಂದು ಆಕ.
ಶೋಕು ಕೊಳ್ಳುವವರಿಗೆ ವಿಶೇಷ ಸವಲತ್ತು ಕೊಡುವೆವು
ಬದಾಣೆಯ ಮೋಷ್ಟ ಟಿಕೀಟುಗಳನ್ನು ಕಳುಹಿಸಲ್ಲಿ
ಪ್ರತಿಯೊಂದು ಇಯತ್ತಿಗೆ ಒಂದರಂತೆ
ಪಾಲ್ಯು ಕಾಪಿಗಳನ್ನು ನಮೂನೆಗೆ ಕಳುಹಿಸುವೆವು.
ಕಾಪಿಯ ಬುಕ್ಕುಗಳಲ್ಲವೆ ನಮ್ಮಲ್ಲಿ
ಇ. ಜು. ಬೆನ್ನೂರ ಕಿರಾಣಿ ಮರ್ಚಂಟ್ಸ, ಕಲಘಟಗಿ
ಇವರ ಎಸ್ಸರಸಾಯಿಜ, ಕೆಂಪು ನೀಲೀ ಮಸೀ ಚೀಟುಗಳು
ಯೋಗ್ಯದರದಿಂದ ದೊರೆಯುವವು.
ವಿಶೇಷ ಮಾಹಿತಿಗಾಗಿ ಕೆಳಗಿನ ಎರಡು ವಿಳಾಸಗಳಲ್ಲಿ
ಬೇಕಾದ ಒಂದು ವಿಳಾಸಕ್ಕೆ ಬರೆದುಕೊಳ್ಳಬಹುದು.
೧ ಅಜಬಜ್ಜಿ ಎಂಡ ಬ್ರದರ್ಸ ಕಲಘಟಗಿ,
೨ ವಿಜಯ ಆಫೀಸ ಧಾರವಾಡ

ಹಿಂದಾದಾರರಿಗೆ ಸೂಚನೆ.

ಜನೇವಾರಿ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಸಿ. ಸ್ವೀಕಾರ ಮಾಡಿ ವಿಜಯನನ್ನು ಪ್ರೋತ್ಸಾಹಿಸಬೇಕೆಂಬ ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ADVERTISEMENT

—೨೦೦—

THE CIVIL ENGINEERING SCHOOL. LUCKNOW.

Maintained & Managed by the Hindu Education Society. Registered under Act xxi of 1860)

Trains candidates for the Subordinate Engineering Services. The School has been highly recommended for Grant-in-aid, by Chief Engineer & Secretary, Irrigation Branch, P. W. D., U. P., & the Board of Industries, U. P. The Rules of Irrigation Branch U. P. also provide for the employment of successful students of the School. Apply for full particulars and prospectus to the Principal.

ಈ ಪತ್ರವನ್ನು ಅಣ್ಣಾಚಾರ್ಯ ಜಾಕಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರಿಕೆ — ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮। ಧಾರವಾಡ ಬುಧವಾರ ತಾರೀಖು ೧೯ನೇ ಜನೇವರಿ ೧೯೨೭ । ಸಂಚಿಕೆ ೧೫೫

ಕಿರ್ಲೋಸ್ಕರ ಕಬ್ಬಿನ ಗಾಣಗಳು.



ನೊನ್ನ ವುಕೆ ಪ್ರದರ್ಶನದಲ್ಲಿ ಈ ಕಮಾಲ ಗಾಣಕ್ಕೆ ಪದಕವು ದೊರೆತಿತ್ತೆ ಹೆಚ್ಚಿನ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ ಸಾತಾರಾ

ಮೂರು ಮೋಟಾರಗಳ ಮಾರಾಟ.

ತಿನರಲಿಟಿ ಮೋಟಾರ ಲಾರಿ ಹದಿನಾರು ಜನರು ಕೂಡ್ಯುನದು ಒಂದು, ೧೪ ಜನರು ಕೂಡ್ಯುನದು ಮತ್ತು, ಬೇಬಿಗೈಟ ಸ್ಪೈರಲೇಜ ಟೂರಿಂಗ ಕಾರ ಈ ಮೂರು ಮೋಟಾರಗಳನ್ನು ನೊರತಕ್ಕನುದ್ದೇವೆ. ಇವು ಉತ್ತಮ ಸ್ಥಿತಿಯಲ್ಲಿದ್ದು, ಸದ್ಯದಲ್ಲಿ ಸರ್ವಿಸದ ಲಿರುತ್ತವೆ. ಕೊಳ್ಳಲಿಚ್ಛಿಸುವವರು ಪರೀಕ್ಷೆ ಮಾಡಿ ಕೊಳ್ಳಬಹುದು. ಕ್ರಯ ಮುಂತಾದ್ದರ ಬಗ್ಗೆ ಸಮಕ್ಷವು ಅಗರ ನಮ್ಮ ಏಜಂಟರಾದ ಅಲ್ಲಾಬಕ್ಷ ಎ. ಹರಪನಹಳ್ಳಿ ವಾಚ ರಿಪೇರರ ಅಂಗಡಿಯಲರ ಹಾಲಗೆರಿ ಎದುರಿಗೆ ಧಾರವಾಡ ಇವರನ್ನು ವಿಚ್ಛಾಸಬೇಕು.

ಎ ವಾಯ ಧಸ್ಕರಿ ಕಿರ್ಲೋಸ್ಕರ
ಕಿರ್ಲೋಸ್ಕರ ಮೋಟಾರ ಸರ್ವಿಸ

ಸೂಚನೆ— ಮೂರೂ ಮೋಟಾರ ಕೊಗೊಂಡಲ್ಲಿ ಸೋವಿಯಾಗಬಹುದು

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಪಹು ಪಕ್ಷಗಳಿಗೆ ಒಂದು ರೂಪಾಯಿ ನುಂದೆ ಪ್ರತಿಯೊಂದು ಇಳಿಗೆ ಒಂದುವರಿ ಆಣೆ ಇಂಗ್ಲಿಷ ಸ್ಪೆಶಿಯೊಂದು ಒಳಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲಿ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜು ಕಾಯಂ ಚಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತಿಕ್ಕೆ ಪತ್ರವ್ಯವಹಾರ ಮಾಡಬಹುದು. ವ್ಯವಸ್ಥಾಪಕ

ವಿಜಯದ ವರ್ಗಣೀ ದರ

ನಿತ್ಯಪತ್ರಿಕೆ
೧೨ ತಿಂಗಳಿಗೆ ೧೨—೦—೦
೬ ,, ೬—೦—೦
೩ ,, ೩—೦—೦
ವಾರಪತ್ರಿಕೆ ೧ ವರ್ಷಕ್ಕೆ ೩—೦—೦
ಬೇರೆ ಯಾವುದೇ ಕೆಲಸಗಳ ವಿಚಾರಕ್ಕೆ
ವ್ಯವಸ್ಥಾಪಕ ವಿಜಯ, ಧಾರವಾಡ।

ವಿಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟಿಡ

ಮುಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಠಕ ಪ್ರಕಾರ ರಜಿಸ್ಟರ ಮಾಡಲ್ಪಟ್ಟದ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸಾನ.

ಹೊಂದಿಗೆಯು ಆರು ಲಕ್ಷದ ಮೇಲುಂಟು. ಚಕ ಮುಂತಿ ಮೆಂಬರಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಿಕೊಳ್ಳಬಹುದು. ಕ್ಷಾಮೀಮ ಮತ್ತು ದೇರೆ ತರದ ವಿಮಾಪಟಿಗಳಿಗೆ ಪಾವ್ಮಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ತಿಳಿಗೆ ಸಹೀ ಮಾಡಿದವರಿಂದ ತಿಳಿದುಕೊಳ್ಳಬೇಕು.

ಮಂಡ್ಯವರಾವ ಬಿ. ಜಕಾತಿ
ಮ್ಯಾನೆಜೆಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ಪಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ದಿವಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷ ತಿಳಿದುಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಪನ್ನರಡು ಆಣೆಯಂತಿರುತ್ತದೆ

ಎ. ಶಿ. ಶಟ್ಟಿ,
ಮ್ಯಾನೇಜೆಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೧೯-೧೧-೩೭ ನೇ ಇಸ್ವಿ

ಮಿ. ಶಕಲಾತವಾಲಾಸಾಹೇಬರ ಸ್ವಾಗತ.

ಮಿ. ಶಕಲಾತವಾಲಾಸಾಹೇಬರು ಕಳೆದ ಶುಕ್ರವಾರದ ದಿವಸ ಮುಂಬಯಿಗೆ ಬಂದರು. ಇವರು ಹಿಂದುಸ್ಥಾನಕ್ಕೆ ಜೋಗಕೂಡದೆಂದು ವಿಲಾಯತಿಯ ವರ್ತಮಾನಪತ್ರಗಳು ಗೊಂಗಾಬವೆ ಬ್ಬಿಸಿದವು. ಹಿಂದುಸ್ಥಾನದಲ್ಲಿ ಬೊಲ್ಶೆವಿಕ ಬೀಜ ಬಿತ್ತುವರೆಂದೇ ಭಯ. ಪಾರ್ಲಮೆಂಟ ಸಭೆಯ ಮೆಂಬರರಿಗೆ ಬ್ರಿಟಿಶ ಸಾಮ್ರಾಜ್ಯದಲ್ಲಿ ಬೇಕಾದಲ್ಲಿಗೆ ಹೋಗಲು ಸರ್ವ ಸ್ವಾತಂತ್ರ್ಯವಿರುವದೆಂಬದನ್ನು ಇವರು ಮುಖ್ಯ ಪ್ರಧಾನರಿಗೆ ತಿಳಿಸಲು- ಅವರು ಪಾಸಪೋರ್ಟನ್ನು ಕೊಟ್ಟರು. ವಿಲಾಯತಿಯಿಂದ ಹೊರಟು ಬರುವಾಗ ದಾರಿಯಲ್ಲಿ ಅಲೆಕ್ಸಾಂಡ್ರಿಯಾ ಬಂದರದಲ್ಲಿಳಿದು, ಏನಾದರೂ ಸಾಮಾನ ಕೊಳ್ಳಬೇಕೆಂದು ಮಾಡಿದ್ದರು. ಆದರೆ ಪೋಲೀಸರು ಪ್ರತಿಬಂಧದ ಹುಕುಮು ತೋರಿಸಿದರು. ಇದು ಇ ಟಿಸ್ಹ ಸರಕಾರದ ತಪ್ಪಲ್ಲ, ದ್ವೇಷವಲ್ಲ; ಇಂಗ್ಲಿಷ ಹಾಯ್ಕು ಕವಿಶನರರು ಮಾಡಿಸಿದ ಕೃತ್ಯವು. ಅಡಿಸಿದ ನುಡಿಯು. ನವ ಸೆನೆಲವಾಡರು ಲಾರ್ಡ ಲಾಮಿಂಡಜಾರ್ಜರನ್ನು ಕಾಣುವದಕ್ಕಾಗಿ ಗಿಕ್ಕ ನಿಮಿಷ ಹಡಗವನ್ನು ಹೆಚ್ಚು ವೇಳೆ ನಿಲ್ಲಿಸಿದರು. ಆದರೆ ಪಾರ್ಲಮೆಂಟದ ಮೆಂಬರರಾದಂಥ ಮಿ. ಶಕಲಾತವಾಲಾಸಾಹೇಬರನ್ನು ಇಳಿಯಗೊಡಲಿಲ್ಲ. ಏಕಂದರೆ ಇವರು ಸ್ವಾತಂತ್ರ್ಯ ಪ್ರಿಯರು; ಇಜಿಪ್ತದಲ್ಲಿಯೂ ಈ ಬೀಜ ಬಿತ್ತುವರೆಂಬ ಹೆದರಿಕೆ|| ಬರುವಾಗ ಇಳಿಯಗೊಡದಿದ್ದರೂ, ಹೋಗುವಾಗ ಅಲ್ಲಿಳಿಯುವಂತೆ ಇವರು ಪಂಥವೆಟ್ಟಿದ್ದಾರೆ. ಇವರು ಮುಂಬಯಿಗೆ ಬಂದ ಕೂಡಲೆ, ಬಂದರದಲ್ಲಿ ಇವರ ಸ್ವಾಗತಕ್ಕಾಗಿ ದೇವಿ ಸರೋಜಿನಿ ನಾಯ್ಡು ಲಾನಾ ಕೈಲಾಶಲ್ಲಿ ಮೊದಲಾಗಿ ಅನೇಕ ಹಿಂದೂ ಮುಸಲಮಾನ ಗೃಹಸ್ಥರೂ, ಪ್ರಜಾಬಂಧುಗಳೂ ಇವರ ಸ್ವಾಗತಕ್ಕಾಗಿ ಸಿದ್ಧವಾಗಿದ್ದರು. ವರ್ತಮಾನ ಪತ್ರಗಳ ರಿಪೋರ್ಟರರು ಫೋಟೋ ತೆಗೆಯಲ್ಲಿಕ್ಕೂ, ಫೋಟೋಗ್ರಾಫರರು ಭಾವಚಿತ್ರ ತೆಗೆಯಲ್ಲಿಕ್ಕೂ ಮುಂದಾದ್ದರು. ಅನೇಕ ಸಂಸ್ಥೆಗಳ ಪರವಿಂದ ಪೂ ಮಾಲೆಗಳನ್ನೂ ಪುಷ್ಪಗುಚ್ಛಗಳನ್ನೂ ತಂದಿದ್ದರು ಆದರೆ ಇವುಗಳಲ್ಲಿ ಒಂದನ್ನಾದರೂ ಕೊರಳೊಳಗೆ ಹಾಕಿಕೊಳ್ಳದೆ, ಕಯ್ಯಲ್ಲಿ ಇಸಗೊಂಡರು. ಬಂದರದಲ್ಲಿ ಸ್ವಾಗತವಾದ ಕೂಡಲೆ, ದೇವಿ ಸರೋಜಿನಿ, ಮಿ. ಹಾರ್ನಿಮನ್ನ ಮೊದಲಾದವರೊಂದಿಗೆ ನೇಟಾಗಿ ಲೋಕಮಾನ್ಯರ ಪಹನಭೂಮಿಗೆ ಬಂದು ಬಂದರದಲ್ಲಿ ದೊರೆಕಿಸಿದ ಪೂಮಾಲೆಗಳನ್ನು ಕಟಾಂಜನಗಳ ಮೇಲೆ ಹಾಕಿ, ಲೋಕಮಾನ್ಯರ ವಿಷಯಕವಾಗಿದ್ದ ಅತುಲ ಮತ್ತು ಅಜಲವಾದ ಭಕ್ತಿಯನ್ನು ವ್ಯಕ್ತಪಡಿಸಿ, ಸ್ವಸ್ಥಾನಕ್ಕೆ ಪ್ರಯಾಣ ಮಾಡಿದರು. ಬಳಿಕ ಕೂಲಕಾರರನ್ನುದ್ದೇಶಿಸಿ, ಹಿಂದು ಸಂದೇಶವನ್ನು ಪ್ರಸಿದ್ಧ ಮಾಡಿದರು. ಇದರ ಹಾಗು ದೇವಿಯವರ ಅಧ್ಯಕ್ಷತೆಯಲ್ಲಿ ಟಾವುನ ಹಾಲಿನಲ್ಲಿ ಕೂಡಿದ್ದ ಸಾರ್ವಜನಿಕ ಜಾಹೀರ ಸಭೆಯಲ್ಲಿ ಮಾಡಿದ ಭಾಷಣದ ಅನುವಾದವನ್ನು ಈ ವಿಷಯದ ಮುಂದೆ ಕೊಟ್ಟ ಲೇಖದಲ್ಲಿ ಮಾಡಿರುತ್ತೇವೆ.

ಮಿ. ಶಕಲಾತವಾಲಾಸಾಹೇಬರ ವಿಚಾರಗಳು.

ಸ್ವರ್ಗವಾಸಿ ದಾದಾಭಾಯಿ ನವರೋಜಿಯವರ ತರುವಾಯ ಮಿ. ಶಕಲಾತವಾಲಾ ಇವರು ಪಾರ್ಲಮೆಂಟ ಸಭೆಯ ಮೆಂಬರರಾಗಿದ್ದಾರೆ. ಇ ಬ್ಬರೂ ಪಾರ್ಸೀ ಗೃಹಸ್ಥರೇ. ಆದರೆ ಕಾಲಸ್ಥಿತಿಗನುಸರಿಸಿ, ಇವರ ವಿಚಾರಗಳಲ್ಲಿ ಅಸದೃಶವಾದ ಕ್ರಾಂತಿಯಾಗಿರುತ್ತದೆ. ದಾದಾಭಾಯಿಯವರು ಸ್ವರಾಜ್ಯದ ಹೊರ್ಶ, ಹಿಂದುಸ್ಥಾನದ ಎಲ್ಲಿಯಾಗಲಾರದೆಂಬ ಸೂತ್ರ ಹೇಳಿದರು. ಸ್ವರಾಜ್ಯವೆಂದರೆ ಸಂಪೂರ್ಣ ರಾಜಕೀಯ ಸ್ವಾತಂತ್ರ್ಯ. ವಸಾಹತಿನ ಸ್ವರಾಜ್ಯವೆಂಬ ನಾಟಕದೊಳಗಿನ ಬೋರೆಗೆ ಬಣ್ಣ ಬಡಕೊಂಡಂಥ ಸೋಗಿನ ಸ್ವರಾಜ್ಯವಲ್ಲೆಂದು ಮಿ. ಶಕಲಾತವಾಲಾ ಇವರು ಹೇಳುತ್ತಾರೆ. ಪಾರ್ಲಮೆಂಟ ಸಭೆಯಲ್ಲಾದ ಇವರ ಜನ್ಮಾವಣಿಯು ಅಂಥ ಪಕ್ಷದ ವತಿಯಿಂದಲೇ ಆಗಿರುತ್ತದೆ. ಇಂಗ್ಲಂಡದಲ್ಲಿಯೂ ಬೊಲ್ಶೆವಿಕ ಪಂಥವುಂಟಷ್ಟೇ; ಆ ಪಂಥದವರು ಇವರನ್ನು ಮೆಂಬರರಾಗಿ ಆರಿಸಿಕೊಟ್ಟಿದ್ದಾರೆ. ಈ ಪಂಥದ ತತ್ವವು ಶ್ರೀಮಂತರೂ ಒತವರೂ ಶ್ರಮವಿಭಾಗದ ಪ್ರಕಾರ ಗಳಿಕೆಯ ಉಪಭೋಗ ಮಾಡಬೇಕೆಂದಿರುತ್ತದೆ. ಸಿರಿವಂತರು ಸಕ್ಕರೆ ತುಪ್ಪ ಸವಿದು, ಬಡವರು ರಾಗಿಯ ಗಂಜಿಯನ್ನು ಸಹ ತಾಣ್ಣಾಚಾರ ವೆಂಬ ಬಂಡವಲಗಾರರ ದುರಾತ್ಮೆಯನ್ನು ದೂರ್ತ ವಾಲಾಗಿ ಒಡಿಸಿ, ಬಂಡವಲಗಾರರಂತೆ ಬಡವರೂ ಸುಖವಂತರಾಗಿ ಜೀವನ ಮಾಡಿಕೊಂಡಿರಬೇಕೆನ್ನುವದೇ ಇವರ ಧ್ಯೇಯವು. ರತಿಯಾದ ಬೊಲ್ಶೆವಿಕರೂ ಇದೇ ಮತದವರು. ಈ ಮತದವರು ಹಿಂದುಸ್ಥಾನದ ಅಸಹಕಾರಿಗಳಂತೆ ಅಹಿಂಸೆಯ ವೀಕ್ಷೆ ಕೈಕ್ಕೊಂಡಿರುವರು ನಿಜ. ಆದರೆ ಕೂತಾಗ, ನಿಂತಾಗ ಅಹಿಂಸೆ, ಅಹಿಂಸೆ, ಎಂದು ಗಿಳಿಯಂತೆ ಕೂಗೆಬ್ಬಿಸುವದು ಬೊಲ್ಶೆವಿಕರಿಗೆ ಇಷ್ಟವೆನಿಸುವದಿಲ್ಲ. ರಾಜ್ಯಕರ್ತರೆಂಬವರು ಜಗತ್ತಿನ ತುಂಬ ಸಾಮ್ರಾಜ್ಯ ಬೆಳೆಸಿ, ಪರದೇಶಿಯರನ್ನು ಗುಂಡಿನ ಪೊಡತದಿಂದ ತಮ್ಮ ಗುಲಾಮರಾಗಿ ಮಾಡಿಕೊಳ್ಳುತ್ತಿರುವಾಗ, ಗುಲಾಮರಾದವರು ಯಾವಾಗಲು ಅಹಿಂಸೆಯ ಪುರಾಣ ಹೇಳುತ್ತಿರುವದು ಎತ್ತಣದ ನ್ಯಾಯವೆಂದು ಮಿ. ಶಕಲಾತವಾಲಾ ಇವರು ಪ್ರಶ್ನ ಮಾಡುತ್ತಾರೆ. ಹಿಂದುಸ್ಥಾನದ ಪ್ರಜೆಯು ವಿಶೇಷವಾಗಿ ಮನವಳಿರಾದಂಥ ಲಿಬರಲರು ತಮಗೆ ವಸಾಹಾತಿನ ಸ್ವರಾಜ್ಯ ದೊರೆತರೆ- ಪೈಕುಂಠ ಪದ ದೊರೆಯುವದೆಂದು ಭಾವಿಸಿರುತ್ತಾರೆ. ಈ ಭಾವನೆಯು ತೀರ ನಿರುಪಯೋಗವಾದದ್ದು. ಬ್ರಿಟಿಶ ಜನರ ವಸಾಹಾತಿನ ರಹಸ್ಯವೇ ಈ ಲಿಬರಲರಿಗೆ ಹೊಳೆದ್ದಿಲ್ಲ ಮತ್ತು ತಿಳಿದಿಲ್ಲ. ಇಂಗ್ಲಿಷ ಜನರಿಗೆ ಕಾನಡ, ಆಸ್ಟ್ರೇಲಿಯಾ ಮೊಂತಾದ ವಸಾಹಾತುಗಳಲ್ಲಿ ಹೋಗಿ, ನಾನಾರಾಗಿ, ಸ್ವದೇಶ ಮಾಡಿಕೊಂಡಿರಲು ಅನುಕೂಲವಾಗಬೇಕೆಂದು, ವಸಾಹಾತಿನ ಆಡಂಬರ ಹೂಡಿದ್ದಾರೆ ಈ ಪ್ರಕಾರ ಹಿಂದುಸ್ಥಾನವು ವಸಾಹಾತಿನ ಸ್ವರಾಜ್ಯವಾದರೆ ಇಲ್ಲಿಯೂ ಇಂಗ್ಲಿಷ ಜನರು ಜೇವನ ಮಾಡಿಕೊಳ್ಳಲಿಕ್ಕೂ ಮೆರೆದಾಡಲಿಕ್ಕೂ ನಾಲ್ಕೂ ದಿಕ್ಕುಗಳು ತೆರೆಯುವವು. ವಿಲಾಯತಿಯಲ್ಲಿ ಒಂದು ಕಾಲದಲ್ಲಿ ಲಿಬರಲರೆಂಬವರು ದೊಡ್ಡತನ ಮಾಡಿದರು. ಅದರೆ ವರ್ತಮಾನ ಕಾಲದಲ್ಲಿ ಅವರು ದಿಸೆಗೇಡಾಗಿದ್ದಾರೆ. ಅಂಥ ಲಿಬರಲರ ಹೆಸರಿಟ್ಟುಕೊಂಡು ಹಿಂದುಸ್ಥಾನದ ಮವಾಳರು ವಸಾಹಾತಿನ ಸ್ವರಾಜ್ಯಕ್ಕಾಗಿ ಹಾತೊರೆದಿದ್ದಾರೆ. ಆದರೆ ಇವರಂಥ ಜೇಡಿ, ಮತ್ತು ಪುಕ್ಕರಾರೂ ಇರಲಿಕ್ಕಿಲ್ಲ. ಅಕೋಲೆಯಲ್ಲಿ ಲಿಬರಲರು ಪರಿಷತ್ತು ಮಾಡಿಕೊಂಡು, ಮಾಡಿದ ಠರಾವುಗಳನ್ನು ವಿಲಾಯತಿಯ ಲಿಬರಲರು ನೋಡಿ, ನಗುವರು. ಲಾರ್ಡ ಮೋರ್ಲೆಸಾಹೇಬರು ಲಿಬರಲರಾಗಿದ್ದರು. ಪ್ರಾಮಾಣಿಕರೆಂದು ಸರ್ಟೀಫಿಕೇಟ ಪಡೆದಿದ್ದರು. ಆದರೆ ಇದೇ ಪ್ರಾಮಾಣಿಕ ಗೃಹಸ್ಥರು ಬಂಗಾಲದ ಭಂಭಕ್ಕು ಜನ ಪ್ರತಿನಿಧಿಯನ್ನು ತುರಂಗದಲ್ಲಿ ಹಾಕಿದ್ದನ್ನು ಮರೆಯಲಾಗದು. ಲಿಬರಲ ಕಾನ್ಸರವೇಟಿವ್ವೆಟ್ಟಿನ್ನ, ಲೇಬರ್ಸ ಮುಂತಾದ ಪಂಗಡಗಳಲ್ಲಿ ವಿಶ್ವಾಸವಿಡುವದರಿಂದ ಹಿಂದುಸ್ಥಾನದ ಸ್ವಾತಂತ್ರ್ಯ ಧ್ಯೇಯವು ಪೂರ್ಣವಾಗಲಾರದು. ಪ್ರಜ್ಞಾ ಮತವಿದ್ದ ಹೊರ್ಶ, ಕಗ ಕ್ಲಂದಾಯುವನ್ನು

ಕೊಡಿಸಬೇಕೆದ್ದಲ್ಲಿಂಬ ತತ್ವವನ್ನು ಹೇಳುತ್ತಲೇ ಏಳು ನೂರು ವರ್ಷ ಆಳಲ್ಪಟ್ಟಿದ್ದರು. ಅದೇ ಪ್ರಕಾರ ಹಿಂದುಸ್ಥಾನದಲ್ಲಿಯೂ ಇವರ ಆಳಿಕೆಯು ಅವರ ಹೇಳಿಕೆಯ ಸ್ವರಾಜ್ಯ ವಸಾಹತಿನ ಸ್ವರಾಜ್ಯ ಸೊರೆಯಬೇಕಾದರೆ- ಮನುಷ್ಯ ಮಾನವಲ್ಲ; ದೇವಮಾನದ ಆಯುಷ್ಯ ಬೇಕಾಗುವದು. ಏನರು ಹಿಂದೂ, ಏನರು ಮುಸಲಮಾನರು ಬಡದಾಡುತ್ತಾರೆಂಬ ನಿಮಿತ್ಯದಿಂದ ಸ್ವರಾಜ್ಯ ಬೊರೆಯುವದಕ್ಕೆ ವಿಘ್ನವನ್ನುಂಟು ಮಾಡುವದು ಬೇಡಾದವನಿಗೆ ಬೆಣ್ಣೆಯಲ್ಲಿ ಕೂದಲು ಎಂಬಂತಾಗುತ್ತದೆ. ವಾಸ್ತವಿಕವಾಗಿ ನೋಡಿದರೆ- ಇಂಗ್ಲಿಷ ಜನರು ಹಿಂದುಸ್ಥಾನದಲ್ಲಿಂಬಾರದೆಂಬದೇ ನನ್ನ ಮತವು. ಮತ್ತು ಇವರು ಹಿಂದುಸ್ಥಾನದಲ್ಲಿರಬದು ನನಗೆಷ್ಟೂ ಸಮ್ಮತವಿಲ್ಲ. ಏಕಂದರೆ- ಸಾಮ್ರಾಜ್ಯ ವಿಸ್ತಾರದಿಂದ ಜನರಿಗೆ ಉದ್ಯೋಗವಿಲ್ಲವಾಗುತ್ತದೆ. ಬಡತನ ಒರುತ್ತದೆ. ಕಷ್ಟ ವ್ಯಾಪ್ತವಾಗುತ್ತದೆ. ಬ್ರಿಟಿಶ ಜನರು ಜಗತ್ತನ್ನು ಆಳಿದರೂ, ಇವರ ಲಕ್ಷಾವಧಿ ಜನರು ಈ ತಾಪತ್ರಯಕ್ಕೊಳಗಾಗಿದ್ದಾರೆ. ಜಗತ್ತು ನಡೆಯುವದು ಮುಖ್ಯವಾಗಿ ಕೂಲಿಕಾರರಿಂದ ಇವರಿಲ್ಲದಿದ್ದರೆ ಜಗತ್ತಿಗೆ ವೈಭವ ಬರಲಾರದು. ಲಾರ್ಡ ಇಂಜೇ ವಸಾಕ್ಕೇಒರು ಕೋಟಿ ರೂಪಾಯಿ ಪೆಜ್ಜು ಮಾಡಿ, ಪಹಗ ಕಟ್ಟಿಸಿದ್ದಾರೆ. ಇದನ್ನು ಕಟ್ಟಿದವರಾರೆಂದು ವಿಚಾರಿಸಿರಿ. ಕೂಲಿಕಾರರು ಬೆವರಿಳಿಯುವಂತೆ ದುಡಿದುದಿದ್ದರೆ- ಹದಗ ಮಾಗುತ್ತಿತ್ತೇ? ಇದೇ ಪ್ರಕಾರ ಪ್ರತಿಯೊಂದು ನಿರಣಿ ಕಾರಖಾನೆಯು ವಿಚಾರ ಮಾಡಿರಿ; ಕೂಲಿಕಾರರು ಸಂಘಶಕ್ತಿಯನ್ನುಂಟು ಮಾಡಿಕೊಂಡ ಹೊರ್ತು, ಸ್ವರಾಜ್ಯ ದೊರೆಯಲಾರದು. ಸ್ವರಾಜ್ಯ ಸಂಪಾದಿಸಬೇಕೆಂದು ಹವಣಿಸುವಂಥವರು, ಸಾಹಸ ಕರ್ಮ ಮಾಡಶಕ್ಯಂಥವರು, ಕೂಲಿಕಾರರ ನೆರವಿನ ಹೊರ್ತು ಸ್ವರಾಜ್ಯ ದೊರಿಕಿಸಲಾರರು. ವಿಲಾಯತಿಯಲ್ಲಿ ಝುಂಡಶಾಹಿಯಾಯಿತು; ಕೇಸರಶಾಹಿಯಾಯಿತು; ಕೂಲಿಕಾರರ ದೊರೆತನ ಬಂದಿದೆ. ರಶಿಯಾದಲ್ಲಂತೂ ಒಕ್ಕಲಿಗರೇ ರಾಜ್ಯಕರ್ತರಾಗಿದ್ದಾರೆ. ಕೂಲಿಕಾರರು ಗಟ್ಟಿಗರಾದರೆ- ರಾಜ್ಯಕರ್ತರಾಗುವರು. ಇವರು ಅಕ್ಷಬಲ ಕಾಯ್ದುಕೊಂಡರೆ- ಯಾವದೂ ಅಸಾಧ್ಯವಲ್ಲ. ಸ್ವಾತಂತ್ರ್ಯವೆಂಬದು ಬರೇ ಶೂರತನದ ಹೆಬ್ಬಳಿಕೆಯ ಮಾತುಗಳಿಂದ ದೊರೆಯಶಕ್ಯವಿದ್ದಲ್ಲ. ಏನವ ನಿಮ್ಮ ರಾಜ್ಯವನ್ನು ನೀವೇ ಆಳಬೇಕು; ನಿಮಗೆ ನಿಮ್ಮ ರಾಜ್ಯವಾಳುವ ಸ್ವಾತಂತ್ರ್ಯವಿರಬೇಕು. ಇವೆಂದೂ ವ್ಯಾಪ್ತವಾಗಬೇಕಾದರೆ- ಸ್ವಾವಲಂಬನೆ ಮತ್ತು ಸ್ವಪ್ರತಿಷ್ಠೆಯನ್ನು ಸಂವಾದಿಸಶಕ್ಯವಿದ್ದು. ಸ್ವಾತಂತ್ರ್ಯವು ಶಾಸ್ತ್ರೀಯ, ಶಾರೀರಿಕ ಸಾಮರ್ಥ್ಯ ಮತ್ತು ವ್ಯಾಪಾರದಿಂದ ಗುಣಧರ್ಮದ ಪ್ರಕಾರ ದೊರೆಯಶಕ್ಯವಿದ್ದು. ಮತ್ತು ಸ್ವಾತಂತ್ರ್ಯ ಪೆಂಬದು ಮನುಷ್ಯ ಮಾತ್ರನ ಮುಖ್ಯ ಆಸ್ತಿಯು ಮತ್ತು ಅದನ್ನು ಕಸಕೊಳ್ಳುವದು ಪಾಪ ಮೂಲವೇ ಆಗುತ್ತದೆ.

ಚೀನದಲ್ಲಿ ಯುದ್ಧ ಹತ್ತುವದೇನು?

—೦—

ಚೀನ ದೇಶದಲ್ಲಿ ಯುದ್ಧ ಹತ್ತುವದೇನೆಂಬ ಪ್ರಶ್ನೆಯನ್ನು ಪ್ರತಿಯೊಬ್ಬರು ಕೇಳುತ್ತಾರೆ. ನು ಹಾಯುದ್ಧ ಮುಗಿದು ಎಂಟು ವರ್ಷವಾಗುತ್ತಾ ಬಂತು. ಆದ್ದರಿಂದ ರಮ್ಯವಾದ ಯುದ್ಧದ ವರ್ತಮಾನ ಕೇಳಲು ಜನರು ಪುನಃ ಕುತೂಹಲವತಾಗಿರುವದು ಆಶ್ಚರ್ಯವಲ್ಲ.

ಚೀನ ಜನರು ಪರಕೀಯರ ಮೇಲೆ ದಾಳಿ ತಂದಿದ್ದರೂ, ಪರಕೀಯರು ಅತ್ಯಂತ ಸಾವಧಾನದಿಂದ ಪರ್ವತ ಶ್ರಮವಿಟ್ಟಿರ್ದರಿಂದ ಯುದ್ಧ ಹತ್ತುವ ವಿಚಾರವು ಹೋಲಾಯವಾನವಾಗಿದೆ. ಬೆಲ ಜಮರ ಪಕೀಲನು ಪೆಟ್ಟು ತಿಂದನು. ವಿದ್ಯಾರ್ಥಿಗಳು ಕ್ರೈಸ್ತರ ದೇವಾಲಯಗಳನ್ನು ಜೊಕ್ಕುಯೇಸು ದಾಸಯ್ಯರನ್ನು ಹೊಡೆದು ಒಡಿಸಿದರು. ಕೆಲ ಕರುಣೆಯವರನ್ನು ಎತ್ತಿಕೊಂಡು ಹೋದರು. ನೂರಾರು ಮಿಷನರಿಗಳು ಕುಭಪತ್ರೆಯನ್ನು ಹೇಳುವದನ್ನು ಬಿಟ್ಟು, ಪಲಾಯನಸೂತ್ರ ಪಠಿಸುತ್ತಿದ್ದಾರೆ. ಪೆಕಿಂಗ ಸರಕಾರದವರು ಟೆಂಟಿಶನದಿಂದ ಗುಡಚೇಪೆ ಕಟ್ಟಿರೆಂದು ಬೇಳುತ್ತಿದ್ದಾರೆ. ಆದರೂ ಯುರೋಪದ ಯಾವ ದೇಶವೂ ಚೀನದ ಕೂಡ ಯುದ್ಧವೆಂದು ರಣಗಾಳಿ ಹಿಡಿಯಲು ಹಿಂದು ಮುಂದೆ ನೋಡುತ್ತಿರುವದು.

ಬ್ರಿಟಿಶ ಸರಕಾರದವರು ಈಗಾಗಲೆ ಕೆಲವು ಯುದ್ಧದ ಪಡಗಗಳನ್ನು ಚೀನ ಸಮುದ್ರಕ್ಕೆ ಕಳಿಸಿದ್ದಲ್ಲದೆ, ಮಾಲ್ಟಾದಲ್ಲಿರುವ ಏದು ಕ್ರೂಜರ ಪಡಗಗಳಿಗೆ ಅತ್ತ ಸೊಧಲು ಸಿದ್ಧವಾಗಿರುವಂತೆ ಅಪ್ಪಣೆ ಕೊಟ್ಟಿದ್ದಾರೆ. ಇದೇ ವಿಷಯವಾಗಿ ಮಂತ್ರಿ ಮಂಡಲ ಕೂಡಿ ವಿಚಾರವಾಗಬೇಕಿದ್ದುಂಟು. ಈಯೊಳಗಾಗಿ ಜಂಥ ಬಿಕ್ಕಟ್ಟಿನ ಮತ್ತು ಜೀವದ ಪ್ರಸಂಗ ಬಂದರೆ ತಮಗೆ ತೋರಿದಂತೆ ವರ್ತಿಸಲಿಕ್ಕೆ ಶಾಂಘಾಯಿಯ ಅಧಿಕಾರಿಗಳಿಗೆ ವಿಶೇಷ ಅಧಿಕಾರ ಕೊಟ್ಟಿದ್ದಾರೆ.

ಮುಂಡಾಲೆಯ ಶುರಂಗದಲ್ಲಿರುವ ಶ್ರೀ ಸುಭಾಷಚಂದ್ರ ಬೋಸರ ತೂಕವು ೪೪ ಪೌಂಡು ಕಡಿಮೆಯಾಗಿರುತ್ತದೆ. ದೇಹವು ಅಸ್ತಿಪಂಜರವಾಗಿರಬಹುದು.

ಮುಂಬಯಿಯಲ್ಲಿ ಒಂದು ಶರ್ಯಾತಿನ ಕುದುರೆಯು ೨೧ ಸಾವಿರ ರೂಪಾಯಿಕ್ಕೆ ಮಾರಾಟವಾಯಿತು.

ಭರತಪೂರ ಮಹಾರಾಜರ ಪೋಲೋ ಆಟದಲ್ಲಿ ಹೆಸರಾದ ಕುದುರೆಯನ್ನೇ ಯಾರೋ ಎಬ್ಬಿಸಿಕೊಂಡು ಹೋಗಿದ್ದಾರೆ.

ಕೊಲ್ಹಾಪೂರದಲ್ಲಿ ಬೆಂಟೋರಿಯಲ ದಂಡು ಕಟ್ಟುವದಕ್ಕಾಗಿ ೫೦ ಜನ ಕರುಣರನ್ನು ಬೆಳಗಾವಿಯ ದಂಡಿನಲ್ಲಿ ಶಿಕ್ಷಣ ಹೊಂದುವದಕ್ಕಾಗಿ ಕಳಿಸುವರು.

ಬ್ಯಾಡಿಗೆಯಲ್ಲಿ ನಡೆದ
ಶ್ರೀಮಂತ ಲಿಂಗಪ್ಪಾ ಜಾಯಪ್ಪಾ
ಸರದೇಸಾಯಿ ಸಿರಸಂಗಿ ಇವರ ಜನ್ಮದಿವಸದ
ಮಹೋತ್ಸವವು.

—೦—

ಕಳೆದ ಸೋಮವಾರ ತಾ॥ ೧೦-೧೧-೨೬ನೇ ದಿವಸ ನಮ್ಮಲ್ಲಿ ಶ್ರೀಮಂತ ಲಿಂಗಪ್ಪಾ ಜಾಯಪ್ಪಾ ಸರದೇಸಾಯಿ ಸಿರಸಂಗಿ ಈ ಮಹನೀಯರ ಜನ್ಮದಿವಸದ ಮಹೋತ್ಸವವು ಬಹು ವೈಭವದಿಂದ ನೆರವೇರಿತು.

ಶ್ರೀಗಳವರ ಮಠ, ಶ್ರೀ ಲಿಂಗರಾಜ ಲಾಯಬ್ರರಿಗಳು ತಳಿರು ತೋರಣಗಳಿಂದ ಶೃಂಗರಿಸಲ್ಪಟ್ಟಿದ್ದವು. ಅಂದು ಸಾಯಂಕಾಲ ೪ ಗಂಟೆಗೆ ಶ್ರೀ ಲಿಂಗರಾಜರವರ ಭಾವಚಿತ್ರದ ಮೆರವಣಿಗೆಯು ಭಜನಾ, ಬ್ಯಾಂಡಮೇಳ್ಯಗಳೊಡನೆ ಹೊರಟು ಪುರ ಪ್ರದಕ್ಷಣೆ ಮಾಡಿಕೊಂಡು ೭॥ ಗಂಟೆಗೆ ಶ್ರೀಗಳವರ ನಿವಾಸವನ್ನು ಸೇರಿತು.

ತರುವಾಯ ಮಾದೇನೂರ ಶ್ರೀ ಪಟ್ಟದ ಸ್ವಾಮಿಗಳವರ ಅಧ್ಯಕ್ಷತೆಯ ಕೆಳಗೆ ಸಭೆಗೂಡಿ, ಮಿ. ಬಿಗ್ಗಾಮ, ಮಿ. ಕೊಲ್ಹಾಪೂರ, ಮಿ. ಕ್ಯಾತಕಾರ ಇವರ ಸ್ಫೂರ್ತಿದಾಯಕ ಭಾಷಣಗಳಾದವು.

ಸದರಿಯವರ ಭಾಷಣದಲ್ಲಿ ಶ್ರೀ ಲಿಂಗರಾಜರವರ ಜೀವಿತ ಚರಿತ್ರ ಗುಣವರ್ಣನೆ ದಾನವಿಶೇಷ ಮೊದಲಾದವುಗಳು ಅಡಕವಾಗಿದ್ದವು. ಬಳಿಕ ಅಧ್ಯಕ್ಷರ ಮಹತ್ವರ ಭಾಷಣವಾಗಿ ಪಂಡಿತಜ್ಞಾಯ ಹಾರ ತುರಾಯಿ ತಾಂಬೂಲ ಮಂಗಲಗಳೊಡನೆ ಸಭಾವಿಸರ್ಜನೆಯಾಯಿತು.

ತಾ॥ ೧೪-೧೧-೧೯೩೨ ನೇ ಇಸವಿ

ಎಸ್. ಸಿ. ಹುಂಬಿ
ಸೇಕ್ರೆಟರಿ
ಶ್ರೀ ಲಿಂಗರಾಜ ಲಾಯಬ್ರರಿ
ಬ್ಯಾಡಿಗಿ.

ವಿವಿಧ ವರ್ತಮಾನಗಳು

—೦—

ವಿಜಾಪೂರದಲ್ಲಿ ವೀರಶೈವ ಮಹಾಸಭೆಯನ್ನು ಕೂಡಿಸಬೇಕೆಂಬ ವಿಚಾರ ನಡೆದಿದೆ.

———

ಬೆಂಗಳೂರಿಗೆ ಲಾರ್ಡ್ ಅಯಘ್ರನಸಾಹೆಬರು ಬಂದಾಗ, ಅವರ ಆಗಮನದ ಸ್ಮರಣೆಯೆಂದು ಆಯರ್ವಿನ ಪಾರ್ಕವೆಂದು ಉದ್ಯಾನ ಮಾಡುವರು

———

ಮಹಾತ್ಮಾ ಗಾಂಧಿಯವರ ಮದ್ರಾಸ ಇಲಾಖೆಯ ಕಾರ್ಯಕ್ರಮದಲ್ಲಿ ಬೆಂಗಳೂರನ್ನು ನೇರಿಸಿದ್ದಾರೆ. ಅವರೆ ಅವರು ಕರ್ನಾಟಕದಲ್ಲಿ ಸಂಚಾರ ಮಾಡುವ ಲಕ್ಷಣವಿಲ್ಲ.

———

ಫರೀದಪೂರದಲ್ಲಿ ಶ್ರೀ ಸ್ವಾಮಿ ಶ್ರದ್ಧಾನಂದರಿಗೆ ಒಲಾಂಜಲಿ ಕೊಡುವ ದಿವಸ ಕೆಲ ಮುಸಲಮಾನರು ಹಿಂದೂ ಧರ್ಮ ಸ್ವೀಕಾರ ಮಾಡಿದರು.

———

ಜಪೋಪೆಯ ಗಾಯಕವಾಡ ಮಹಾರಾಜರು ಶ್ರೀಮಂತ ಫತ್ತೆಸಿಂಗ ಮಹಾರಾಜರಿಗೆ ಯೆಸ್ವ್ಯರಜ್ಯಾಭಿಷೇಕ ಮಾಡಿಸಿ, ಸ್ವದ್ಧಾಸ್ವಶದ ಮೂಲಕ ರಾಜ್ಯಕಾರಭಾರದ ಭಾರ ಇಳಿಸಿಕೊಳ್ಳುವರೆಂಬ ವರ್ತಮಾನ ಪ್ರಸಿದ್ಧವಾಗಿದೆ.

———

ದಿಲ್ಲಿಯಲ್ಲಿ ಹೊಸದಾಗಿ ಕಟ್ಟಿದ ಅಸೆಂಬ್ಲಿಯ ಸಭಾಮಂದಿರದಲ್ಲಿ ಭಾಷಣ ಮಾಡತಕ್ಕವರ ಭಾಷಣವು ಗಟ್ಟಿಯಾಗಿ ಕೇಳುವಂಥೆ ಧ್ವನಿವರ್ಧಕ ಯಂತ್ರಗಳನ್ನು ಹಚ್ಚಿರುತ್ತಾರೆ.

———

ಶುದ್ಧಿ ಮತ್ತು ಹಿಂದೂ ಸಂಘಟನೆಯನ್ನು ಬಲವಡಿಸಿಕೊಂಡ ಹೊರ್ತು ಹಿಂದೂ ಜನರು ಸ್ವರಾಜ್ಯದ ಅಧಿಕಾರವನ್ನು ತೊಡುವದು ಹುಚ್ಚತನವೆಂದು ಡಾಕ್ಟರ ಮುಂಜೆಯವರು ಬಂಗಾಲದಲ್ಲಿ ವ್ಯಾಖ್ಯಾನಗಳ ಸತ್ರ ಪ್ರಾರಂಭಿಸಿದ್ದಾರೆ.

———

ಅರಳೆಯ ವ್ಯಾಪಾರಕ್ಕೆ ಮಂದಿ ಬಂದದ್ದರಿಂದ ಮುಂಬಯಿಯಲ್ಲಿ ಮೂರು ಗಿರಣಿಗಳು ತಿಂಗಳಲ್ಲಿ ೧೮ ದಿವಸ ಕೆಲಸ ಮಾಡುವತೆ ನಿರ್ಧರಿಸಿವೆ.

———

ರಾಜಪಿಂಪಲೆಯಲ್ಲಿ ಹಿಂದೂ ಮಹಾಸಭೆಯ ಶಾಖೆಯು ಸ್ಥಾಪಿಸಲ್ಪಟ್ಟಿತು. ಆ ಸಮಾರಂಭವಾಗುವಾಗ ಒಬ್ಬ ಮುಸಲಮಾನನು ಹಿಂದೂ ಆದನು.

———

ಮದ್ರಾಸ ಕೌನ್ಸಿಲದ ಲೋಕನಿಯುಕ್ತ ಮೆಂಬರರಾದ ಡಾಕ್ಟರ ಮುಲ್ಲಯ್ಯನವರಿಂದ
ಪರಿಶೋಧಿಸಲ್ಪಟ್ಟ
ಮೆಸರ್ಸ ಪಿ. ವ್ಹಿ. ರಾಜನ ಕಂಪನಿಯ

ಸುಗಂಧ ನಶ್ಯದ ಪುಡಿಯು.

ಪ್ರಖ್ಯಾತಿ ಹೊಂದಿದ ಈ ನಶ್ಯದ ಪುಡಿಯು ಅಮೂಲ್ಯವಾದದ್ದಿದ್ದು ಲಕ್ಷಾವಧಿ ಜನರು ಇದರ ಉಪಯೋಗ ಮಾಡಿದ್ದಾರೆ ಇದರ ಗುಣದ ಬಗ್ಗೆ ಪ್ರಾಮಿಣರು ಒಸರು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಈ ಪುಡಿಯ ಉಪಯೋಗದಿಂದ ಗುಣವಾಗುವ ವ್ಯಾಧಿಗಳುಃ— ಪಿನಸು, ಅರತಲೆನೋವು, ತಲೆಯಲ್ಲಾಗುವ ಬೇರೆ ವಿಕಾರಗಳು, ಕಣ್ಣುಗಳಲ್ಲುಂಟಾಗುವ ಎಲ್ಲ ವ್ಯಾಧಿಗಳು ದೂರಾಗಿ ಸ್ಮರಣ ಶಕ್ತಿಯು ಹೆಚ್ಚುತ್ತದೆ. ಬೇರೆ ನಶ್ಯದಲ್ಲಿ ಈ ನಶ್ಯದ ಒಂದು ಪಟಿಕೆಯನ್ನು ಕೂಡಿಸಿದರ ಎಲ್ಲವೂ ಸುಗಂಧವಾಗುವದು. ಮೂದರಿತೆ ಉಚಿತವಾಗಿ ಕೊಡಲಾಯುವದು.

ಸಾದಾ ಮದ್ರಾಸ ನಸ್ಯ ೧೨೦ ತೊಲೆ ವೀಸಿ ಒಂದಕ್ಕೆ ನಂಬರ ೧ ೪-೦-೦
,, ೨ ೫-೦

ದಯವಿಟ್ಟು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಪಿ. ವ್ಹಿ. ರಾಜನ ಮತ್ತು ಕಂಪನಿ,
ಳಳ ಗೋವಿಂದಪ್ಪ ನಾಯಿಕನ ಬೀದಿ ಬಾರ್ಟನ್‌ಪೇಟೆ, ಮದ್ರಾಸ

ತಂತಿ ವಿಳಾಸ— ನಸ್ಯಮು

ಶಿಕ್ಷಕರೇ! ಇತ್ತ ಲಕ್ಷಕೊಡಿರಿ
ವಿದ್ಯಾರ್ಥಿಗಳ ಪಾಲಕರೇ! ಇದನ್ನು ಓದಿರಿ.

೨-೩-೪ ಹಾಗೂ ೫ ನೆಯ ಇಯತ್ತೆಗಳ
ಅಂದವಾದ ರೂಪಿನಿಂದ ಎಸೆವ
ಚಂದವಾದ ಕವ್ಹರಿನಿಂದ ಒಪ್ಪುವ
ಸುಂದರವಾದ ಕಾಪಿಬುಕ್ಕುಗಳು ನಮ್ಮಲ್ಲಿ ಸಿಗುವವು
ಪ್ರತಿಯೊಂದು ಕಾಪಿಗೂ ಬುಕ್ಕಿಗೆ ಒಂದು ಆಣೆ.
ರೋಕ್ಕ ಕೊಳ್ಳುವವರಿಗೆ ವಿಶೇಷ ಸವಲತ್ತು ಕೊಡುವೆವು
ಎದ್ದಾಕೆಯ ಪೋಸ್ಟ್ ಟಿಕೀಟುಗಳನ್ನು ಕಳುಹಿಸಿದಲ್ಲಿ
ಪ್ರತಿಯೊಂದು ಇಯತ್ತೆಗೆ ಒಂದರಂತೆ
ನಾಲ್ಕು ಕಾಪಿಗಳನ್ನು ನಮೂನೆಗೆ ಕಳುಹುವೆವು.
ಕಾಪಿಯ ಬುಕ್ಕುಗಳಲ್ಲಾದಿ ನಮ್ಮಲ್ಲಿ
ಜ. ಚ. ಬಿನ್ನಾರ ಕಿರಾಣಿ ಮರ್ಚಂಟ್, ಕಲಘಟಗಿ
ಇವರ ಎಕ್ಸರಸಾಯಿಜ್, ಕೆಂಪು ನೀಲಿ ಮಸಿ ಚೀಟುಗಳು
ಯೋಗ್ಯದರದಿಂದ ದೊರೆಯುವವು.
ವಿಶೇಷ ಮಾಹಿತಿಗಾಗಿ ಕೆಳಗಿನ ಎರಡು ವಿಳಾಸಗಳಲ್ಲಿ
ಬೇಕಾದ ಒಂದು ವಿಳಾಸಕ್ಕೆ ಬರೆದುಕೊಳ್ಳಬಹುದು.
೧ ಅಡಬಡ್ಡಿ ಟ್ರೇಡರ್ಸ ಕಲಘಟಗಿ,
೨ ವಿಜಯ ಆಫೀಸ ಧಾರವಾಡ

———

ಚಂದಾದಾರರಿಗೆ ಸೂಚನೆ.

ಜಾನೇವಾರಿ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂಬ ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ADVERTISEMENT

—೦೭೦—

THE CIVIL ENGINEERING SCHOOL. LUCKNOW.

Maintained & Managed by the Hindu Education Society. Registered under Act xxi of 1860)

Trains candidates for the Subordinate Engineering Services. The School has been highly recommended for Grant-in-aid, by Chief Engineer & Secretary, Irrigation Branch, P. W. D, U. P., & the Board of Industries, U. P. The Rules of Irrigation Branch U. P. also provide for the employment of successful students of the School. Apply for full particulars and prospectus to the Principal.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾ ಕರ್ನಾಟಕ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

R. N. B. 1469

ವಿಜಯ

ಸಚಿತ್ರ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾ ಚಾರ್ಯ ಬಾಳಾಚಾರ್ಯ ಜೋಶಿ.

ವರ್ಷ ೮ ಧಾರವಾಡ ಗುರುವಾರ ತಾರೀಖು ೨೦ನೇ ಜಾನೇವಾರಿ ೧೯೨೯ ಸಂಚಿಕೆ ೧೬

ಕೆಲ್ಲೋಸ್ಕರ ಕಬ್ಬಿನ ಗಾಣಗಳು.



ಮೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಮಾಲ ಗಾಣಕ್ಕೆ ಪದಕವು ದೊರಕಿದೆ ಹೆಚ್ಚಿನ ಸಂಗತಿ ಒಗ್ಗೆ ತಿಳಿದುಕೊಳ್ಳಿರಿ.

ಕೆಲ್ಲೋಸ್ಕರಬಂಧು ಲಿಮಿಟೆಡ್ | ಕೆಲ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ಧಾರವಾಡ ಅರ್ಬನ ಕೋ. ಆಪರೇಟಿವ್ವ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ ಆಪರೇಟಿವ್ವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದ್ದು.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸಾನ.

ಬಂದಿಗಯು ೨೮ ಲಕ್ಷದ ಮೇಲುಂಟು. ಚೆಕ್ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ಮಾಡುವದು. ಕ್ಯಾಹಿಮಿ ಮಕ್ತು ಬೇರೆ ಕರದ ವಿವಾಚಿಟಗಳಿಗೆ ಜನ್ಮಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಿಕೊಳ್ಳಬೇಕು.

ಶುದ್ಧವಗಾವ ಬಿ. ಜಕಾತಿ,
ಮೆನೆಜಿಂಗ ಡಾಯರೆಕ್ಟರ

ಧಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಅರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ತಿವಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ,
ಮ್ಯಾನೇಜೆಂಗ ಡಾಯರೆಕ್ಟರ

ಮೂರು ಮೋಟಾರಗಳ ಪ್ರಾಣಾಪಟ್ಟು.

—೦—

ತಿರಪತಿ ಮೋಟಾರ ಲಾರಿ ಸರ್ವಿಸದವರು ಜನರು ಕಾಮನ್ಸಿನವು ಒಂದು. ಇಳಿ ಜನರು ಕೂಡುವದು ಮತ್ತು. ಪೆಟ್ರೋಲ್ ಸಿಸ್ಟಮ್‌ಲೇಜ್ ಟೂರಿಂಗ್ ಕಾರ ಈ ಮೂರು ಮೋಟಾರಗಳನ್ನು ಮಾರತಕ್ಕನುವೆನೆ. ಇವು ಉತ್ತಮ ಸ್ಥಿತಿಯುಳ್ಳದ್ದು, ಸದ್ಯದಲ್ಲಿ ಸರ್ವಿಸಿನಲ್ಲಿರುತ್ತವೆ. ಕೆಳಗಿಳಿಸುವವರು ಮಾಜ್ಜೆ ಮಾಡಿಕೊಳ್ಳಬಹುದು. ಕೃಷ್ಣ ಮುಂಕಾಜ್ಜೆರ ಬಸ್ಸಿನ ಸಮ್ಮುಖದಲ್ಲಿ ಅಗ್ಗವಾದ ವಿಜಯವಾಡ ಅಲ್ಲಾಬಕ್ಷ ಎ. ಹರಪನಹಳ್ಳಿ ವಾಚ ರಿಪೆರರ ಆ್ಯಂಡ ಡೀಲರ ಹಾಲನೆಲ್ಲಿ ಎವರಿಗೆ ಧಾರವಾಡ ಇವರನ್ನು ವಿಚಾರಿಸಬೇಕು.

ಎ ವಾರು ಭಸ್ಮರಿ ಕಿತ್ತೂರ
ಕಿತ್ತೂರ ಮೋಟಾರ ಸರ್ವಿಸ

ಸೂಚನೆ— ಮೂರೂ ಮೋಟಾರ ತೊಗೊಂಬಲ್ಲಿ ಸೋಲಿ ಮಾಡಬಹುದು

—

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಜಕ್ಕು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂಭತ್ತರ ತಡೆ ಎನ್ನಿಸಿ ಪ್ರತಿಯೊಂದು ಒಳಗೆ ಏಮ ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಸೇರಿದ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಪಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತಿಕ್ಕೆ ಪತ್ರವ್ಯವಹಾರ ಮಾಡಬಹುದು. ವ್ಯವಸ್ಥಾಪಕ

—

ವಿಜಯದ ವರ್ಗಣೀದರ

—೦—

ನಿಶ್ಚಯಪತ್ರಕ್ಕೆ
೧೫ ತಿಂಗಳಿಗೆ [illegible]
೬ ,, [illegible]
೩ ,, [illegible]
ವಾರಪತ್ರಕ್ಕೆ ೧ ವರ್ಷಕ್ಕೆ [illegible]
ವಿಶೇಷ ಮಾಹಿತಿ ತಿಳಿಗಿನ ವಿಳಾಸಕ್ಕೆ

ವ್ಯವಸ್ಥಾಪಕ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೨೦-೧-೨೬ ನೇ ಇಸ್ವಿ

ಹಿಂದುಸ್ಥಾನವು ಗುಲಾಮರ ದೇಶವು

ಮಿ. ಶಪುರಜಿ ಸಕಲಾತವಾಲಾ ಇವರ ಭಾಷಣ.

ಮುಂಬಯಿಯಲ್ಲಿ ಕಾಂಗ್ರೆಸ ಕಮಿಟಿಯ ವತಿಯಿಂದ ಮಿ. ಶಪುರಜಿ ಸಕಲಾತವಾಲಾ ಇವರ ಭಾಷಣವಾಯಿತು. ಕಾಂಗ್ರೆಸದ ಅಧ್ಯಕ್ಷರಾಗಿದ್ದ ಶ್ರೀ ಶ್ರೀನಿವಾಸ ಅಯ್ಯಂಗಾರರು ಸಭಾಧ್ಯಕ್ಷರಾಗಿದ್ದರು. ಆಗ ಮಿ. ಶಪುರಜಿ ಇವರು ಮಾಡಿದ ಭಾಷಣದ ಸಾರಾಂಶವು ಮುಂದೆ ಕೊಟ್ಟಂತಿರುತ್ತದೆ—

ಕಾಂಗ್ರೆಸದ ಪ್ರಾರಂಭದಲ್ಲಿ ಈ ದೇಶದ ಮುಂಢಾಳುಗಳು ಮಾಡಿದ ಕಾರ್ಯವನ್ನು ನಾವು ಮರೆಯುವಂತಿಲ್ಲ. ಹಿಂದೂ, ಮುಸಲಮಾನ, ಪಾರ್ಸಿ, ಕ್ರಿಶ್ಚನ್ನ ಮೊದಲಾದ ಎಲ್ಲ ಜನಾಂಗಗಳ ಪ್ರಮುಖರು ಇದರ ಪುರಸ್ಕರ್ತರಾಗಿದ್ದರು. ಈ ಜನರು ದೇಶಕಾರ್ಯವನ್ನು ಘನತೆಯುವದು ಶಕ್ಯವಾಗುತ್ತದೆ. ಆದರೆ ನಾವು ಭವಿಷ್ಯತ್ಕಾಲದ ವಿಚಾರ ಮಾಡತಕ್ಕದ್ದುಂಟು. ಕಾಂಗ್ರೆಸ ಸಭೆಯು ಹಿಂದುಸ್ಥಾನದ ಭಾವೀ ಪಾರ್ಲಮೆಂಟ ಸಭೆಯಾಗುವದೆಂದು ದೇವಿ ಸರೋಜನಿಯವರು ಅನ್ನುತ್ತಾರೆ. ಆದರೆ ಅದು ಮುಂದೆ ಬೊಲ್ಶೆವಿಕ ದೊರೆತನದ ಪಾರ್ಲಮೆಂಟವಾಗುವದೆಂದು ನಾನು ಹೇಳಿಸುತ್ತೇನೆ. ಸರಕಾರವೆಂಬ ಶಬ್ದದಿಂದ ನಾವು ಮೋಹಿತರಾಗತಕ್ಕದ್ದಲ್ಲ. ಇದರಿಂದ ಒಂದು ಶ್ರೇಷ್ಠವಾದ ಶಕ್ತಿಯು ಕನಿಷ್ಠವಾದ ಜನತೆಯ ಮೇಲೆ ಅಧಿಕಾರ ಹಿಡಿಸುವದೆಂದು ಹೇಳುವಂತಾಗುತ್ತದೆ. ಬೊಲ್ಶೆವಿಕ ದರಬಾರವೆಂದರೆ— ಸರ್ವಸಾಧಾರಣ ಜನರು ಕಸ ಒಂದೆಡೆಯಲ್ಲಿ ಕೂಡು ಹೊರೆತನದ ಮಾಡುವದಕ್ಕಾಗಿ ಸಭೆಯು. ಜಾತಿಭೇದ, ಕಾಡತೀಯ ಶಬ್ದಭೇದ ಮುಂತಾದ ಇಂಗ್ಲೀಷ ಪತ್ರಕಾರರು ಹೆದರಿಸುವರು. ಆದರೆ ಇದನ್ನು ನಾವು ಲಕ್ಷಿಸತಕ್ಕದ್ದಲ್ಲ. ಸ್ವರಾಜ್ಯ ಪ್ರಾಪ್ತವಾದಾಗಲೆಲ್ಲ ಎಷ್ಟೊಗಳೆಯತ್ತಮೆಯು ಪ್ರಾಪ್ತವಾಗುತ್ತದೆ ಹೇಗೆದರೆ ಹಾಕತಕ್ಕದ್ದು. ಪ್ರಾಪ್ತಿ ಮಾಡಿಕೊಳ್ಳುವದಕ್ಕಿಂತ ಕೊಂದಿರುವ ಕಾರಕಾರ್ಯಗಳನ್ನು ನಮಗಿಂತ ಉಂಟುಮಾಡುವ ಅಯಶಕಾರಿಗಳು ಮುಂದೆ ಕರಿಯಂಥ ಕೃತ್ಯಗಳು. ನೀವು ಹಿಂದೂ ಜನರು ಆತಿಶ್ರೇಷ್ಠರಿದ್ದೀರಿ. ಪುಣ್ಯಾತ್ಮರಿಯಲ್ಲಿ ಹಿಂದುಳಿದಿದ್ದೀರಿ. ಸ್ತ್ರೀಯರನ್ನು ಕಟ್ಟುತನದಿಂದ ನಡಿಸಿಕೊಳ್ಳುತ್ತೀರಿ. ಎಂಬದಾಗಿ ಗೌರ ಕಾಯಸ್ಥರು ಹೇಳುತ್ತಾರೆ. ಆಹರೆ ಇವನ್ನೆಲ್ಲ ಹಿಂದುಸ್ಥಾನದಂತೆ ರಶಿಯಾ, ಜರ್ಮನಿ, ಮತ್ತು ಫ್ರಾನ್ಸದಲ್ಲಿ ನೋಡಬಹುದೆಂದು ಹಾನು ಪ್ರತ್ಯಕ್ಷ ಕಂಡದ್ದನ್ನು ಹೇಳುತ್ತೇನೆ. ತುಸು ಗೊಂದಲವೆದ್ದರಾಯಿತು... ನಿಮ್ಮ ಸ್ವರಾಜ್ಯ ಸರಕಾರವು ಹರಿದು, ಚೂರಿಯಾಗುವದೆಂದು ಹೆದರಿಸುತ್ತಾರೆ. ಹಿಂದೂ ಜನರನ್ನು ಹೆದರಿಸುವದಕ್ಕಾಗಿ ಮಾಡುವ ಯುಕ್ತಿಯು. ಪ್ರಜಾ ಶಕ್ತಿಯು ಕಡಿಮೆಯಾಗಿರುವತನಕ ಸರಕಾರದ ಶಕ್ತಿಯು ಹೆಚ್ಚುತ್ತವದು. ಪ್ರಜಾ ಕಸವು ಹೆಚ್ಚಾದ ಕೂಡಲೆ ಸರಕಾರದ ಕಸವು ತಾನಾಗಿ ಕಡಿಮೆಯಾಗುತ್ತದೆ. ಕಠಿಯಾದ ಹೊರ್ತು ಪ್ರತಿಯೊಂದು ದೇಶವು ಸರಮಾವಧಿಯಾಗಿ ತನ್ನ ಶಕ್ತಿಯಸ್ಸು ಉಪಯೋಗ ಮಾಡಿ, ಶ್ರೀಮಂತರನ್ನು ಮತ್ತಿಸ್ಸು ಶ್ರೀಮಂತರನ್ನೂ, ಬಡವರನ್ನು ಮತ್ತಿಸ್ಸು ಬಡವರಾಗಿಯೂ ಮಾಡುತ್ತಿರುವದು. ಇವುದರಿಂದ ಹಿಂದುಸ್ಥಾನದಲ್ಲಿ ಕಂಡು ಬರುವ ಪರಿಸ್ಥಿತಿಯಲ್ಲಿ ವಿಶೇಷವೇನೂ ಇರುವದಿಲ್ಲ. ಕಾರಣ ಶ್ರೀಮಂತರ ಶ್ರೀಮಂತಿಕೆಯು ಹೆಚ್ಚುವದನ್ನು ನಿಲ್ಲಿಸುವದು ಅವಶ್ಯವಾದ ಕರ್ತವ್ಯವಾಗಿರುತ್ತದೆ.

ಕಾಂಗ್ರೆಸದಲ್ಲಿ ಹೊಸ ವಿಚಾರ ಸೇರಿದ ಕೂಡಲೆ ಒಡಕು ಹುಟ್ಟಿ, ಅನೈಕ್ಯವಾಗುವದೆಂದು ಹೇಳುತ್ತಾರೆ. ಮೊದಲಿನಿಂದ ಕಾಂಗ್ರೆಸದ ಇತಿಹಾಸ ನೋಡಿರಿ. ಉಪಕಾರಸ್ಮರು, ಸತ್ಕಾರಪ ಉಸಶಾರ ನೆನಸುವಂಥವರೇ ಇದರ ಚಾಲಕರಾಗಿದ್ದರು. ಬಳಿಕ ಧಾರಾಳಭಾಯಿ ನವರೋಜಿಯವರು ಮುಂದೆ ಬಂದು ಹಿಂದುಸ್ಥಾನದಲ್ಲಿ ಆರು ಜನ ಯುರೋಪಿಯನ್ನರು ಮಾತ್ರ ಇರತಕ್ಕದ್ದು. ಉಳಿದವರೆಲ್ಲರೂ ಹಿಂದೀ ಕಾಮದಾತರೇ ಆಗಬೇಕೆಂಬ ನವೀನ ಜಾಗ್ರತಿಯನ್ನು ಶಕ್ತಿಯನ್ನೂ ಹುಟ್ಟಿಸಿದರು. ಬಳಿಕ ಸುರತದ ಕಾಂಗ್ರೆಸ ಸಭೆಯಲ್ಲಿ ಲೋಕಮಾನ್ಯ ತಿಲಕರಿಗೆ ಬೇರೆ ಪ್ರಮುಖ ವಿಚಾರಕ್ಕೆ ಚಲತವಾಯಿತು. ಕಾಂಗ್ರೆಸ ಸಭೆಯು ಪೋಲಿಸರಿಗೆ ಹೆದರಿಕೊಂಡು, ಹುದುಗಿಕೊಂಡು ತರಾವು ವಾಸ ಮಾಡುತ್ತಿದ್ದಾಗ, ಮಹಾತ್ಮಾ ಗಾಂಧಿಯವರು ಮುಂದೆ ಬಂದು, ಅದರ ವಿಚಾರ ಮತ್ತು ಕೃತಿಯಲ್ಲಿ ಕ್ರಾಂತಿ ಮಾಡಿದರು. ಕಮಗೊಂದು ಅಸಾಧಾರಣ ಶಕ್ತಿಯುಟ್ಟೆಂಬದು ಜನರಿಗೆ ಗೊತ್ತಾಯಿತು. ಮುಂದೆ ದೇಶಬಂಧು ದಾಸರು ಬಂದು, ತಮ್ಮದೊಂದು ಕಾರ್ಯಕ್ರಮವನ್ನು ಜನತೆಯ ಮುಂದಿಟ್ಟರು. ಇವೆಲ್ಲವುಗಳಿಂದ ಆದ ಪರಿಣಾಮವೇನು? ಕಾಂಗ್ರೆಸ ಸಭೆಯು ಒಡಿಪ್ಯವಾಗುತ್ತಾ ಬಂದಿತು. ಮುಂದೆ ಕಾಂಗ್ರೆಸ ಸಭೆಯು ಬೊಲ್ಶೆವಿಕ ಕಾಂಗ್ರೆಸವಾಗುವದೆಂದೇ ನನ್ನ ಅಭಿಲಾಷೆ. ಪರದಾಸ್ಯ ವಿಚಾರಗ್ರಸ್ತವಾದ ಸ್ಥಿತಿಯಲ್ಲಿ ಕಾಂಗ್ರೆಸದ ಜನನವಾಯಿತು. ಇದು ಕೇವಲ ಮಾತಾಡುವ ಯಂತ್ರವಾಗಿತ್ತು. ಆದರೆ ತನ್ನ ನಿಜವಾದ ಉದ್ದೇಶವನ್ನು ಬಚ್ಚಿಟ್ಟುಕೊಂಡಿತ್ತು. ಅನೇರಿಕೆಯ ಕಾಂಗ್ರೆಸ ಸಭೆಯವರು ವಸಾಹತಿನ ಸ್ವರಾಜ್ಯದ ಭಾಷಣವಿಲ್ಲದೆ, ಸ್ವಾತಂತ್ರ್ಯ ಸಂಪಾದನೆ ಮಾಡಿದರು. ಆಗಿನಿಂದ ಅನೇರಿಕೆಯ ಕಾಂಗ್ರೆಸ ಸಭೆಯುಂಟು. ಹಿಂದುಸ್ಥಾನದ ಕಾಂಗ್ರೆಸ ಸಭೆಯು ಸರಕಾರದ ಅರಮನೆಯಲ್ಲಿ ತತ್ತೀ ಹಾಕಿ, ಮರಿ ಮಾಡಿತು. ಆದರ ಧ್ಯೇಯವೆಂಬ ಗುಣವಿಶೇಷಣಗಳನ್ನು ಗೊತ್ತುಪಡಿಸಲೇ ಇಲ್ಲ. ಸುತ್ತಲು ಕಂಡುಬಂದ ಪರಿಸ್ಥಿತಿಯ ಪ್ರಕಾರ ಧೋರಣವನ್ನಿತ್ತು. ಸರಕಾರಕ್ಕೆ ಸಂಶಯ ಬಂದರಾಯಿತು. ಆದರ ಧೋರಣದಂತೆ ಸಭೆಯು ತನ್ನ ನಿಶಾನೆ ಹಿಡಿಯುವದು. ಈ ತಂದ ವರ್ತನದಿಂದ ಉಪಿಸ್ಥಾನವಾಧಿಸದು. ಕಾಂಗ್ರೆಸದ ಒಂದು ಪ್ರತಿಜ್ಞಾ ಪತ್ರಿಕೆ ಇರತಕ್ಕದ್ದು. ಅಯರ್ಲಂಡವು ಇಂಗ್ಲಂಡಕ್ಕೆ ತೀರ ಸನಿಯವಾಗಿದ್ದ ದೇಶವು. ಆದರೂ ಆ ದೇಶಿಯರು ಪ್ರಜಾಶಕ್ತ್ಯಾತ್ಮಕದ ಧ್ಯೇಯವಿಟ್ಟುಕೊಂಡರು. ಹಿಂದುಸ್ಥಾನದ ಕಾಂಗ್ರೆಸ ಸಭೆಯವರು ಮೂಲ ಪೀಠಿಕೆ ಇಲ್ಲದಂಥ ಮತ್ತು ಅಸುರಕ್ಷಿತವಾದಂಥ ತಳಪಧಿಯ ಮೇಲೆ ತಮ್ಮ ಮನೋಧರ್ಮದ ಕಟ್ಟಡವನ್ನು ಕಟ್ಟಕೂಡದು. ಅಲರಸರಂತೆ ನಡೆದರೆ— ಅವರು ನಿಮಗೆ ಮುಸ್ಸದ್ದಿಯನ್ನುವರು. ಭಾವುರೆ ಎಂದು ಬೆನ್ನು ಚಪ್ಪರಿಸುವರು. ಆದರೆ ಇದರಿಂದ ನೀವು ಜನತೆಯ ಮನೋಭೂಮಿಯನ್ನು ಸಿದ್ಧಪಡಿಸಿದಂತಾಗುವದಿಲ್ಲ. ಫ್ರಾನ್ಸ, ಇಂಗ್ಲಂಡ, ಅಥವಾ ಜರ್ಮನಿಯಂತೆ ನಿಮ್ಮ ಕಾಂಗ್ರೆಸ ಸಭೆಯು ಸ್ವತಂತ್ರವಾಗಿರುವದಿಲ್ಲ. ಹಿಂದೂ ಜನರು ತಮ್ಮ ಧ್ಯೇಯಾಧಿಮಾನಪೂರ್ಣವಾದಂಥ ತತ್ವಗಳ ಪ್ರಸಾರವನ್ನೇ ಮಾಡತಕ್ಕದ್ದು. ಹಿಂದುಸ್ಥಾನವು ಗುಲಾಮರ ರಾಷ್ಟ್ರವಾಗಿದೆ. ಇದಕ್ಕೆ ಪ್ರಜಾ ಪ್ರಧುತ್ವದ ಒಂದು ಹೊದಿಕೆ ಹಾಕಿದ್ದು ನಿಜ. ನಮ್ಮ ಧ್ಯೇಯವು ನಿಜಾಂಶವುಳ್ಳದ್ದಾಗಿರತಕ್ಕದ್ದು; ನಮಗೇನು ಬೇಕೆಂಬದನ್ನು ಒರೆ ಹೇಳತಕ್ಕದ್ದಲ್ಲ. ಬೇರೆ ರಾಷ್ಟ್ರಗಳಂತೆ ಇದನ್ನು ದೊರೆತಿಸಲು ಪ್ರಯತ್ನಶಾಲಿಯಾಗಿರತಕ್ಕದ್ದು. ಬೇರೆ ಜಯಕಾಲಿಗಳಿಗಿಂತ ಬೇರೆ ಕರಹವಾಗಿ ಇಂಗ್ಲಿಷರು ಹಿಂದುಸ್ಥಾನವನ್ನು ಹಿಡಕೊಂಡಿದ್ದಾರೆ. ಇದೊಂದು ಇಂಗ್ಲಿಷರ ಅಪರಾಧವೆಂದು ನೀವಾಡುತ್ತ ಕೂಡ್ರತಕ್ಕದ್ದಲ್ಲ. ಹಿಂದೂ ಜನರು ಒಂದು ಕಾಲದಲ್ಲಿ ಜಪಾನಿನ ಸ್ಥಿತಿಗತಿಯವರಾಗಿದ್ದರು. ಆ ದೇಶ ಕೂಡ ಇಂಗ್ಲಿಷ ದಂತೆಯೇ ಸಾಮ್ರಾಜ್ಯ ವಿಸ್ತಾರದಲ್ಲಿ ತೊಡಗಿದೆ.

ಪೂರ್ವಕಾಲದ ಜಯಶಾಲಿ ಮತ್ತು ಸ್ವಸ್ತುತಿಪ ಜಯಶಾಲಿಯ ನಡುವೆ ಅಂತರವುಂಟು. ಅಲೆಕ್ಸಾಂಡರ ಮೊದಲಾದ ಜಯಶಾಲಿಗಳು ತಮ್ಮ ಬಾಹುಬಲದ ದಿಗ್ವಿಜಯವಾದಂತಾಯಿತೆನ್ನುವರು. ಕಪ್ಪಕಾಣಿಕೆ ಕೊಡಿರಿ. ಅನೆ ಕುದುರೆ ಕೊಡಿರಿ ಸ್ತ್ರೀಯರನ್ನು ಕೊಡಿರಿ. ಅಂದರೆ ತಮ್ಮ ದೇಶಬಿಟ್ಟು ಹೋಗುವೆನೆಂದು ಅಲೆಕ್ಸಾಂಡರನೆನ್ನುವನು. ನೆಪೋಲಿಯನನ ಕಾಲದ ತನಕ ಇದೇ ವಿಚಾರವಿತ್ತು. ಇಂಗ್ಲಿಷರ ವಿಚಾರ ಮಾತ್ರ ಬೇರೊಂದು ತರಹವಾಯಿತು. ಇವರು ಸಾಮ್ರಾಜ್ಯವಿಸ್ತಾರ ವಾದಿಯಾದರು. ಇದರಿಂದಲೇ ನಿಮ್ಮ ಜೀವನ ಸಾಗುವದೆಂದೂ, ಇಲ್ಲದಾದರೆ- ಮರಣವು ತಪ್ಪಿದ್ದಲ್ಲವೆಂದೂ ತಿಳಿದಿದ್ದಾರೆ. ಇಂಗ್ಲಂಡದ ಕಳೆದ ೬೫ ವರ್ಷಗಳ ಇತಿಹಾಸ ನೋಡಿರಿ. ಬಹಿರಾದು ಅತ್ಯಂತ ಚಿಕ್ಕ ದೇಶವು. ಆದರೆ ಇಂದು ಅದು ಜಗತ್ತಿನಲ್ಲಿ ರಾಜಕೀಯ ಮತ್ತು ಸಾಂಪತ್ತಿಕ ದೃಷ್ಟಿಯಿಂದ ಅತಿ ಬಲಾಢ್ಯ ದೇಶವಾಗಿರುತ್ತದೆ. ಸ್ವಂತ ಸಾಮರ್ಥ್ಯದಿಂದ ಅದು ಈ ಸ್ಥಿತಿಗೆ ಬಂದಿಲ್ಲ. ಎರಡನೆಯ ದೇಶಗಳು ಹುಟ್ಟಿಸಿದ್ದನ್ನು ತನ್ನ ದೇಶಕ್ಕೆ ತಂದು, ಬಲಾಢ್ಯವಾಗಿರುತ್ತದೆ. ಹಿಂದುಸ್ಥಾನದಲ್ಲಾಗುವ ಕಚ್ಚಾ ಪದಾರ್ಥಗಳನ್ನು ಖರೀದಿಸಿ, ಅವನ್ನು ತಯಾರಿಸಿ, ರೊಕ್ಕ ಸಂಪಾದಿಸಿ, ಕೋಟ್ಯಂತರ ಸಂಖ್ಯೆಯಿಂದ ಸರಕಾರದ ಕೆಲಸಕ್ಕಾಗಿ ವಿನಿಯೋಗಿಸಿ, ಅಚ್ಚ ಸಂಖ್ಯೆಯಿಂದ ಸಂಗ್ರಹ ಮಾಡುತ್ತಿರುವದು. ಈ ಪ್ರಕಾರ ಕುಬೇರವಾಗುತ್ತಿರುವಂಥ ಸರಕಾರಕ್ಕೆ ಹಿಂದುಸ್ಥಾನಕ್ಕೆ ಹಕ್ಕು ಸ್ವಾತಂತ್ರ್ಯಗಳನ್ನು ಕೊಡಿರೆಂದು, ಪೂರು ಸಾರಿ ಸರಾವು ಸಾಸ ಮಾಡುವದರಿಂದಲೂ, ಕೆಲವು ಡೆಪುಟೇಶನಗಳನ್ನು ಕಳಿಸುವದರಿಂದಲೂ, ಬೇಡಿಕೊಳ್ಳುವದರಿಂದಲೂ ಉದ್ದೇಶ ಸಿದ್ಧಿಗೆ ಹೋಗುವ ದುಂಟೇ? ನಿಶ್ಚರ್ಯ ಮತ್ತು ಅಧಿಕಾರವು ಅಲ್ಲಿ ಕೂಡ ಕೆಲ ಜನರ ಕೈಸೇರಿದ್ದು, ಇವುಗಳ ಉಪಭೋಗವು ಅನ್ಯರಿಗೆ ದೊರೆಯುವದಿಲ್ಲೆಂಬದನ್ನು ಮರೆಯಕೂಡದು. ಹಿಂದುಸ್ಥಾನದ ಶ್ರೀಮಂತರು ಮತ್ತು ವಿಲಾಯತಿಯ ಶ್ರೀಮಂತರು ಇವರ ನಡುವೆ ಎಷ್ಟೂ ಹೆಚ್ಚು ಕಡಿಮೆ ಇರುವದಿಲ್ಲ. ಮುಂಬಯಿಯುಲ್ಲಿರುವ ಹಿಂದೂ, ಮುಸಲಮಾನ, ಪಾರ್ಸಿ ಅಥವಾ ಬೋಜಾ ಜಾತಿಯ ಯಾವದೇ ಒಂದು ಶ್ರೀಮಂತ ಮನೆತನದ ಉದಾಹರಣೆ ತೆಕ್ಕೊಳ್ಳಿರಿ. ಇವರಿಗೂ ಇಂಗ್ಲಿಷ ಶ್ರೀಮಂತರಿಗೂ ಏನೂ ಭೇದವಿಲ್ಲೆಂದು ಕಂಡುಬರುವದು. ಇದ್ದರಿಂದ ಬಡವರ ಸ್ಥಿತಿಯು ಸುಧಾರಿಸಬೇಕಾದರೆ ಯುರೋಪದಂತೆ ನಿಮ್ಮ ವಿಚಾರಗಳಲ್ಲಿ ಕ್ರಾಂತಿಯಾಗಲಿಕ್ಕೆ ಬೇಕು. ಸಾಡಾ ವರ್ತನವು ಶ್ರೀಮಂತರಿಗೆ ಪ್ರಿಯವಾದರೆ ಬಡಪಂಗೆ ಪಾಪವಾಗುತ್ತದೆ. ಬಡವರಿಗೆ ಮುನ್ನೂರು ವರ್ಷಗಳ ಹಿಂದೆ ಇದ್ದಂತೆ ಈಗ ಬಾಳವೆ ಮಾಡಿಕೊಂಡಿರಬೇಕೆಂದು ಹೇಳುವದು ಎಂದಿಗೂ ಶ್ಯಾಯವಾಗಲಾರದು. ಶ್ರೀಮಂತ ಜನರೇ ಎಳೆ ತಮ್ಮ ಐಶ್ವರ್ಯ ಬೆಳೆಸುತ್ತಿರುವದು? ವಿಲಾಯತಿಯಲ್ಲಿ ನಡೆದ ಪ್ರಕಾರ ಕೋಡಿಕೊಂಡು ಅದರ ಲಾಭ ಪಡಕೊಳ್ಳುವದು ಅವಶ್ಯವಾದದ್ದು.

ನಾನು ಕಳೆದ ೩೦ ವರ್ಷಗಳಿಂದ ಇಂಗ್ಲಂಡದಲ್ಲಿ ಕೂಲಿಕಾರರ ಪಕ್ಷವಿಡಿದು, ರಾಜಕೀಯ ಪ್ರಸಕ್ತಿಯಲ್ಲಿ ಸೇರಿದ್ದೆನು. ಮಿ. ಲಾಯಿಡ ಜಾರ್ಜ. ರಾಮಸೆ ಮ್ಯಾಕಡೊನಾಲ್ಡರು ದಾದಕಪರ ಅರಮನೆಗೆ ಹೋಗುವದೇನೂ ತಪ್ಪಲಿಲ್ಲ. ಅವರು ತಮ್ಮ ದೇಶದಲ್ಲಿ ಮಾಡಿದಂಥ ಕಷ್ಟಗಳನ್ನು ನಾವು ಈ ದೇಶದಲ್ಲಿ ಮಾಡುವದು ಸರಿಯೇ? ಪಾರ್ಲಮೆಂಟ ಪದ್ಧತಿಯು ದೊರೆತನದ ಆಶಂಬರದಿಂದ ಪ್ರತಿಯೊಂದು ದೇಶದ ಜನರು ಮೂರ್ಖ ಕೋಟಿಯಲ್ಲಿ ಎಳೆತುಳ್ಳಿದ್ದಾರೆ. ವ್ಯವಹಾರದಲ್ಲಿ ಸಮಂಜಸವೆಂದು ಕಾಣದಂಥ ಪಾರ್ಲಮೆಂಟದ ಬೆನ್ನು ಹತ್ತಬೇಡಿರಿ. ರಶಿಯಾದಲ್ಲಿ ಯುರೋಪಿಯನ್ನರಿಗಿರುವಷ್ಟು ಹಕ್ಕುಗಳೇ ಪೊಂಗಲ, ತಾರ್ತರಿ, ಬುದ್ಧ ಮೊದಲಾದ ಜಾತಿಗಳಿಗುಂಟು. ಪುರಾತನದ ರಾಜಕೀಯ ಪದ್ಧತಿಗಳನ್ನು ಬಿಟ್ಟು, ದೊಲ್ಸೆವಿಕ ಸಿದ್ಧಾಂತಗಳ ಅಭ್ಯಾಸ ಮಾಡಿರಿ. ವಾರ್ಲಮೆಂಟ ಪದ್ಧತಿಯಿಂದ ಯಾರಿಗೂ ಹಿತವಾಗುವದಿಲ್ಲೆಂಬದನ್ನು ಧ್ಯಾನದಲ್ಲಿಡಿರಿ.

ಕೇಪಟಾವುನಕ್ಕೆ ಎಮ್ಮೆಡನ್ನಡ ಆಗಮನ.

—೦—

ಜರ್ಮನಿನ್ಯಾ ಯುದ್ಧದಲ್ಲಿ ಮದ್ರಾಸ ಮತ್ತು ಮಂಗಳೂರ ಪ್ರಾಂತದಲ್ಲಿ ಹೋಳೇ ಹಾಕಿದ ಎಮಡನ್ನೆ ಹಡಗವು ಮುಳಿದು ಮೂಲಿಗುಂಪಾಯಿತು ಅಧೇ ಹೆಸರಿಟ್ಟು ಇನ್ನೊಂದು ಪ್ರಯಾಣಕ್ಕೆ ಹಡಗಿ ಬಿಟ್ಟಿದ್ದಾರೆ. ಇದು ಜಲಪರ್ಯಟನಕ್ಕೆ ಹೊರಟಿದ್ದು, ಈಗ ಕೇಪಟಾವುನಕ್ಕೆ ಬಂದಿದೆ. ಇದನ್ನು ನೋಡಲಿಕ್ಕೆ ನಾವಿರಾರು ಜನರು ಬಂದರು. ನಾ ಮುಂದೆ ನೀ ಮುಂದೆ ಎಂದು ಗುದುಮುರಿಗೆ ಹಾಕಿದರು. ಕಡಿಗೆ ಎರಡು ಸಾವಿರ ಜನರನ್ನು ಬಿಟ್ಟರೂ, ಜನರ ದಟ್ಟನೆಯು ಎಷ್ಟೂ ಕಡಿಮೆಯಾಗಲಿಲ್ಲ. ಜನರು ಸಮುದ್ರ ಮುಖಾಂತರ ಸಾಯುವರೆಂಬ ಹೆದರಿಕೆಯಿಂದ, ಗುಂಪಿನ ಮೇಲೆ ಬಿದ್ದು ಮತ್ತು ನೀರು ಬಿಟ್ಟರು. ಅನೇಕರ ಅಂಗಿಗಳು ಕಿತ್ತವು. ಅನೇಕರಿಗೆ ಸರ್ವಾಂಗಸ್ನಾನವಾಯಿತು. ಈ ಪ್ರಕಾರವು ಮುಂಜಾಗ್ರತೆಯ ಉಪಾಯ ಮಾಡಿದ್ದರೆ- ಅನೇಕರಾಗಿ ಜನರಿಗಾಗುತ್ತಿತ್ತು.

ಚೀನದಲ್ಲಿ ಕೋಲಾಹಲ.

—೦—

ಪಾದ್ರಿಗಳ ಗುಡಿಗಳು ನೆಲಸಮವಾದವು.

—೦—

ಚೀನದಲ್ಲಿ ಪುಂಡರ ಪುಂಡಾಟಿಕೆಯು ಪ್ರಬಲವಾಗುತ್ತಾ ನಡೆದಿದೆ. ಪೂರ್ವಾಪರಲ್ಲಿದ್ದ ಅಮೇರಿಕಾ ಹಾಗು ಇಂಗ್ಲಿಷ ಮಿಶನರಿಗಳ ಗುಡಿಗಳನ್ನು ಕೆಡವಿ, ಅವನ್ನು ನೆಲಸಮ ಮಾಡಿದರು. ಪ್ರಾಣಹಾನಿಯಾಗಲಿಲ್ಲ. ಆದರೆ ದ್ರವ್ಯಹಾನಿ ಬಹಳವಾಯಿತು.

ಇದೇ ಪ್ರಕಾರ ನಾಸಕಾಯಿ ಎಂಬಲ್ಲಿಯೆ ವಿದ್ಯಾರ್ಥಿಗಳು ದಂಗೆ ಮಾಡಿ, ಸ್ಪೇನರ ದೇವಾಲಯವನ್ನೂ ಬೇರೆ ಕಟ್ಟಡಗಳನ್ನೂ ಧ್ವಂಸ ಮಾಡಿದರು. ಚೀನ ಸೈನಿಕರು ದೊಂಬಿ ಮಾಡಿ, ಒಬ್ಬ ಇಂಗ್ಲಿಷ ಗೃಹಸ್ಥನನ್ನು ಹೊಡೆದು, ಸುಲಿದರು.

ಪಾಂಡವ ಕೌರವರ ಒಗ್ಗಟ್ಟು.

—೦—

ಚೀನದಲ್ಲಿ ಕಂತಾನ ಮತ್ತು ಪೆಕಿಂಗ ಸರಕಾರಗಳು ಪರಸ್ಪರ ಕೌರವ ಪಾಂಡವರಂತೆ ಕಾದು ಕ್ಷೇತ್ರದ ಯುದ್ಧ ನಡಿಸುತ್ತವಷ್ಟೇ; ಹೊರಗಿನ ವೈರಿಯು ಬಂದರೆ- ಇಬ್ಬರೂ ಒಂದೆಂದು ಧರ್ಮರಾಯನು ಹೇಳಿದ ನೀತಿಗನುಸರಿಸಿ, ಇವೆರಡೂ ಸರಕಾರಗಳು ಇಂಗ್ಲಿಷರ ವಿರುದ್ಧ ಒಂದಾಗುವವು. ಹಾಂಕಾಂಗನಿಂದ ಬ್ರಿಟಿಶರು ಗೆಟ್ಟೇ ಕಗೆದಿದ್ದಾರಷ್ಟೇ; ಇವರು ಅಲ್ಲಿ ಪುನಃ ಕಾಲೂರಿ ಪ್ರಯತ್ನಿಸಿದರೆ- ತಾವು ಕಂತಾನ ಸರಕಾರಕ್ಕೆ ಸಹಾಯ ಮಾಡಕ್ಕವೆಂದು ಪೆಕಿಂಗ ಸರಕಾರದವರು ಹೀಗೆ ಮಾಡಿದ್ದಾರೆ.

ನೀಲಗಿರಿಯಲ್ಲಿ ವಿಲಾಯತಿ ಮತ್ತು ದೇಶಿಯ ಶರೆದು ಮಾರಾಟವನ್ನು ಪೂರಾ ನಿಲ್ಲಿಸಬೇಕೆಂಬ ಠರಾವನ್ನು ಮಿ. ಮ.ನಿಸ್ವಾಮಿ ಪಿಳ್ಳೈಯವರು ಮದ್ರಾಸದ ಕೌನ್ಸಿಲದಲ್ಲಿ ತರತಕ್ಕವರಾಗಿದ್ದಾರೆ.

ಕೊಲೆಪಾತಕಿ ಅಬ್ದುಲ ರಸೂಲನ ವಿಚಾರಣೆಯು ಸೆಶನದಲ್ಲಿ ೨೪ ನೆಯ ತಾರೀಖಿನ ದಿವಸ ನಡೆಯುವದು. ಈತನು ಕೊಲೆಯ ದಿವಸ ಪುಷ್ಟ ನಿದ್ದನೆಂದು ೪೫೯ ಸಾಕ್ಷಿದಾರರ ಯಾದಿಯನ್ನು ಕೊಟ್ಟಿರುವ. ಈ ಒಗ್ಗೆ ಜರ್ಜಯಾಗಿ, ೨೨೦ ಕ್ಕೆ ತಂದರು.

ಕೈದರಾಬಾದಿನ ನಿಜಾಮಸಾಹೇಬರು ತಮ್ಮ ಮಕ್ಕಳಿಗೆ ಒಟ್ಟಾ ೨೦೦ ಪದವಿ ಕೊಟ್ಟರು.

ನೋಟೀಸು

ಹಾನಗಲ್ಲ ತಾಲ್ಲೂಕ ಬಾದಮಗಟ್ಟಿಯಲ್ಲಿರುವ ಸುಬ್ಬಾಜಿ ಗೋವಿಂದ ಪಾಟೀಲ ಕುಲಕರ್ಣಿ ಇವರಿಗೆ—

ಭೀಮಾಜಿ ಗೋವಿಂದ ಪಾಟೀಲ ಕುಲಕರ್ಣಿ ಸಾ॥ ಬಾದಮಗಟ್ಟಿ ತಾಲ್ಲೂಕ ಹಾನಗಲ್ಲ ಇವರು ಕೊಡುವ ನೋಟೀಸ ಏನಂದರೆ-

ನೀನು ನಂನ ಖಾನ ತಪ್ಪಿಸಿದ್ದು ನನಗೆ ಗೊತ್ತಾಗಿ ನೀ ಇಸ್ವಿಯಲ್ಲಿ ಫಲಾನೆ ಫಲಾನೆ ಬುಲತಾನು ಕಂಬಿ ನಾನು ನಿನ್ನನ್ನು ಬೇಕಾದ ಹಾಗೆ ಸಂರಕ್ಷಣೆ ಮಾಕುತ್ತೇನೆ. ನಂನ ಮಗನಾದ ಗೋವಿಂದಾ ಅಂಬುಸವನನ್ನು ದತ್ತಕ ಮಾಡಿಕೋ ಅಂತಾ ನನ್ನನ್ನು ಆಗ್ಗೆ ಅಜ ಹಾನು ತಿಂಗಳ ದೀಡತಿಂಗಳ ವರೆಗೆ ಒಳ್ಳೇ ರೀತಿಯಿಂದ ಮರ್ಜಿ ಹಿಡಿದು ಎಪ್ರೆಲ ತಿಂಗಳ ೧೯೨೬ ಇಸ್ವಿ ತಾ॥ ೨ ನೇ ದಿವಸ ಹಾನಗಲ್ಲ ಸಬ್ರಿಜಿಸ್ಟ್ರರ ಕಛೇರಿಯಲ್ಲಿ ಕಾಗದ ಮಾಡ್ಸೀದಿ ಆ ಕಾಗದದಲ್ಲಿ ನೀನು ನಾ ಯೋವರಿಗೆ ನಿನ್ನನ್ನು ಸಂರಕ್ಷಣೆ ಮಾಕತೇನೆ ಅಂತಾ ಹೇಳಿದ್ದು ಆ ಕಾಗದದಲ್ಲಿ ಕಾಣ್ಣೆಲ್ಲಾ ಮತ್ತು ನಮ್ಮ ಜ್ಯೆಷ್ಠಿ ಧರ್ಮದ ಪ್ರಕಾರ ದತ್ತಹೋಮ ಆಗಬೆ ದತ್ತಹೋಮ ಮಗ್ಗೆರಿ ತೀರಿದೆ ಅಂತಾ ಸದರಿ ಕಾಗದದಲ್ಲಿ ಬರಿಸೀದಿ ಆ ಕಾಗದ ಒರಿಜೋ ಕಾಲಕ್ಕೆ ನನಗ ಬಹಳೇ ಆಜಾರಿಯಿದ್ದ ಪ್ರಯುಕ್ತ ನಾನು ಕಾಗದ ಬರಿದದ್ದು ನೋಡುವಂತೆ ಇದ್ದಿದ್ದಿಲ್ಲಾ ಜಾಲಾಮೆಯಿಂದ ಸದರಿ ಕಾಗದಕ್ಕೆ ನಂನ ಸಹಿ ತಗೆಸಂಡಿರುತ್ತೀದಿ ತಿರಿಗಿ ಪ್ರಸಃ ದತ್ತಕ ಪತ್ರ ಆದ ಮೇಲೆ ಬಜಮಾನು ಏಳು ಎಂಟು ದಿವಸದಲ್ಲಿ ನನಗೆ ಜಡ್ಡು ಕಡಿಮೆ ಆದ ಕೂಡಲೇ ದತ್ತಕ ಪತ್ರ ಕೊಡು ಅಂತಾ ಕೇಳಿದೆ ಆದಕ್ಕೆ ನಾನು ಕೊಡುವದಿಲ್ಲಾ ಅಂತಾ ಹೇಳಿದಿ ಆಗ್ಯೆ ನನಗೆ ಸಂಶಯ ಬಂತು ನುಂದೆ ಆಜಮಾನು ಮಂದು ತಿಂಗಳ ಆದನಂತರ ನಂನ ಸಂಗಡ ನ್ಯಾಯಾಡಿ ನನ್ನನ್ನು ಸೊರಗೆ ಹಾಕಿದಿ ಆದರೂ ಇಪತ್ತಿನವರಿಗೆ ನೀನು ನಂನ ಮನಸಿನಲ್ಲಿ ತಿಳಿದು ನನ್ನನ್ನು ಸಂರಕ್ಷಣೆ ಮಾಡ್ಯಾನು ಅಂತಿ ಮನಗ ನಿರೀಕ್ಷಣ ಮಾಡಿದೆ ಆವಯಾ ನಿಂನ ಮನಸಿಗೆ ಬರಲಿಲ್ಲಿ ಕಾರಣ ನೋಟೀಸು ಕೊಡುವ ಭಾಗ ಬಿತ್ತು ಏನಂದರೆ- ಸದರಿ ದತ್ತಕ ಆದದ್ದು ರಹಿತ ಆದೆ ಯಾಕಂದರೆ ನೀನು ದತ್ತಕ ಪತ್ರದಲ್ಲಿ ಬರಿಸಿದ್ದು ಬಹಳೇ ಗೈರ ಇರುತ್ತೆದೆ. ಮುಂದಾದರೂ ನನ್ನನ್ನು ಸಂರಕ್ಷಣೆ ಮಾಡುವದಿಲ್ಲೆ ಅಂತಾ ಕಂಡುಬಂದದ್ದರಿಂದಲೂ ನೋಟೀಸು ಕೊಟ್ಟಿರುತ್ತೇನೆ ಕಾರಣ ಈ ದತ್ತಕ ಆದದ್ದು ಆಗದೇ ರಹಿತ ಇರುತ್ತೆದೆ ನಿನ್ನ ಮನಸಿನಿಗೆ ದತ್ತಕ ತಂದಿಯ ಹೆಸರು ಪಟ್ಟ ಸದಿ ಏನ ಹೊಸ ಜನಕ ತಂದಿಯ ಹೆಸರು ಪೆಟ್ಟಿಕ್ಕೆದ್ದು ಅಂತ ಕೊಟ್ಟ ನೋಟೀಸು

ತಾ॥ ೧೯-೧೨-೨೫ ನೇ ಇಸ್ವಿ

ಸಹಿ ಭೀಮಾಜಿ ಗೋವಿಂದ ಪಾಟೀಲ ಕುಲಕರ್ಣಿ ಬಾದಮಗಟ್ಟಿ

ಮದ್ರಾಸ ಕೌನ್ಸಿಲಿನ ಲೋಕನಿಯುಕ್ತ ಮೆಂಬರರಾದ ಡಾಕ್ಟರ ಮುತ್ತಯ್ಯ ಸವರಿಂದ
ಪರಿಕೋಧಿಸಲ್ಪಟ್ಟ
ಮೆಸರ್ಸ ಪಿ. ವ್ಹಿ. ರಾಜನ ಕಂಪನಿಯ

ಸುಗಂಧ ನಶ್ಯದ ಪುಡಿಯು.

ಪ್ರಖ್ಯಾತಿ ಹೊಂದಿದ ಈ ನಶ್ಯದ ಪುಡಿಯು ಅಮೂಲ್ಯವಾದದ್ದಿದ್ದು ಲಕ್ಷಾ ದಿ ಜನರು ಇದರ ಉಪಯೋಗ ಮಾಡಿದ್ದಾರೆ. ಇದರ ಗುಣದ ಬಗ್ಗೆ ಸಾವಿರಾರು ಒನರು ಸರ್ಟೀಫಿಕೇಟುಗಳನ್ನು ಕೊಟ್ಟಿದ್ದಾರೆ. ಈ ಪುಡಿಯ ಉಪಯೋಗದಿಂದ ಗುಣವಾಗುವ ವ್ಯಾಧಿಗಳು:— ಪಿನಸು, ಅರತಲೆನೋವು, ತಲೆಯಲ್ಲಾಗುವ ಬೇರೆ ಪ್ರಕಾರಗಳು ಕಣ್ಣುಗಳಲ್ಲುಂಟಾಗುವ ಎಲ್ಲಾ ವ್ಯಾಧಿಗಳು ದೂರವಾಗಿ ಸ್ಮರಣ ಶಕ್ತಿಯು ಹೆಚ್ಚುತ್ತದೆ. ಬೇರೆ ನಶ್ಯದಲ್ಲಿ ಈ ನಶ್ಯದ ಒಂದು ಬೆಟಿಕೆಯನ್ನು ಕೂಡಿಸಿದರೆ ಎಲ್ಲವೂ ಸುಗಂಧವಾಗುವದು. ಮಾದರಿ ಪಿಠಿ ಉಚಿತವಾಗಿ ದೊರೆಯುವದು.

ಸಾದಾ ಮದ್ರಾಸ ನಶ್ಯ ೧ಟಿಂ ತೊ ವೀಸಿ ಒಂದಕ್ಕೆ ನಂಬರ ೧ ೪-೦-೦
,, ೨ ೩-೪-೦

ದಯವಿಟ್ಟು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ತಂತಿ ವಿಳಾಸ- ನಸ್ಯಹಂ | ವಿ. ವ್ಹಿ. ರಾಜನ ಮತ್ತು ಕಂಪನಿ,
೪೪ ಗೋವಿಂದಪ್ಪ ನಾಯಿಕನ ಬೀದಿ ಜಾರ್ಜಟೌನು, ಮದ್ರಾಸ

ಅಕ್ಷರಕರೇ! ಇತ್ತ ಅಕ್ಷರ ಕೊಡಿರಿ
ವಿದ್ಯಾರ್ಥಿಗಳ ಪಾಲಕರೇ! ಇದನ್ನು ಓದಿರಿ.

೨-೩-೪ ಹಾಗೂ ೫ ನೆಯ ಇಯತ್ತೆಗಳ
ಅಂದವಾದ ರೂಲಿನಿಂದ ಎಸೆವ
ಚಂದವಾದ ಕವ್ವರಿನಿಂದ ಚಿತ್ತೈವ
ಸುಂದರವಾದ ಕಾಪೀಬುಕ್ಕುಗಳು ನಮ್ಮಲ್ಲಿ ಸಿಗುವವು
ಪ್ರತಿಯೊಂದು ಕಾಪಿಯ ಬುಕ್ಕಿಗೆ ಒಂದು ಆಣೆ.
ಶೋಕಿ ಕೊಳ್ಳುವವರಿಗೆ ವಿಶೇಷ ಸವಲತ್ತು ಕೊಡುವೆವು
ಎದ ಹೆಸರು ಪೋನ್ಸ್ ಟಿಕೇಟುಗಳನ್ನು ಕಳುಹಿಸಲ್ಲಿ
ಪ್ರತಿಯೊಂದು ಇಯತ್ತೆಗೆ ಒಂದರಂತೆ
ಹಾಲ್ಟು ಕಾಪಿಗಳನ್ನು ನಮೂನೆಗೆ ಕಳುಹುವೆವು.
ಕಾಪಿಯ ಬುಕ್ಕುಗಳೆಲ್ಲವೆ ನಮ್ಮಲ್ಲಿ
ಚ, ಹ, ಬೆನಕ್ಕಿರ ಕಿರಾಣಿ ಮರ್ಚಂಟ್ಸ, ಕಲಘಟಗಿ
ಇವರ ಎಸ್ಟೇಟಸಾಮಾಜ, ಕೆಂಪು ಪೀಠೇ ಮಸೇಜಿಟುಗಳು
ಯೋಗ್ಯದರದಿಂದ ದೊರೆಯುವವು.
ವಿಶೇಷ ಮಾಹಿತಿಗಾಗಿ ಕೆಳಗಿನ ಎರಡು ವಿಳಾಸಗಳಲ್ಲಿ
ನೀಕಾದ ಒಂದು ವಿಳಾಸಕ್ಕೆ ಬರೆದುಕೊಳ್ಳಬಹುದು.
೧ ಆದಬಂಧು ಆ್ಯಂಡ ಬ್ರದರ್ಸ ಕಲಘಟಗಿ,
೨ ವಿಜಯ ಆಫೀಸ ಧಾರವಾಡ

ಚಂದಾದಾರರಿಗೆ ಸೂಚನೆ.

ಜಾನೇವರಿ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರಿ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂಬ ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ADVERTISEMENT

— ೨೦೦ —

THE CIVIL ENGINEERING SCHOOL, LUCKNOW.

Maintained & Managed by the Hindu Education Society.
Registered under Act xxi of 1860)

Trains candidates for the Subordinate Engineering Services. The School has been highly recommended for Grant-in-aid, by Chief Engineer & Secretary, Irrigation Branch, P. W. D, U. P., & the Board of Industries, U. P. The Rules of Irrigation Branch U. P. also provide for the employment of successful students of the School. Apply for full particulars and prospectus to the Principal.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೆಂಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವೈಕಾರ್ಯರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1440

ವಿಜಯ

ಸತ್ಯ ಪ್ರ ಬೆಲೆ ಅಧ್ಧ ಆಣೆ

ಸಂಪಾದಕರು:— ಅಣ್ಣಾ ಬಾರ್ಯ ಬಾಳಾಚಾರ್ಯ ಹೊಸಳೇರಿ.

ವರ್ಷ ೮ ಧಾರವಾಡ ಶುಕ್ರವಾರ ತಾರೀಖು ೨೧ನೇ ಜಾನೇವಾರಿ ೧೯೩೨ ಸಂಖ್ಯೆ ೧೨

ಕಿರ್ಲೋಸ್ಕರ ಕಬ್ಬಿನ ಗಾಣಗಳು.



ಮೊನ್ನೆ ಪ್ರತಿ ಪ್ರದರ್ಶನದಲ್ಲಿ ಈ ಕವಡಾಲ ಗಾಣಕ್ಕೆ ಪದಕವು ದೊರೆತಿರ ಹೆಚ್ಚಿನ ಸಂಗತಿ ಒಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಲ್ಲಾ ನಾತಾರಾ

ಮೂರು ಮೋಟಾರಗಳ ಪರಾಪಟ್ಟೆ.

ತಿರಪಟ್ಟು ನೋಟುರ ಲಾ ಗಾನಾರು ಜನರು ಕಾತ್ರನವು ಬಂದು, ಗಿ ಜರು ಕಾತ್ರನವು ಮಕು, ಜೇವಿನೈಟ ಸ್ಪರ್ಧಿಟು ಟೂರಿಂಗ ಕಾರ ಈ ಮೂರು ಮೋಟಾರಗಳನ್ನು ಮೂರತ್ಕಗಳುದ್ದೇನೆ. ಇವು ಉತ್ತಮ ಸ್ಥಿತಿಯಲ್ಲಿದ್ದು, ಸದ್ಯದಲ್ಲಿ ಸರ್ವೀಸಿನಲ್ಲಿರುತ್ತವೆ. ಕೊಳ್ಳಲಿಚ್ಛಿಸುವವರು ಖರೀದಿ ಮಾಡಿಕೊಳ್ಳಬಹುದು. ಕ್ರಯ ಮುಂತಾದ ಬಗ್ಗೆ ನಮ್ಮಿಷ್ಟರು ಅಗತ್ಯವಾದ ವಿಚಾರಣೆಯ ಉದ್ದೇಶಕ್ಕೆ ಎ ಹ ರಪನವಳ್ಳಿ ಮಾಜ ರಿಸೆ ರು ಅಶ್ವಿನ ಜೀಲರ ಹಾಲಗೆ ಎನ್.ರಿ ಧಾರವಾಡ ಇವರನ್ನು ವಿಚಾರಿಸಿರಿ.

ಎ ನಾಯ ಭಸ್ಮರಿ ಕಿರ್ಲೋಸ್ಕರ
ಕಿರ್ಲೋಸ್ಕರ ಮೋಟಾರ ಸರ್ವೀಸ
ಸೂಚನೆ— ಮೂರೂ ಮೋಟಾರ ಒಗೊಂದಲ್ಲಿ ಸ್ಪೋ ವಿ ಖರೀದಿಸಬಹುದು

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಸುತ್ತು ಒಳಗಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಒಳಗೆ ಒಂದಾಣೆ ಅಚೆ ಇನ್ಸರ್ಶನ್ ಪ್ರತಿಯೊಂದು ಒಳಗೆ ಎರಡು ಆಣೆ ಸರಾ ಕಾರಿ, ಮ್ಯೂನಿಸಿಪಾಲಿಟಿ ಲೋಕಲಬೋರ್ಡ ಸೇರಿದ ಬ್ಯಾಂಕ ಮಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷ ವಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ತರು ಆಣೆ ಡಬಲ್‌ಕಾಲಮಿನ ಒಳಗಿಗೆ ಇಮ್ಮಡಿ ತಾರ್ಯ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡಬಹುದು. ವ್ಯವ್ಯ. ವಿಜಯ

ವಿಜಯದ ವರ್ಗಣೀದರ

—೦—

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೦—೦ ರೂ
೬ ,,	೬—೨—೦ ರೂ
೩ ,,	೪—೦—೦ ರೂ

ವಾರಪತ್ರಕ್ಕೆ ೧ ವರ್ಷಕ್ಕೆ ೩—೧೨—೦ ರೂ

ಹೆಚ್ಚಿನ ಮಾಹಿತಿ ಕೆಳಗಿನ ವಿಳಾಸಕ್ಕೆ

ವ್ಯವಸ್ಥಾಪಕ ವಿಜಯ ಧಾರವಾಡ

ಧಾರವಾಡ ಅರ್ಬನ ಕೋ. ಆಪರೇಟಿವ್ವ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ವ ತ್ರಿಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಿಜಸ್ಟರ್ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ

ಶ್ರೇಷ್ಠವಾದ ಸಾನ.

ಪೆಂದಿಗೆಯು ಒರು ಲಕ್ಷದ ಮೇಲುಂಟು. ಚೆಕ್ ಹುಂಡಿ ಮೂದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲ್ಪಡುವದು. ಕನಿಷ್ಠವು ಒತ್ತಾಯೇರ ಕರದ ವಿಷಾದಟಿಗಳಿಗೆ ಹನ್ನೆರಿಗಿ ಬಡ್ಡಿ ಕೊಡಲಾವದು.

ವಿಶೇಷ ಸಂಗತಿಗಳನ್ನು ಕೆಳಗೆ ನಹೀ ಮಾಡಿದವ ತಿಳಿದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತ್ತಿ
ವ್ಯವಸ್ಥಾಪಕ ಧಾಯವೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ದಿವಾಜಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಯ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಚಾಲೀನೆಗಳನ್ನು ವತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಬ್ಬೂರ
ಮ್ಯಾನೇಜಿಂಗ ಧಾಯವೆಕ್ಟರ

ವಿಜಯ.

ಧಾರವಾಡ ತಾ- ೨೧-೧-೨೩ ನೇ ಇಸ್ವಿ

ಶವಕ್ಕೆ ಸಂಜೀವನೀ ಹಾಕುವದು

ನಾಗಪೂರ ಮತ್ತು ಬಂಗಾಲ ಸರಕಾರಗಳು ಶವಕ್ಕೆ ಸಂಜೀವನೀ ಹಾಕಿದಂಥ ಶೂರತನವನ್ನು ಜಗತ್ತಿನ ಮುಂದೆ ತೋರಿಸಿಕೊಂಡವು. ಇವೆರಡೂ ತರಹವು ಮಾತ್ರ ಬೇರೆ ಬೇರೆಯಾಗಿರುತ್ತವೆ. ನಾಗಪೂರ ನಾಡಿನಲ್ಲಿ ಪ್ರತಿಯೋಗಿ ಸಹಕಾರಿಗಳ ವರ್ಚಸ್ಸು ಹೆಚ್ಚಾದ್ದರಿಂದ, ಗವ್ಹರ್ನರಸಾಹೇಬರು ಮಂತ್ರಿಗಳನ್ನು ನೇಮಿಸಿಕೊಂಡರು. ಈನಂತರ ಕೌನ್ಸಿಲದಲ್ಲಿ ಅವರ ಸಂಬಳವನ್ನು ಮಂಜೂರ ಮಾಡಿಕೊಳ್ಳುವರು. ಇದಕ್ಕೆ ಕೇರ ವಿರುದ್ಧವಾಗಿ ಬಂಗಾಲ ಸರಕಾರದ ಕೈಮ ಯಾಗಿಬಿಟ್ಟಿದೆ. ಈ ಸರಕಾರಕ್ಕೆ ಮೊದಲು ಮಂತ್ರಿಗಳನ್ನು ನೇಮಿಸಿಕೊಳ್ಳುವ ಧೈರ್ಯವಿರಲಿಲ್ಲ. ಏಕಂದರೆ- ಸ್ವರಾಜ್ಯ ಪಕ್ಷದ ಮೆಂಬರರ ಸಂಖ್ಯೆಯು ಬೊಗ್ಗದಾಗಿದ್ದು, ಇವರು ಹಿಂದಿನಂತೆ ಮಂತ್ರಿಗಳ ಸಂಬಳವನ್ನು ನಾಮಂಜೂರ ಮಾಡಿದರೆ- ಮೂಗುನೆಯು ಸಾರೆ ಕೈ ತೋರಿಸಿ, ಅವಲಕ್ಷಣ ಮಾಡಿಕೊಂಡಂತಾಗುವದೆಂಬ ಆಂಜಿಕೆಯಿಂದ ಮೊ ಹರು ಇವತ ಸಂಬಳವನ್ನು ಮಂಜೂರ ಮಾಡಿಕೊಳ್ಳುವ ಭರಿಗೆ ಬಿದ್ದರು. ಕೌನ್ಸಿಲದಲ್ಲಿಯೇ ಬಲಾಬಲದ ಪರೀಕ್ಷೆ ಮಾಡಿಕೊಳ್ಳದೆ, ಮುನ್ನಾ ದಿವಸ ೫೦ ಜನ ಪ್ರಮುಖರನ್ನು ಗವ್ಹರ್ನರಸಾಹೇಬರು ತಮ್ಮೆಡೆಗೆ ಕರಿಸಿಕೊಂಡು, ಇದೇ ವಿಷಯವಾಗಿ ಭವತಿ ನಭವತಿ ಮಾಡಿದರು. ಪ.ವಾಳ, ಪ್ರತಿಯೋಗಿ ಸಹಕಾರಿ, ರಾಜನಿಷ್ಠರೆಂಬವರು ಮಂತ್ರಿ ಮಂಡಲವನ್ನು ರಚಿಸಲು ಗವ್ಹರ್ನರಸಾಹೇಬರಿಗೆ ಗೋಣು ಹಾಕಿದರೆಂದು ಹೇಳುವ ಅಗತ್ಯವೇ ಇಲ್ಲ. ಸ್ವರಾಜ್ಯ ಪಕ್ಷೀಯರು ಮಾತ್ರ ಇದನ್ನು ನಿರೋಧಿಸಿದ್ದರು. ಶ್ರೀ ಗೋಸ್ವಾಮಿಯವರು ಅನ್ಯಾಯವಾಗಿ ಶುರಂಗದಲ್ಲಿ ಹಾಕಿದ್ದ ಗೃಹಸ್ಥರ ವಿಷಯವಾಗಿ ಪ್ರಸ್ತಾಪಿಸಿದರು. ಆದರೆ ಸಾಹೇಬರು ಇವರ ಸಮಾಧಾನವಾಗುವಂಥ ಉತ್ತರ ಕೊಡಲೇ ಇಲ್ಲ. ಈ ಕಛೇರಿಯಲ್ಲಿ ಯಾವ ಮಾತಿನ ನಿಷ್ಕರ್ಷವಾಗಲಿಲ್ಲ, ಆದರೂ ಸಾಹೇಬರಿಗೆ ಬಲಾಬಲದ ಕಲ್ಪನೆಯಾಯಿತು. ಮಂತ್ರಿಗಳ ನಿಶ್ಚಯದ ವಿಷಯವನ್ನು ಕೌನ್ಸಿಲದಲ್ಲಿ ಕಂದರೆ- ಅದು ಪಾಸಾಗುವ ಸಂಭವೆಗಿನುಂಟಾಯಿತು. ಆ ಪ್ರಕಾರ ಮರುದಿವಸ ಶಂದ ರವಾವು ಪ್ರಚಂಡ ಬಹುಮತದಿಂದ ಪಾಸಾಗಿ, ಸರಕಾರದ ಮಾತು ನಿಶ್ಚಿತು. ಸರಕಾರ ಪಕ್ಷಕ್ಕೆ ೯೮ ಮತ್ತು ಸ್ವರಾಜ್ಯ ಪಕ್ಷಕ್ಕೆ ೩೪ ಮತಗಳು ಬಿದ್ದವು. ಇಷ್ಟು ದೊಡ್ಡ ಬಹುಮತದಿಂದ ಮಂತ್ರಿಗಳ ಸಂಬಳದ ಮಂಜೂರಿಯು ದೊರೆಯುವದೆಂದು ಯಾರೂ ಊಹಿಸಿದ್ದಿಲ್ಲ. ಈ ಪ್ರಕಾರ ದೊರೆತ ಜಯದಿಂದ ಸರಕಾರಕ್ಕೆ ಹರ್ಷವಾಯಿತಾಗಿ, ಅದು ತನ್ನ ಮನಸ್ಸಿಗೆ ಬಂದ ಇಬ್ಬರನ್ನು ಮಂತ್ರಿಯಾಗಿ ನೇಮಿಸಿಕೊಳ್ಳುವದು ಈಗ ಅದರ ಕೈಯ್ಯನ್ನು ಹೊರು ಹಿಡಿಯುವರು?

ದೈವಗತಿಯು ವಿಚಿತ್ರವಾದದ್ದು. ಹಿಂದಿನ ಚುನಾವಣಿಯಲ್ಲಿ ಬಂಗಾಲ ಮತ್ತು ನಾಗಪೂರ ಇ ಳಾಖೆಗಳಲ್ಲಿ ನೂತ್ರ ದ್ವಿದಳ ದೊರೆತನಕ್ಕೆ ಪ್ರೇ ತದ ಸ್ವರೂಪ ಬಂತು. ಮುಂದಿನ ಅಂದರೆ ಪ್ರಸ್ತು ತದ ಚುನಾವಣಿಯಲ್ಲಿ ಎಲ್ಲ ಇಲಾಖೆಗಳಲ್ಲಿಯೂ ಸ್ವರಾಜ್ಯ ಪಕ್ಷದ ಬಹುಮತ ಮಾಡಿಕೊಂಡು, ಸರಕಾರದ ರಫಾರ್ಮುಗಳು ಬರೇ ಫೂರ್ಸ್ ಆಗಿರುತ್ತವೆಂದು ತೋರಿಸಬೇಕೆಂದು ಸ್ವರಾಜ್ಯ ಪಕ್ಷೀಯರು ಧೈರ್ಯಸ್ಥೈರ್ಯ ತಾಳಿದ್ದರು. ಆದರೆ ಪಾಸೊಂದು ಒಗೆದರೆ- ಬೈಗೊಂದು ಒಗೆಯುತೆಂಬಂತೆ ಪರಿಸ್ಥಿತಿಯುಂಟಾಯಿತು. ದೇಶಬಂಧು ದಾಸರು ದಿವಂಗತರಾಗುವ ಪೂರ್ವದಲ್ಲಿ ಸರಕಾರದ ಕೂಡ ಒಡಂಬಡಿಕೆ ಎಂದು ಕೆಲವು ಶರ್ತುಗಳನ್ನು ಹೇಳಿದರು. ಆದರೆ ಲಾರ್ಡದ್ವಯರಾದ ಬರ್ಕನ್‌ಹೆಡ್ಡ ಮತ್ತು ರೀಡಿಂಗಸಾಹೇಬರು ರಾಜಿಯು ಹೆಸರೇ ತೆಗೆಯಲಿಲ್ಲ. ಇದಿರಲಿ: ಹೊಸ ಗವ್ಹರ್ನರ ಜನೆರಲರಾದ ಲಾರ್ಡ ಆಯರ್ವಿನಸಾಹೇಬರು ಕಲಕತ್ತೆಗೆ ಹೋಪಾಗ, ಇದರ ಪ್ರಸ್ತಾಪ ಮಾಡಲೇ ಇಲ್ಲ. ನವ್ಯ ಯುವ ಸಹಕಾರ ನೂಡಿರಿ; ಹೆಚ್ಚಿನ ಅಧಿಕಾರ ಬೇಡಿರಿ ಎಂದು ಲಾರ್ಡ ಬರ್ಕನಹೆಡ್ಡಸಾಹೇಬರು ತೋರಿಸಿದ ತುಪ್ಪದ ಬೊಟ್ಟನ್ನೇ ನೋಡಿ, ಅದು ಕಾಪಥೇನುವಿನ ತುಪ್ಪವೆಂದು ಮನಸ್ಸಿನಲ್ಲಿ ಸಂತೋಷಪಟ್ಟು, ಮವಾಳರಂತೆ ಪ್ರತಿಯೋಗಿ ಸಹಕಾರಿಗಳು ಸರಕಾರದ ಕೂಡ ಸಹಕಾರ ಮಾಡಲು ಸಿದ್ಧರಾಗಿದ್ದಾರೆ. ತಮ್ಮ ಅನುಯಾಯಿಗಳು ತಮ್ಮನ್ನು ತೊಲಗಿ, ಸರಕಾರದ ಛಾಯಾನುವರ್ತಿಯಾದ್ದನ್ನು ನೋಡಿ, ಸ್ವರ್ಗಸ್ಥಳಿರುವ ದೇಶಬಂಧು ಏಗೆ ಎಷ್ಟು ಸಂತಾಪವು ದುಃಖವೂ ಆಗಿರಬೇಕೆಂಬದ್ದು ಯಾರು ಹೇಳುವರು?

ಮಂತ್ರಿಯಾಗುವದರಿಂದ ಹಿಂದೀ ಜನರ ಸ್ಥಿತಿಯು ಸುಧಾರಿಸಿತೆಂದು ಯಾವ ಇಲಾಖೆಯಲ್ಲಿಯೂ ಒಂದೂ ಉದಾಹರಣೆಯು ಇರುವದಿಲ್ಲ. ಮದ್ರಾಸದಲ್ಲಿ ಬ್ರಾಹ್ಮಣೇತರ ಮಂತ್ರಿಗಳು ಸತತವಾಗಿ ೮ ವರ್ಷ ರಾಜ್ಯವಾಳಿದರು. ತಮ್ಮ ಜಹಗತೆಯು ಸ್ವರ್ಗಸುಖದಂತಿರುತ್ತವೆಂದು ಲಾರ್ಡ ಎಲಿಂಗಡನ್ನ ಸಾಹೇಬರು ಆತ್ಮಸ್ತುತಿ ಮಾಡಿಕೊಂಡರು. ಇವರಿಂದ ಪ್ರಜಾಸೀಡೆಯಾಯಿತೇ ಹೊರ್ತು ಪ್ರಜಾಸೌಖ್ಯ ವಾಗಲಿಲ್ಲ. ಬಹಾರ, ಅಲ್ಲಾಬಾದ, ಮುಂಬಯಿ, ಪಂಜಾಬ ಇಲಾಖೆಗಳಲ್ಲಿಯೂ ಇದೇ ಅಸಹ್ಯ ನೋಟವು ಕಂಡುಬಂದಿರುತ್ತದೆ. ದ್ವಿದಳ ಬೊರೆತನದಿಂದ ತಮಗೆಷ್ಟೂ ಬೆಲೆಯಿಲ್ಲೆಂದು ದಿವಾನಬಹಾದ್ದೂರ ಚಿಂತಾಮಣಿ ಮೊದಲಾದವರು ರಾಜೀನಾಮೆ ಕೊಟ್ಟರು. ಬೇರೆ ದಿವಾನರು ಚಿಟುಕು ಮುರಿದರು. ಆದರೂ ಇವೇ ಸ್ಥಳಗಳಲ್ಲಿ ದಿದ್ದು ಸಾಯಬೇಕೆಂದು ದುರಿಚ್ಛೆಯಿಂದ ದಿವಾನರಾಗಲು ಮುಂದೊರೆದವರಿಗೆ ಮುಕ್ತಿದ್ದಿ ಎಂದು ಹೇಗೆ ಅರಿಯಬೇಕೆಂದು ನಮಗಂತೂ ತಿಳಿಯುವದಿಲ್ಲ. ಲಾರ್ಡ ಬರ್ಕನಹೆಡ್ಡಸಾಹೇಬರಿಗೆ ಸಹಕಾರದ ಸ್ವರೂಪ ತೋರಿಸಿದರೆ ಅವರು ನೇಮಿಸುವ ರಾಯಲ ಕಮಿಶನದಿಂದ ಬಹಳವಾಗಿ ಹಕ್ಕುಗಳು ದೊರೆಯುವವೆಂಬ ಅಭಿಲಾಷೆ ತೊಟ್ಟಿದ್ದಾರೆ. ಇದು ಮೃಗಜಲವಾಗುವದೆಂದೇ ಸ್ವರಾಜ್ಯ ಪಕ್ಷೀಯರ ಮತವು. ಗಟ್ಟಿಸಾದ ಯಾವದೊಂದು ವಿಚಾರವಿಲ್ಲದೆ, ಕ್ಷಣಕ್ಕೊಮ್ಮೆ ಹೊಯ್ದಾಡುವದಾದರೆ- ಇವರಲ್ಲಿ ನಿರ್ಧಾರವಿಲ್ಲೆಂದೂ, ಹಿಡಿದ ಪಂಥವನ್ನು ಕೊನೆಗಾಣಿಸುವ ತ್ರಾಣವಿಲ್ಲೆಂದೂ ಅಳದವರು ತಿಳುಕೊಂಡು, ಇವರ ಮೇರೆಯು ಮೇಲೆ ಬಿಮ್ಮಿಲ್ಲ; ಎರಡುಸಾರೆ ಕೈ ಎಳೆದು, ಸಂತೋಷಪಡಿಸುವರೆಂದು ಭವಿಷ್ಯ ಹೇಳಲು ಛಾನ್ಸಿಯಿಲ್ಲ. ಇದಕ್ಕೆ ಮುಂಬಯಿಯಲ್ಲಿ ಸಮುದ್ರ ಹುಗಿಯುವ ಒಗ್ಗೆ ಆದ ಹಾನಿಯು ಮತ್ತು ಅಪ್ರಯೋಜಕ ಯೋಜನೆಯ ವಿಷಯವಾಗಿ ಕೂತ ಕಮಿಟಿಯು ರಿಪೋರ್ಟೇ ಒಂದು ಪ್ರತ್ಯಕ್ಷ ಪ್ರಮಾಣವು.

ನಾಗಪೂರಿನಲ್ಲಿ ಆರ್ಯ ಸಮಾಜದವರು ಎಂಟು ಜನ ಮುಸಲಮಾನರನ್ನು ಹಿಂದೂ ಧರ್ಮದಲ್ಲಿ ತಕ್ಕೊಂಡರು.

ಅಕೊಲೆಯಲ್ಲಿ ಸ್ವಾಮಿ ಶ್ರದ್ಧಾನಂದರ ಸ್ಮಾರಕಕ್ಕಾಗಿ ೫೫೦೦೦ ರೂಪಾಯಿ ಕೂಡಿಸಿ, ಅದನ್ನು ಅಂತ್ಯಜೋದ್ಧಾರಕ್ಕಾಗಿ ವಿನಿಯೋಗಿಸುವರು.

ಮಹಾತ್ಮರು ಒಂದೆರಡು ದಿವಸಗಳಲ್ಲಿ ನುಜಫ್ಫರಪೂರಿಗೆ ದಯಮಾಡಿಸುವರು. ಅಲ್ಲಿಯ ಕಾಂಗ್ರೆಸ ಕಮಿಟಿಯವರು ಮಾದೀ ಕಾರ್ಯಕ್ಕಾಗಿ ಇವರಿಗೆ ೨೦ ಸಾವಿರ ರೂಪಾಯಿಗಳ ಕಾಣಿಕೆ ಕೊಡುವ ಏರ್ಪಾಡು ಮಾಡಿದ್ದಾರೆ.

ಹಾಯಸ್ಕೂಲಿನಲ್ಲಿ ಹುಡಿಯನ್ನು ಧೂಸುವ ತೀರ್ಮಾನ.

—೦—

ಶಾದಿ ತೊಡದವನಿಗೆ ಹೊರಗೆ ಹಾಕುವಳು.

—೦—

ಮೈಸೂರ ಎಜ್ಯುಕೇಶನಲ ಸೊಸಾಯಿಟಿ ಎಂಬ ಹೆಸರಿನ ಶಿಕ್ಷಣ ಸಂಸ್ಥೆಯವರು ಬೆಂಗಳೂರಲ್ಲಿ ಹಾಯಸ್ಕೂಲ ಮತ್ತು ಎಂಟ್ರನ್ಸ ವರ್ಗವನ್ನಿಟ್ಟುಕೊಂಡಿದ್ದಾರೆ. ಕಳೆದ ಸೋಮವಾರದ ದಿವಸ ಈ ಸೊಸಾಯಿಟಿಯ ಜನರಲ ಕಮಿಟಿ ಕೂಡಿತ್ತು. ಈ ಕಮಿಟಿಯಲ್ಲಿ

"ಪ್ರತಿಯೊಬ್ಬ ವಿದ್ಯಾರ್ಥಿಯು ಕೊಡೆಯ ರವಿಯನ್ನೇ ತೊಡಬೇಕು. ಮತ್ತು ವಿದ್ಯಾಭ್ಯಾಸ ಮುಗಿಯುವ ತನಕ ಯಾವ ವಿದ್ಯಾರ್ಥಿಯೂ ಮದುವೆ ಮಾಡಿಕೊಳ್ಳಬಾರದು. ಈ ದಿವಸವನ್ನು ತೊಡದಂಥವನನ್ನು ಶಾಲೆಯಿಂದ ಹೊರಗೆ ಹಾಕಬೇಕೆಂಬ"

ಠರಾವನ್ನು ಶ್ರೀ ಶಾಮಣ್ಣನವರು ತಂದರು. ಕಮಿಟಿ-ಮಿಬರು ಮದುವೆಯ ವಿಷಯವನ್ನು ಬಿಟ್ಟು ಮಾನಯು ಠರಾವನ್ನ ಅಂಗೀಕರಿಸಿದರು. ಕಮಿಟಿಯ ಠರಾವು ಬಹುವಾಗಿ ಪ್ರಶಂಸನೀಯವಾಗಿರುತ್ತದೆ. ಮುಂಬಯಿ ಇಲಾಕೆಯಲ್ಲಿ ಗ್ರ್ಯಾಂಟು ತಕ್ಕೊಳ್ಳುವ ಅನೇಕ ಹಾಯಸ್ಕೂಲು ಅಂಗ್ಲೋ ವ್ಹರ್ನಾಕ್ಯುಲರ ಸ್ಕೂಲುಗಳುಂಟು. ಇವು ಬೇಗ ಈ ಸೊಸಾಯಿಟಿಯ ಅನುಕರಣ ಮಾಡುವವೇನು?

ಮುನಸಿಪಾಲಿಟಿಯಲ್ಲಿ ಮಹತ್ವದ ವಾದಗ್ರಸ್ತ ಪ್ರಶ್ನೆಯು.

ಧಾರವಾಡ ಮ್ಯುನಸಿಪಾಲಿಟಿಯ ಕಾಯದೆಯಿಂದ ಚೀಫ ಆಫೀಸರರಿಗೆ ಒಂದು ದೊಡ್ಡ ಅಧಿಕಾರವಿರುತ್ತದೆ. ಮೂವತ್ತು ರೂಪಾಯಿಯೊಳಗೆ ಇದ್ದಂಥ ಕೆಲಸಗಾರರನ್ನು ತೆಗೆಯವದು, ಇಟ್ಟುಕೊಳ್ಳವದು, ಮತ್ತು ಅವರಿಗೆ ದಂಡ ಮಾಡುವದು ಅಥವಾ ಹಿಂಬಡತಿ ಕೊಡುವದು ಚೀಫ ಆಫೀಸರರ ಅಧಿಕಾರಕ್ಕೊಳಪಡುತ್ತದೆ. ಇವರ ಅಧಿಕಾರದಲ್ಲಿ ಸ್ಯಾಂಡಿಂಗ ಕಮಿಟಿಯು ಕೈ ಹಾಕಬಹುದೇ ಎಂಬ ಪ್ರಶ್ನೆಯು ಬೆಳಗಾವಿಯ ಮ್ಯುನಸಿಪಾಲಿಟಿಯಲ್ಲಿ ಹೊಟ್ಟಿತು. ಚೀಫ ಆಫೀಸರರಿಗೆ ಈ ಅಧಿಕಾರವಿದ್ದರೂ, ಅದರ ಮೇಲೆ ಸ್ಯಾಂಡಿಂಗ ಕಮಿಟಿಗೆ ಅಪೀಲು ನಡಿಯುತ್ತದೆ. ಚೀಫ ಆಫೀಸರರು ಸ್ಯಾಂಡಿಂಗ ಕಮಿಟಿಗೆ ಅಧೀನರಿದ್ದವರು ಎಂಬವಾಗಿ ಒಂದು ಸಲ್ಲವೂ, ಚೀಫ ಆಫೀಸರರು ಈ ವಿಷಯವಾಗಿ ಬೇಕಾದ ಹಾಗೆ ಮುನಸಿಪಾಲಿಟಿಯಲ್ಲಿ ನಡಿಸಬಹುದೆಂದು ಎರಡನೆಯ ಪಕ್ಷವೂ ಪುರಿಗಟ್ಟಿ ವಾದ ಹೂಡಿದವು. ಕೊನೆಯಲ್ಲಿ ಚೀಫ ಆಫೀಸರೇ ಸಂಪೂರ್ಣ ಸ್ವತಂತ್ರರೆಂಬ ಠರಾವು ಬಹುಮತದಿಂದ ದಾಸಾಯಿತು.

ಅಣೆವಾರಿಯ ಭೇದ ನೀತಿಯು.

—೦೦—

ವಿಜಾಪೂರ ಜಿಲ್ಲೆಯಲ್ಲಿ ಬಿದ್ದ ಬರದ ದೆಸೆಯಿಂದ ಅಣೆವಾರಿಯನ್ನು ಮಾಡುವದಕ್ಕಾಗಿ ಕಲೆಕ್ಟರಸಾಹೇಬರು ಜಯಾ ತಾಲೂಕಗಳ ಪ್ರಮುಖರ ಸಹಾಯ ತಕ್ಕೊಳ್ಳಬೇಕೆಂದು ರಾ. ಬ. ರಾ ಘವೇಂದ್ರರಾವ ಕೆಂಭಾವಿಯವರು ಕಲೆಕ್ಟರರಾದ ಮೆ. ನಾಯಿಕಸಾಹೇಬರಿಗೆ ವಿನಂತಿ ಮಾಡಿಕೊಂಡ ವಿಚಾರವನ್ನು ಕಾಯದೆಯಿಂದ ಈ ಪ್ರಕಾರ ನಾನ-ಅಫೀಶಿಯಲರ ಸಹಾಯ ತಕ್ಕೊಳ್ಳಲಿಕ್ಕೆ ಬರುವದಿಲ್ಲೆಂದು ಸಾಹೇಬರು ಇವರ ಪೇರೆಯ ಮೇಲೆ ಕೈ ಎಳೆದದ್ದನ್ನೂ ಈ ಮೊದಲು ಬರೆದಿರುತ್ತೇವೆ. ಮೆ. ನಾಯಿಕಸಾಹೇಬರ ಮುಕಕ್ಕೆ ತೀರ ವಿರುದ್ಧವಾಗಿ ಬೆಳಗಾವ ಜಿಲ್ಲೆಯಲ್ಲಿ ಡಿಪುಟಿ ಕಲೆಕ್ಟರರು ಮುರಗೋಡ ಮಹಾಲಿನಲ್ಲಿ ನಾನ-ಅಫೀಶಿಯಲ್ಲರ ಸರವು ತಕ್ಕೊಂಡು ಅಣೆವಾರಿಯನ್ನು ನಡಿಸಿದರಲ್ಲ!! ಬಿ ಪುಟಿ ಕಲೆಕ್ಟರರೂ ಹೀಂದೂ, ಕಲೆಕ್ಟರಸಾಹೇಬರೂ ಹಿಂದೂ. ಇವರಿಬ್ಬರ ವಿಚಾರದಲ್ಲಿ ಹೀಗೇಕೆ ಭೇದವಾಯಿತು. ಮುತ್ತ ಒಂದೇ ಕಾಯದೆಯು ಒಬ್ಬರಿಗೊಂದು ತರಹ ಒಬ್ಬರಿಗೊಂದು ತರಹವಾಗಿ ಹೇಗೆ ಕಾಣಿಸುವದೆಂಬದೂ ಒಂದು ಸೋಜಿಗ!!!

ಚೀನದ ಸುದ್ದಿಗಳು.

ಚೀನದಲ್ಲಿ ದಿನವೊಂದಕ್ಕೆ ಪರಕೀಯರ ವಿರುದ್ಧ ಲೋಕಮತವು ದೃಢವತವಾಗಿ, ವಿದ್ಯಾರ್ಥಿಗಳ ಮತ್ತು ಪುಂಡರ ಪುಂಡಾಟಿಕೆಯು ಹೆಚ್ಚುತ್ತಿರುವದು.

ಯುಜೆನ್ನ ಚೆನ್ನನೆಂಬವನು ಪ್ರಸ್ತುತದಲ್ಲಿ ಕಂತಾನ ಸರಕಾರದ ಪರರಾಷ್ಟ್ರಗಳ ಮಂತ್ರಿಯಾಗಿದ್ದಾನೆ. ಈತನು ಸಂಕೀರ್ಣದ ವಿಶೇಷವಾಗಿ ಇಂಗ್ಲಿಷರ ವಿರುದ್ಧ ಜಳವಳಿ ಎಬ್ಬಿಸಿದ್ದಾನೆ. ಮುಹಾಯುದ್ಧದ ಕಾಲದಲ್ಲಿ ಈತನು ಒಂದು ವರ್ತಮಾನ ಪತ್ರದ ಸಂಪಾದಕನಾಗಿದ್ದನು. ಆಗ ಕೂಡ ಇಂಗ್ಲಿಷರ ವಿರುದ್ಧ ಲೇಖನಗಳನ್ನು ಬರೆಯುತ್ತಿದ್ದನು.

ಚೀನ ದೇಶದಲ್ಲಿ ಹುಟ್ಟಿದ ಜಾರ್ಜರ ಬಂಡಾಯದ ವೇಳೆಯಲ್ಲಿ ಮಿಶನರಿ ಸ್ತ್ರೀಯರು ಚೀನ ಹುಡುಗರನ್ನು ಕದ್ದುಕೊಂಡು ಹೋಗುತ್ತಾರೆಂದು ಸುದ್ದೀ ಹಬ್ಬಿಸಿದ್ದರು. ಅದೇ ತರದ ಸುದ್ದಿಯನ್ನು ಈಗ ಹಬ್ಬಿಸಿದ್ದಾರೆ.

ಚೀನ ರಾಜ್ಯದ ತುಂಬ ಮಿಶನರಿಗಳಿಗೆ ಎದ್ದಲಗಾಟ ಬಂದಿದೆ. ಇವರೇ ಹೆಚ್ಚು ನಷ್ಟಕ್ಕೂ ತಾಪಕ್ಕೂ ಗುರಿಯಾಗಿದ್ದಾರೆ. ಸೂಚಾನ ಮತ್ತು ಸಾಸ್ಸಿ ಪ್ರಾಂತಗಳಲ್ಲಿ ಇವರಿಗೆ ಬಂದ ಗೋಳು ವರ್ಣಿಸಲಸಾಧ್ಯವು.

ಕುಯಿಕಿಯಾಂಗದಲ್ಲಿ ಪುಂಡರು ಇಟಲಿಯ ಕನ್ಸುಮ ಪಾತಿಕೆಯ ಕಮಿಶನರನ ಮನೆಯಲ್ಲಿ ದಾಳಿ ಮಾಡಿ,ಸುಲಿಗೆ ಮಾಡಿದರು.

ಇಂಗ್ಲಿಸ ಜನರು ಕೊಲಪಾತಕಿಗಳಾಗಿದ್ದಾರೆ. ನಿಷ್ಕಾರಣ ನಿರಪರಾಧಿ ಜನರನ್ನು ಕೊಲ್ಲುತ್ತಾರೆಂದು ಕಂತಾನ ಮುಂತಾದ ಪ್ರಾಂತಗಳಲ್ಲಿ ದೊಡ್ಡ ದೊಡ್ಡ ಜಾಹೀರಾತುಗಳನ್ನು ಹಬ್ಬುತ್ತಿದ್ದಾರೆ.

ಇಂಗ್ಲಿಸ ಜನರು ಹಾಂಕಾವಂತೆ ಸುಚಾನ ಪ್ರಾಂತವನ್ನೂ ಬಿಟ್ಟು ಹಿಂದಕ್ಕೆ ಸರಿಯುವರು. ಸರ್ಕಾರಿಗೆ ೩೦ ಜನರಿಂತೆ ಗುಡಬೇಪೆ ಇಟ್ಟುತ್ತಿದ್ದಾರೆ.

ಚೀನಕ್ಕೆ ಸಂಪೂರ್ಣ ಸಾರ್ವಭೌಮತೆಯನ್ನು ನೈತಿಯಿಂದ ಪೋಷಿಸವದಕ್ಕಾಗಿ ಬೆಲಜಿಯಮ ಸರಕಾರದವರು ಟಿಂಟಿಶೇವದಲ್ಲಿ ಆಕ್ರಮಿಸಿದ ಚೀನ ಭಾಗವನ್ನು ಪೆಕಿಂಗ ಸಂಕಾರದ ಸ್ವಾಧೀನ ಮಾಡಿದರು.

ಜಪಾನರು ಚೀನರ ವಿಷಯವಾಗಿ ಸಂಪೂರ್ಣ ಸಹಾನುಭೂತಿಯುಳ್ಳವರಾಗಿ, ಅದರ ನಿಗ್ಗಿಗೆ ತಕ್ಕವಾಗಿ ಸಹಾಯ ಮಾಡಿ, ತಮ್ಮ ಪಕ್ಕುಗಳನ್ನು ಕಾಯ್ದುಕೊಳ್ಳುವರು.

ಇಂಗ್ಲಿಷ ಮಂತ್ರಿಗಳು ಕಮಿಟಿ ಕೂಡಿ, ಪರಿಸ್ಥಿತಿಯ ವಿಚಾರ ಮಾಡಿದರು. ಮುಂದೆ ಯಾವ ಧೋರಣೆ ವಿಡಬೇಕೆಂದು ಬೇರೆ ಪರರಾಷ್ಟ್ರಗಳ ಮಸಲತ್ತು ಕೇಳಿದ್ದಾರೆ.

ಚೀನದೇಶದಲ್ಲಿ ಇಂಗ್ಲಿಷರ ಸಾಕಷ್ಟು ಸೈನ್ಯ ಬಲವುಂಟು. ಒಂದು ಸಾವಿರ ಜಲಸೈನಿಕರಿಗೆ ಪೊಡಿಮಲು ಅಪ್ಪಣೆ ಮಾಡಿದ್ದಾರೆ. ಅವಶ್ಯವಿದ್ದರೆ ಯುದ್ಧದ ಪ್ರೇಮಿಗಳಾದ ಹಡಗುಗಳನ್ನು ಕಳಿಸುವರು.

ಹಾಂಕಾವಿನಲ್ಲಿ ಒಂದಿಗಿದಂಥ ವಿಷಯ್ಕು ಶಾಲೆಯಲ್ಲಿಯೂ ಒರಬಾರದೆಂದು ಭಯಪಡುವ ಕ್ರೈಸ್ತೋಪಾಯಗಳನ್ನು ಮಾಡುತ್ತಿದ್ದಾರೆ.

ನೋಟೀಸು

ಫಾಲಿ ಕೋಮು ಫಕೀರವ್ವಾ ಅವಧಾನಿಯು ರ ಸಾಕೀನ ಉಣಕಲ್ಲ ಹಾಲಿವಸ್ತಿ ಳೆಬ್ಬಿ ತಾ ಲೂಕ ಹುಬ್ಬಳ್ಳಿ ಈಕಿಗೆ-

ಕಳಿಗೆ ಹೆಬ್ಬಟ್ಟಿನ ಗುರ್ತಾ ಮಾಡಿವ ಫಕೀರವ್ವಾ ತಂದಿ ಕರಬಸವ್ವಾ ಮೊರಡಗಿ ಸಾಕೀನ ಈ ಸ್ಥಾಕಲ್ಲ ಈಕನು ನಿನಗೆ ಈ ನೋಟೀಸಿನಿಂದ ತಿಳಸುವದೇನಂದರೆ-

ನೀನು ನನ್ನ ಮದವಿಯ ಹೆಂಡತಿಯಾಗದೇ ಳು ನಿರಕ ಒಳಿಕ್ಕ ನೀನು ನನ್ನ ಕೂಡ ಸರಾಸರಿ ಮೂರು ವರ್ಷ ಬಾಳವೆ ಮಾಡಿದಿ. ಜಂಗಿಮಿಂಗಿ ತನದಿಂದಲೇ ನಡದಿ ದೊಡ್ಡವಳಾದಂತೆ ಒಬ್ಬಿ ಬಂದೀತೆಂದು ನಿನ್ನನ್ನು ನಡಿಸಿಕೊಂದೆನು ಆದರೆ ನೀನು ನಿನ್ನ ಚಂಜಲ್ಲ ನಡತೆಯನ್ನು ಬಿಡದೆ, ಅಜಮಾಸು ಆರು ತಿಂಗಳ ಹಿಂದೆ ನಾನು ಮನೆಯಲ್ಲಿಲ್ಲದ ಹೊತ್ತು ಸಾಧಿಸಿ, ಕಳಿಗೆ ಬರೆದ ದಾಗೀನೆ ಮತ್ತು ರೋಖು ಎಂಡು ಸೂರು ರೂಪಾಯಿ ತಕ್ಕೊಂಡು ನಿನ್ನ ತವರ ಮನಿಗೆ ಓಡಿಹೋದಿ. ದಾಗೀನೆಗಳ ವಿವರಾ—

೧ ಬಂಗಾರದ ಬಳೀ ಜೋಡು ತೊಲಿ ವದು
೨ ಬಂಗಾರದ ಗೆಜ್ಜಿಟೀಕಿ ಕಿ॥ ರೂ॥ ೧೦೦
೩ ವಾಲಿ ಜೋಡು ಕಿ॥ ರೂ॥ ೫೦
೪ ತೋಳಬಂದಿ ಜೋಡು ಕಿ॥ ರೂ॥ ೨೫

ಇಷ್ಟು ತಕ್ಕೊಂಡು ಹೋದಿ. ಊರೊಳಗೆ ತಪಾಸ ಮಾಡಲಾಗಿ ಪತ್ತೆ ಹತ್ತಲಿಲ್ಲ. ಮತ್ತು ತಪಾಸ ಮಾಡಿದ ಬಳಿಕ, ತವರ ಮನಿಯಲ್ಲಿದ್ದಿ ಅಲ್ಲಿ ಳು ದೈವದವರು ನಿನಗೆ ಬುದ್ದೀ ಹೇಳಿದರು. ನಿನ್ನ ತಾಯಿಯು ನಾಲ್ಕು ದಿವಸ ತಡೆಯರಿ ನಾನೇ ಕಳಸಿ ಕೊಡತೇನೆಂದು ಹೇಳಿದಳು ಆ ಪ್ರಕಾರ ದಾರೀ ನೋಡಿದೆ. ಪುನಾ ಕರಿಯಲಿಕ್ಕೆ ಬಂದೆ ಆಗ್ಯೂ ಬರಲಿಲ್ಲ. ಇದೂ ಪ್ರಕಾರ ಮೂರನೆಯ ಸಾರೆ ಆಯಿತು ಇದರಿಂದ ನಿನ್ನ ಮನಸ್ಸಿನಲ್ಲಿ ನನ್ನ ಕೂಡ ಬಾಳವೆ ಮಾಡುವದು ಇರುವದಿಲ್ಲೆಂದು ಪೂರಾ ತಿಳಿದು ಈ ನೋಟೀಸು ಕೊಟ್ಟಿರುತ್ತೇನೆ. ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನ್ನ ಮೂವತ್ತು ದಾಗೀನೆ ಮತ್ತು ರೋಖು ರೂಪಾಯಿ (೨೦೦) ತಕ್ಕೊಂಡು ನನ್ನ ಮನಿಗೆ ಬಂದು ಸುರಳಿಕ ಪ್ರಪಂಚ ಮಾಡಬೇಕು ಜರ ಇದಕ್ಕೆ ತಪ್ಪಿದರೆ ಕಾಯದೆ ಪ್ರಕಾರ ಇಲಾಜು ಮಾಡಿ ನಿನ್ನ ವಸೂಲ ಮಾಡುವೆನು ಮತ್ತು ನೀನು ಈ ನೋಟೀಸಿನ ವಿರುದ್ಧ ಯಾರನ್ನಾದರು ಉಡಿಕೆ ಮಾಡಿಕೊಂಡರೆ ನಿನ್ನ ಮೇಲೂ ಉಡಿಕೆಯಾಗುವವನ ಮೇಲೂ ಕಾಯದೆಸೀರ ಫೌಜದಾರಿ ಮಾಡುವೆನು ಇದೂ ಅಲ್ಲದೆ ನೀನು ಹರೆಯದ ಳಿದ್ದು, ಗರ್ಭಿಣಿ ಆಗಿ, ಹಡೆದು ಅದರ ಸಂತತಿಗೆ ಜನಕ ತಂದೆಯೆಂದು ನನ್ನ ಹೆಸರು ಹಚ್ಚಿಸಿದರೆ-

ಮದ್ರಾಸ ಕೌನ್ಸಿಲದ ಮೆಂಬರರಾದ ಡಾಕ್ಟರ ಮುಲ್ಲಯ್ಯನವರಿಂದ
ಪರಿಶೋಧಿಸಲ್ಪಟ್ಟ
ಮೆಸರ್ಸ ಪಿ. ಪ್ಹಿ. ರಾಜನ ಕಂಪನಿಯ

ಸುಗಂಧ ನಶ್ಯದ ಪುಡಿಯು.

ಪ್ರಖ್ಯಾತಿ ಹೊಂದಿದ ಈ ನಶ್ಯದ ಪುಡಿಯು ಅಮೂಲ್ಯವಾದದ್ದಿದ್ದು ಲಕ್ಷಾವಧಿ ಜನರು ಇದರ ಉಪಯೋಗ ಹೊಡ್ಡಿದ್ದಾರೆ. ಇದರ ಗುಣದ ಬಗ್ಗೆ ಸಾವಿರಾರು ಒನರು ಸರ್ಟೀಫಿಕೇಟುಗಳನ್ನು ಕೊಟ್ಟಿದ್ದಾರೆ. ಈ ಪುಡಿಯ ಉಪಯೋಗದಿಂದ ಗುಣವಾಗುವ ವ್ಯಾಧಿಗಳುಃ— ಪೀನಸಿ, ಅರತಲೆನೋವ, ತಲೆಯಲ್ಲಾಗುವ ಬೇರ ಪ್ರಕಾರಗಳು ಕಣ್ಣುಗಳೆಲ್ಲುಂಟಾಗುವ ಎಲ್ಲ ವ್ಯಾಧಿಗಳು ದೂರಾಗಿ ಸ್ಮರಣ ಶಕ್ತಿಯು ಹೆಚ್ಚುತ್ತದೆ. ಬೇರೆ ನಶ್ಯದಲ್ಲಿ ಈ ನಶ್ಯದ ಒಂದು ಚಿಟಿಕೆಯನ್ನು ಕೂಡಿಸಿದರ ಎಲ್ಲವೂ ಸುಗಂಧವಾಗುವದು. ಮಾದರಿ ತಿಕೆ ಉಚಿತವಾಗಿ ದೊರೆಯುವದು.

ಸಾದಾ ಮದ್ರಾಸ ನಶ್ಯ ೧೫೦ ತೊ ವೀಸಿ ಒಂದಕ್ಕೆ ನಂಬರ ೧ ೪-೦-೦
,, ೨ ೫-೪-೦

ದಯವಿಟ್ಟು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ತಂತ ವಿಳಾಸ- ನಸ್ಯಪ್ಯ | ಪಿ. ಪ್ಹಿ. ರಾಜನ ಮತ್ತು ಕಂಪನಿ,
ಳಳ ಗೋವಿಂದಪ್ಪ ನಾಲ್ಕನೇ ಬೀದಿ ಜಾರ್ಜಟೌನ, ಮದ್ರಾಸ

ಅದು ಬೇಕಾಯಿಬೇಕಾಗುವದು ನನ್ನ ಮಹೀಬಟ್ಟು ಹೋಗುವಾಗ ನೀನು ಬಸುರಿದ್ದಿಲ್ಲ ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನ್ನಲ್ಲಿಗೆ ಬರುವಾಗ ನೀನು ಗರ್ಭಿಣಿ ಇಲ್ಲೆಂದು ಸಾಬೀತು ಮಾಡಿಕೊಡಬೇಕು ಅಂತಾ ಕೊಟ್ಟ ನೋಟೀಸು ತಾರೀಖು ೨೦ ಜನವರಿ ೧೯೨೩ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಫಕೀರವ್ವಾ ತಂದಿ ಕರಬಸವ್ವಾ ಮೊರಡಗಿ ಈಕನದು ಇರುತ್ತದೆ

ಶಿಕ್ಷಕರೇ! ಇತ್ತ ಲಕ್ಷಕೊಡಿರಿ
ವಿದ್ಯಾರ್ಥಿಗಳ ಪಾಲಕರೇ! ಇದನ್ನು ಓದಿರಿ.

೨-೩-೪ ಹಾಗೂ ೫ ನೆಯ ಇಯತ್ತೆಗಳ
ಅಂದವಾದ ರೂಪಿನಿಂದ ಎಸೆವ
ಚಂದವಾದ ಕನ್ನಡಿನಿಂದ ಒಪ್ಪುವ
ಸುಂದರವಾದ ಕಾಪೀಬುಕ್ಕುಗಳು ನಮ್ಮಲ್ಲಿ ಸಿಗುವವು
ಪ್ರತಿಯೊಂದು ಕಾಪಿಗೂ ಬುಕ್ಕಿಗೆ ಒಂದು ಆಣೆ.
ಕೋಳು ಕೊಳ್ಳುವವರಿಗೆ ವಿಶೇಷ ಸವಲತು ಕೊಡುವೆವು
ಐದಾಣೆಯ ಪೋಸ್ಟ ಟಿಕೀಟುಗಳನ್ನು ಕಳುಹಿದಲ್ಲಿ
ಪ್ರತಿಯೊಂದು ಇಯತ್ತೆಗೆ ಒಂದರಂತೆ
ಪಾಲ್ಕು ಕಾಪಿಗಳನ್ನು ನಮೂನೆಗೆ ಕಳುಹುವೆವು.
ಕಾಪಿಯ ಬುಕ್ಕುಗೆಳಲ್ಲದೆ ನಮ್ಮಲ್ಲಿ
ಜ. ಜ. ಬೆನ್ನೂರ ಕಿರಾಣಿ ಮರ್ಚಂಟ್ಸ, ಕಲಘಟಗಿ
ಇವರ ಎಲ್ಲ ಸಾಮಾಯಿಜ, ಕೆಂಪು ನೀಲೀ ಮಸೀ ಚೀಟುಗಳು
ಯೋಗ್ಯದರದಿಂದ ದೊರೆಯುವವು.
ವಿಶೇಷ ಮಾಹಿತಿಗಾಗಿ ಕೆಳಗಿನ ವಿಳಾಸ. ವಿಳಾಸಗಳಲ್ಲಿ
ದೇಶಾದ ಒಂದು ವಿಳಾಸಕ್ಕೆ ಬರೆದುಕೊಳ್ಳಬಹುದು.
೧ ಅಕಬರ್ಜಿ ಹ್ಯಾಂಡ ಬ್ರದರ್ಸ ಕಲಘಟಗಿ,
೨ ವಿಜಯ ಆಫೀಸ ಧಾರವಾಡ

ADVERTISEMENT

THE CIVIL ENGINEERING SCHOOL. LUCKNOW.

Maintained & Managed by the Hindu Education Society. Registered under Act xxi of 1860)

Trains candidates for the Subordinate Engineering Services. The School has been highly recommended for Grant-in-aid, by Chief Engineer & Secretary, Irrigation Branch, P. W. D., U. P., & the Board of Industries, U. P. The Rules of Irrigation Branch U.P. also provide for the employment of successful students of the School. Apply for full particulars and prospectus to the Principal.

ಈ ಪತ್ರವನ್ನು ಅಣ್ಣಾಚಾರ್ಯ, ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ ಧಾರವಾಡ ಶನಿವಾರ ಕಾರ್ತಿಕ ಶುಕ್ಲ ೨೩ನೇ ಜಾನೇವಾರಿ ೧೯ ೧೯೩೩ [ಸಂಚಿಕೆ ೧೮೮

ಕಲ್ಯೋಸ್ಕರ ಕಬ್ಬಿನ ಗಾಣಗಳು.



ಮುನ್ನೆ ಪುನೆ ಪ್ರದರ್ಶನದಲ್ಲಿ ಈ ಕವಾಲ ಗಾಣಕ್ಕೆ ಪದಕವು ದೊರೆತಿದೆ ಹೆಚ್ಚಿನ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ಧಿಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಿಂಗಳವಾರ ಪೇಟೆ ಧಾರವಾಡ.

ಕೋ ಲಮಿ ಟೆಡ್ ಪ್ರೈವೇಟ ಸಂಸ್ಥೆಯಿಂದ ಆಕ ಪ್ರಕಟ [illegible] ಕೊಡಿಸಲ್ಪಟ್ಟದ್ದು.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸಾಧನ.

ಜವಾಬಿಗೆಯು ಆರು ಲಕ್ಷದ ಮೇಲಾಗುತ್ತದೆ. ಚೆಕ್ ಹುಂಡಿ ಮೂಲಕವಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು [illegible] ಮಾಡಿಸಲಾಗುವದು. ಠೇವಣಿಯಾಗಿಟ್ಟ ಬೇರೆ ತರದ ಹಿಪಾಡಬೇಕಾಗಿ ಜನರಿಗಾಗಿ ಬಡ್ಡಿ ಜಾಸ್ತಿಯಾಗಿಯೂ ಮಾಡಿ.

ಬೇರೆ ಸಂಗತಿಗಳನ್ನು ಎಲ್ಲಿ ನೋಡಿ ಮಾಡಿಸಿದವ ತಿಳಿದು ತಿಳಿಸಲ್ಪಡೆಯಿರಿ.

ಮಾಡ್ಯಪತ್ರವಾಡ ಬಿ. ಜಕಾತ್ತಿ
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿವಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷ ಪು ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಸಗಳನ್ನು ಪತ್ತೀ ಇ ಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಕನ್ನೆರಡು ಆಣೆಯಂತಿರುತ್ತದೆ.

ಎಂ. ಕೆ. ಕಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ಮೂರ.

ಫೋಟಾಗಳ ಪಾರಾಟ.

[illegible]

ನಿನ್ನಲೆ ವಿಷಯಂಗ [illegible] ಜನರು ಕಾಣಿಸಿಕೊಂಡು [illegible] ಮಾಡಿಸಿಕೊಳ್ಳುವದು ಸ ತ್ಯ. [illegible] ಮಾಡಿಸಿಕೊಳ್ಳಲಾಗಿದೆ. ಅಂತ ಜನರ [illegible] ಮಾಡಿ ಕೊಟ್ಟಿದ್ದಾರೆ. ಸಮ ಕ್ಷೇ [illegible] ಮಾಡಿಸಿಕೊಂಡ ಹ ರಿಯರ್ಗೆ ವಾಚ ಎಂಬ [illegible] ಎಂದಿ ಧಾರವಾಡ [illegible]

ಎ ವಾಯ ಭಸ್ಮರಿ ಕಿಶ್ಕೂರ
ಕಿತ್ಕೂರ ಮೋಟಾರ ಸರ್ವೀಸ

ಸೂಚನೆ— ಮೂರೂ ಮೋಟಾರ ತೊಗೊಂಡಲ್ಲಿ ಸೋ ವಿಸುಗಬಹುದು

ನೋಟೀಸಿನ ದರಗೆಗಳು.

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮಾಂಜೆ ಪ್ರತಿಯೊಂದು ವಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಜಾಣೆ ಸರ ಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಶೇರೆ ಬ್ಯಾಂಕ ಮಂಜಾವಣೆ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದಕ್ಕೆ ಆರು ಆಣೆ ಡಬಲ್‌ಕಾಲಮಿನ ಒಳಗಿಗೆ ಇಮ್ಮಡಿ ಚಾರ್ಜು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು. ವ್ಯವಸ್ಥಾಪಕ ವಿಜಯ

ವಿಜಯದ ವರ್ಗಣೀ ದರ

—೦—

ನಿತ್ಯಪತ್ರಕ್ಕೆ	೧ ತಿಂಗಳಿಗೆ	೧—೮—೦ ರೂ.
	೬ ,,	೫—೮—೦ ರೂ.
	೩ ,,	೨—೮—೦ ರೂ.
ವಾರಪತ್ರಕ್ಕೆ	೧ ವರ್ಷಕ್ಕೆ	೩—೧—೦ ರೂ.

ವಿಶೇಷ ಸೂಚನೆ ಇಳಿಸಿ ವಿಳಾಸಕ್ಕೆ

ವ್ಯವಸ್ಥಾಪಕ ವಿಜಯ ಧಾರವಾಡ

ವಿಜಯ.

ಧಾರವಾಡ ಶಾ- ಟಿ-ಗಿ-ತಿಜಿ ನೇ ಇಸ್ವಿ

ಕಾಬೂಲು ಮತ್ತು ಹಿಂದುಸ್ಥಾನ.

ಕಾಬೂಲಿನ ದೆಸೆಯಿಂದ ಹಿಂದೂ ಜನರು ಹೆದರುವ ಕಾರಣವಿಲ್ಲ.

—೬೧೦—

ಹಿಂದುಸ್ಥಾನದ ಮುಸಲಮಾನರಿಗೆ ಅಫಗಾಣಿಸ್ಥಾನದ ಬಲವುಂಟು. ಈ ಬಲದಿಂದ ಇವರು ಹಿಂದೂ ಜನರನ್ನು ಒತ್ತಿ ಹಿಡಿಯುವರು. ಮತ್ತು ಪ್ರಸಂಗಾನುಸಾರ ಪುನಃ ಮುಸಲಮಾನ ಬಾದಶಾಹಿಯನ್ನು ಸ್ಥಾಪಿಸುವರೆಂದು ಸರ್ವಸಾಧಾರಣವಾದ ಊಹೆಯನ್ನು ಯಾರೊಬ್ಬರು ಹುಟ್ಟಿಸಿದ್ದಾರೆ ಅದು ಪೂರಾ ನಿರಾಧಾರವಾದದ್ದೆಂದು ಕಾಬೂಲಿನ ಪರರಾಷ್ಟ್ರಗಳ ಪ್ರಧಾನರು ಸಾಫ ಹೇಳುತ್ತಾರೆ ಇವರು ಅಮೀರಸಾಹೇಬರ ಜ್ಯೇಷ್ಠ ಚಿರಂಜೀವನನ್ನೂ, ತಂಗಿಯನ್ನೂ ಕರಕೊಂಡು ಇಂಗ್ಲೆಂಡ್ಕ್ಕೆ ಹೋಗಲು ಮುಂಬಯಿಗೆ ಬಂದಿದ್ದಾರೆ. ಮುಂಬಯಿಯಲ್ಲಿ ಪೆರಾಲ್ಡ ಪತ್ರದ ಪ್ರತಿನಿಧಿಯು ಇವರನ್ನು ಕಂಡು ಮಾಡಿದ ಪ್ರಶ್ನೆಗೆ ಉತ್ತರವೆಂದು ಮುಂದೆ ಕೊಟ್ಟಂತೆ ಹೇಳಿದ್ದಾರೆ.

"ಅಫಗಾಣರು ಮತ್ತು ಹಿಂದೂ ಜನರು ಆರ್ಯರಕ್ತದವರಾಗಿದ್ದಾರೆ. ಅಫಗಾಣರು ಹಿಂದೂ ಸ್ಥಾನ್ಕ್ಕೆ ಕಮ್ಮೊಳಗೆ ಎಷ್ಟೂ ಭೇದ ಮಾಡುವದಿಲ್ಲ ಹಿಂದೂ ಜನರನ್ನು ಬಂಧುಗಳಂತೆ ಭಾವಿಸುತ್ತಾರೆ. ಅಫಗಾಣಸ್ಥಾನದ ಸೈನ್ಯದಲ್ಲಿ ಎಂಟು ಪರ್ಷದ ಚಿಕ್ಕ ಹುಡುಗನಿಂದಿಡಿದು ಈಗೀಗ ಪ್ರಗತಿಯು ಮಾರ್ಗದಲ್ಲಿ ತಪ್ಪು ಹೆಜ್ಜೆ ಇಡುತ್ತಿರುವದು. ಅಫಗಾನಿಸ್ಥಾನವು ಸದ್ಯದಲ್ಲಿ ರಾಷ್ಟ್ರಸಂಘಟನೆಯಾಗುವಂಥ ಮತ್ತು ಉದ್ಯೋಗ ವ್ಯವಸಾಯಗಳ ವೃದ್ಧಿಯನ್ನು ಗೊತ್ತುವೆಂಥ ವಿಚಾರದಲ್ಲಿ ತೊಡಗಿರುತ್ತದೆ.

ಕಾಲಪರತ್ವದಿಂದ ಹಿಂದಸ್ಥಾನದ ಮುಸಲಮಾನರು ಕಾಬೂಲದ ಕೂಡ ಸಂಗನಮತ ಮಾಡಿಕೊಂಡು ಹಿಂದೂ ಜನರ ಕೂಡ ವಿರ್ವಾಸಘಾತಕ್ಕೆ ಪ್ರಾರಂಭಿಸುವರೆಂಬ ಭಯವಿಲ್ಲ. ಹಿಂದುಸ್ಥಾನದ ಮುಸಲಮಾನರು ಈ ತರದ ವಿಚಾರಣೆಯನ್ನು ಕಾಬೂಲಿನ ಧೋರಣದಿಂದ ಮುಂದಿಟ್ಟಿದೆ- ಕಾಬೂಲವು ಎಂದಿಗೂ ಸಮ್ಮತಿಸಲಾರದು. ಏಕಂದರೆ- ಅಫಗಾಣಿಸ್ಥಾನವು ತನ್ನ ಚತುಃಸೀಮೆಯ ಹೊರಗೆ ದೃಷ್ಟಿ ಹಾಯಿಸುವದಿಲ್ಲ. ಅದಕ್ಕೆ ಸ್ವಂತ ತೊಟ್ಟಲದೇ ಭಾರವಾಗಿದೆ. ಖಾನು ದಿಲ್ಲಿಗೆ ಹೋದಾಗ ಹಿಂದೂ ಮತ್ತು ಮುಸಲಮಾನ ಪ್ರಮುಖರನ್ನು ಕರಿಸಿ, ಹಿಂದುಸ್ಥಾನದ ವಿಷಯವಾಗಿ ಕಾಬೂಲದ ಹೃದಯದಲ್ಲಿ ಪಾಪ ಬುದ್ಧಿ ಇರುವದಿಲ್ಲೆಂಬದನ್ನು ಸ್ಪಷ್ಟ ಮಾಡಿ ಹೇಳಿದ್ದೇನೆ. ಈ ಬಗ್ಗೆ ಅಂಜುವದಕ್ಕೆ ಎಳ್ಳಷ್ಟು ಕಾರಣವಿರುವದಿಲ್ಲ. ಅಫಗಾಣವು ಇಂಥ ವಿಚಾರವನ್ನು ಸ್ವಪ್ನದಲ್ಲಿ ಸಹ ತರುವದಿಲ್ಲ. ಎಲ್ಲರ ಕೂಡ ಬಂಧುಭಾವದಿಂದ ಇರಬೇಕೆಂಬದೇ ಅದರ ಅಪೇಕ್ಷೆಯು. ಯಾರೊಬ್ಬರ ಮನಸ್ಸಿನಲ್ಲಿ ಇಂಥ ಸಂಶಯ ಬಂದರೆ- ನಾನು ಎತ್ತರವಾದ ಗೋಪುರದ ಮೇಲೇರಿ, ಸುಳ್ಳು ಸುಳ್ಳು ಎಂದು ಗಟ್ಟಿಯಾಗಿ ಕೂಗಿ ಹೇಳುವೆನು."

ಮುಸಲಮಾನರನ್ನುದ್ದೇಶಿಸಿ ಮಿ ಶಕಲಾತವಾಲಾಸಾಹೇಬರ ಭಾಷಣ.

ಮುಂಬಯಿಯ ಲಿಬರಲ ಕನ್ವೀಟಿಯವರು ಮಿ ಶಕಲಾತವಾಲಾಸಾಹೇಬರನ್ನು ತಮ್ಮ ಸ್ಥಾನಕ್ಕೆ ಕರಕೊಂಡು ಹೋಗಿ, ಸನ್ಮಾನ ಮಾಡಿದರು ಆಗ ಬಹು ಸಾವಿರ ಜನ ಕೂಡಿತ್ತು. ಮೈಬಾನಾ ಶಾಕತಲ್ಲಿಯವರು ಸಭಾಧ್ಯಕ್ಷರಾಗಿದ್ದರು. ಇವರು ಪ್ರಾಸ್ತಾವಿಕ ಭಾಷಣ ಮಾಡುವಾಗ ಅಂದ ಸ್ಪೀಸಂತರೆ-

ಮುಸಲಮಾನರು ರಾಜೀಯಿಕ ಮತ್ತು ಧಾರ್ಮಿಕ ವಿಚಾರದಿಂದ ಅವನತಿ ಹೊಂದಿದ್ದರು, ಬಡವರು ಮತ್ತು ಅಶಿಕ್ಷಿತರಾಗಿದ್ದರೂ, ಮಾತ್ರವಲ್ಲ ಭಯಾದ ಹಿಂದುಸ್ಥಾನದ ಸ್ವಾತಂತ್ರ್ಯದ ದೆಸೆಯಿಂದ ವೇಷಾರ್ಪಣ ಮಾಡಲು ಸಿದ್ಧರಿದ್ದಾರೆ. ಸಮುಗೆ ಪಂಕೀಯರ ರಾಜ್ಯಬೇಡ. ಅದು ಮುಸಲ್ಮಾನರಾದರೂ ಬೇಕಾಗಿಲ್ಲ. ಮುಸಲಮಾನರು ಜೊಳ್ಳಿನಿಕ ತತ್ವಕ್ಕೆ ಹೆದರುವದಿಲ್ಲ. ಸ್ವರಾಜ್ಯವು ಸನಿಮವಾಗ.ತ್ತಿದ್ದರೆ- ಬೊಲ್ಸೆವಿಸಂ ಆಗುವರು.

ಈ ಪ್ರಕಾರ ಇವರ ಭಾಷಣವಾದ ಬಳಿಕ ಮಿ. ಶಕಲಾತವಾಲಾಸಾಹೇಬರು ಅಂದದ್ದು-

ಮುಸಲಮಾನ ಸಂಪತ್ತಿನವು ಹಿಂದಾಯಿತೆಂದಿಗೆ- ತಪ್ಪು ಸಾಮಾನ್ಯವಾದ ಅಧಃಪಾತವಾಗುವದೆಂದು ಪಾರ್ಸಿ ಮಾತ್ಯರು ತಿಳಕೊಂಡಿದ್ದಾರೆ. ಇಂಗ್ಲಿಷ ಜನರು ಇದೇ ವಿಚಾರದಿಂದಿದ್ದ ಮುಸಲಮಾನರಲ್ಲಿ ಭೇದಭಾವ ಹುಟ್ಟಿಸಿ, ಅವರನ್ನು ದಾಸ್ಯತ್ವದಲ್ಲಿಟ್ಟುಕೊಳ್ಳಲು ವಿಶೇಷವಾಗಿ ಜಾಗರೂಕರಾಗಿದ್ದಾರೆ. ಕಾಬೂಲು, ತಕರಾನ, ಅರೇಬಿಯ ಮುಂತಾದ ಮುಸಲಮಾನ ಪ್ರಮುಖ ಪಟ್ಟಣಗಳಲ್ಲಿ ಸಭೆಗೂಡಿ, ಮುಸಲಮಾನರು ಜೀವಂತರಿದ್ದಾರೆಂಬದನ್ನು ಸ್ಥಿರಪಡಿಸಿಕೊಳ್ಳಬೇಕು. ಇಜಿಪ್ತ, ಅಫಗಾಣಿಸ್ಥಾನ, ಇರಾಣ ಮತ್ತು ತುರ್ಕಸ್ಥಾನಗಳನ್ನು ಇಂಗ್ಲೆಂಡವು ತನ್ನ ವರ್ಚಸ್ಸಿನಲ್ಲಿಟ್ಟುಕೊಂಡ ಕಾರಣವಾದರೂ ಬ್ರಿಟಿಶ ಸಾಮ್ರಾಜ್ಯಕ್ಕೆ ಧಕ್ಕೆ ಬಡಿಯಬಾರದೆಂದಾಗಿರುತ್ತದೆ. ನೀವು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರೆಕಿಸಿರಿ. ಅಂದರೆ ಇವೆಲ್ಲ ದೇಶಗಳು ತಾವಾಗಿ ಸ್ವತಂತ್ರವಾಗುವವು ಅದುದರಿಂದ ಮುಸಲಮಾನರು ಮೊದಲು ಹಿಂದುಸ್ಥಾನವು ಸ್ವತಂತ್ರವಾಗುವ ವಿಚಾರ ಮಾಡತಕ್ಕದ್ದು.

ಮುಸಲಮಾನರ ಸಿಸ್ತು ಮತ್ತು ಧರ್ಮಾಭಿಮಾನವು ಪ್ರಶಂಸಾರ್ಹವಾಗಿರುತ್ತವೆ. ಒಬ್ಬನ ಧರ್ಮದ ಮೇಲೊಬ್ಬರು ಹರಿಬೀಳದೆ, ಎಲ್ಲರೂ ಕೂಡಿ, ಸ್ವರಾಜ್ಯ ಸಂಪಾದಿಸುವಂತಿರುತ್ತದೆ. ಪ್ರತಿಯೊಂದು ಧರ್ಮವು ಅನ್ಯ ಧರ್ಮದ ಆಚಾರಗಳಿಗೆ ಜಾಫೆಬರದಂತೆ ವರ್ತನವಿಡುವದಕ್ಕೆ ಪೂರ್ಣ ಸ್ವತಂತ್ರವಾಗುತ್ತದೆ ಇದರಿಂದ ಸ್ವರಾಜ್ಯ ಕಾರ್ಯಕ್ಕೆ ಎಷ್ಟಾದರೂ ಅಡ್ಡ ಹೋಗುವ ಅಗತ್ಯವಿರುವದಿಲ್ಲ."

ಹಿಂದುಸ್ಥಾನದ ಕ್ರಿಶ್ಚನ್ನರಿಗೆ ತಾವೂ ಹಿಂದೂ ಎಂಬ ಬುದ್ಧಿ ಬಂತು!

ವಾಯ್ಸರಾಜನು ಹಿಂದುಸ್ಥಾನದಲ್ಲಿ ಲಕ್ಷೋಪಲಕ್ಷ ಜನರನ್ನು ಕ್ರಿಶ್ಚನ್ನ ಮಾಡಿದ್ದಾರೆ. ಕ್ರಿಶ್ಚನ್ನರಾದಂಥ ಹಿಂದೂ ಜನರಿಗೆ ತಾವು ಇಂಗ್ಲೀಷ ಜನರಂತೆಯೂ ರಾಜ್ಯ ಕತ್ರ ವಾದಂತೆಯೂ ದುರಹಂಕಾರ ಹುಟ್ಟಿತು. ಇತ್ತೀಚಿನ ಕಾಲದ ರಾಜಕೀಯ ವಿಚಾರಣೆ ಧರ್ಮವನ್ನೆಲಂಬಿಸಿದೆ, ಕ್ರಿಶ್ಚನ್ನವೆನ್ನುವ ಅವಲಂಬಿಸಿರುತ್ತದೆಂಬದನ್ನು ಅವರು ಮರೆತೇ ಬಿಟ್ಟರು. ಅಧವಾ ಗೌರಕಾಯ ನಾವ್ರಿಗಳು ಅವರಲ್ಲಿ ಈ ತಿಳುವಳಿಕೆಯನ್ನು ಹುಟ್ಟಿಸಲೇ ಇಲ್ಲ. ಆದರೆ ಜಗತ್ತಿನಲ್ಲಾದ ಕ್ರಾಂತ್ಯುತ್ಕ್ರಾಂತಿಗಳು ತಾವಾಗಿ ಇದರ ಬೆಳಕನ್ನು ಕ್ರಿಶ್ಚನ್ನರಲ್ಲಿ ಕೆಡವಿದೆ ನಾವು ಕ್ರಿಶ್ಚನ್ನರು; ಬೇಕಾದಲ್ಲಿಗೆ ಹೋದರೂ, ಗೌರಕಾಯಸ್ಥರಿಗೆ ದೊರೆಯುವ ಪಕ್ಷ ನಮಗುವದೆಂಬದು ಪೂರಾ ಸುಳ್ಳೆಂಬದನ್ನು ಬೊದಲು ದಕ್ಷಿಣ ಆಫ್ರಿಕೆಯು ಇವರ ನಿದರ್ಶನಕ್ಕೆ ತಂದು ಕೊಟ್ಟಿತು. ಆನಂತರ ಬ್ರೀಟ ವಸಾಹತಿಗಳಲ್ಲಿರೂ ಇದೇ ಹಾಡು ಕಂಡು ಬಂತು. ಕ್ರಿಶ್ಚನ್ನರಾದದ್ದು ಹುಲಿಯ ಬಣ್ಣದಾಸೆಗಾಗಿ ನರಿಯು ಮೈ ಸುಟ್ಟುಕೊಂಡಂತಾಯಿತೆಂದು ಇವರಿಗೆ ಸಸ್ಯದಲ್ಲಿ ಪೂರಾ ಮನದಟ್ಟಾಗಿದೆ. ಹಿಂದುಸ್ಥಾನದ ಪೊಕ್ರುತನಕ್ಕೆ ಗತಿಯೇ ಇಲ್ಲೆಂದೂ, ಧಾರ್ಮಿಕ ನವಿಷ್ಯ ನಿರೀಸ್ಸಿಂದ ತಮಗೆ ಏಳಿಗೆ ಪೋಕ್ಷ

ವಿಲ್ಲಿಂದೂ ಇವರು ಧಾರಾಳವಾಗಿ ಖಂಡುಕೊಳ್ಳಲಾರಂಭಿಸಿದ್ದಾರೆ. ಹಿಂದುಸ್ಥಾನದಲ್ಲಿರುವ ಯೂರೋಪಿಯನ್ ಧರ್ಮದವನು ತಾನು ಮೊದಲು ಹಿಂದೂ, ಅನಂತರ ತನ್ನ ಧರ್ಮವೆಂದು ಹೇಳಿಕೊಳ್ಳಬೇಕಾಗಿದೆ. ಧರ್ಮವಿಚಾರ ಮಾತ್ರವಲ್ಲ; ರಾಜಕೀಯ ವಿಚಾರದಲ್ಲಿಯೂ ಹಿಂದೂ ಜನರೊಂದಿಗೆ ಸಹಕಾರ ಮಾಡಬೇಕಾಗಿರುತ್ತದೆ. ಹಿಂದುಸ್ತಾನದ ಹೊರತು ತನ್ನ ಯೋಗಕ್ಷೇಮವಾಗಲಾರದೆಂದು ತಿಳಿದ ಒಳಿಕ, ಪುನಃ ಹಿಂದೂ ಆಗುವದರಿಂದ ಇವರು ಹೊಂದುವ ಹಾನಿಯಾವದು? ಪರದೇಶಿಯರ ಧರ್ಮದಲ್ಲಿ ಸಿಕ್ಕು ಊರು ಹೊರಗೆ ಬೀಡು ಮಾಡಿಕೊಂಡು, ಸ್ವದೇಶಿಯರ ಸಂಬಂಧ ಕಡಿಕೊಳ್ಳುವದಕ್ಕಿಂತ ಹಿಂದೂ ಆಗಿ, ಸ್ವರಾಜ್ಯ ರಥವನ್ನು ನುಂಡಾಡುವದು ಹೆಚ್ಚು ಭೂಷಣವಾಗುತ್ತದೆ.

ಮ್ಯುನಿಸಿಪಾಲಿಟಿಗಳಿಗೆ
ಮಹಾತ್ಮರ ಉಪದೇಶವು.

—೦—

ಮಹಾತ್ಮರು ಗಯಾಪಟ್ಟಣಕ್ಕೆ ಹೋಗಿದ್ದರು. ಗಯೆಯು ಪವಿತ್ರವಾದ ಪಟ್ಟಣವು. ಜಗತ್ತಿನಲ್ಲಿರುವ ಜನರು ಇದನ್ನು ನೋಡಲಿಕ್ಕೆ ಬರುವರು. ಅವರಿಗೆ ಇದು ಬಹಳ ತೊಂದರೆ ಇರುತ್ತದೆ. ಆದ್ದರಿಂದ ಮ್ಯುನಿಸಿಪಾಲಿಟಿಯ ಮೆಂಬರರು ಸ್ವಚ್ಛತೆಯ ವಿಷಯದಲ್ಲಿ ಕಸುರಿಗೆ ಹಿಡಿದು, ಬೀದಿಗಳನ್ನು ಉಡಿಗಿ, ನಗರ ಸ್ವಚ್ಛತೆಯನ್ನು ಕಾಯ್ದುಕೊಳ್ಳಬೇಕು. ಇದಂತೆ ನಾನು ವರ್ತಿಸಿದ್ದೇನೆ ಇದರಲ್ಲಿ ಯಾವ ಅಪವಾದವೂ ಇರುವದಿಲ್ಲ. ಅಂಗ್ಲಂಡದಲ್ಲಿ ಲಿವ್ಹರಪೂಲ, ಬ್ರಿಸ್ಟಲ ಮೊದಲಾದ ಪಟ್ಟಣಗಳು ಬಹಳ ಹೊಲಸು ಇದ್ದವು. ಮ್ಯುನಿಸಿಪಾಲಿಟಿಗಳು ಸತತವಾದ ಶ್ರಮದಿಂದ ಸ್ವಚ್ಛತೆಯಲ್ಲಿ ಮೇಲಿನ ನಂಬರು ಪಡೆದಿರುತ್ತವೆಂದು ಮಹಾತ್ಮರು ಅಂದಿದುತ್ತಾರೆ. ಕರ್ನಾಟದಲ್ಲಿಯು ಮ್ಯುನಿಸಿಪಾಲಿಟಿಗಳು ಗಯೆಯನ್ನು ಮರಿಸಲಿ ಎಂದು ಆಶಿಸುವೆವು. ಮಹಾತ್ಮರ ಉಪದೇಶದಿಂತೆ ನಡೆದರೆ ನಗರಸಿಕರೇಬ ಪದವಿಯು ಸಾರ್ಥಕವಾಗುತ್ತದೆ.

ಮಂತ್ರಿಗಳನ್ನು ನೇಮಿಸುವ ಪದ್ಧತಿಯು
ವಿರುದ್ಧ ಅಕ್ಷೇಪಣೆ.

—೦—

ಬಹಾರದ ಕೌನ್ಸಿಲ ಸಭೆಯಲ್ಲಿ ಸ್ವರಾಜ್ಯ ಪಕ್ಷದ ಮೆಂಬರು ಮಂತ್ರಿಗಳನ್ನು ನೇಮಿಸುವದರ ವಿರುದ್ಧ ದೊಡ್ಡ ಅಕ್ಷೇಪಣೆ ತಕ್ಕೊಂಡರು. ಮಂತ್ರಿಯೊಬ್ಬನಿಕ್ಕ ಎಷ್ಟು ಜನರಿಂದ ಆರಿಸಲ್ಪಟ್ಟವರಾಗಬೇಕೆಂಬ ನಿಯಮವಿತ್ತು. ಅದರಿಂದ ಇವರು ಸಂಬಳ ಮಂಜೂರ ಮಾಡುವಾಗ ಸರಕಾರಿ ಮತ್ತು ಸಂಕಾರದಿಂದ ನಾಮಿನೇಟಾದಂಥವರ ಹೋಟುಗಳನ್ನು ತಳ್ಳಿಹಾಕುವದು ಅಕ್ರಮವಾದದ್ದೆಂದು ಶ್ರೀ. ಮುಜುಮದಾರರು ವರಾದು ತಂದರು. ಲೋಕನಿಯುಕ್ತ ಮೆಂಬರರೇ ಮಂತ್ರಿಗಳ ಸಂಬಳಕ್ಕೆ ಒಪ್ಪಿಗೆ ಕೊಡಬೇಕಾದರೆ- ಸ್ವರಾಜ್ಯ ಪಕ್ಷದ ಬಹುಮತವಾಗಿ, ಮಂತ್ರಿಗಳಿಗೆ ಉಪಾಟ್ಟನೆ ಬರುವದುಂಟು. ಆದ್ದರಿಂದ ಮವಾಳಿ, ಸರಕಾರಿ ಮತ್ತು ನಾಮಿನೇಟಾದಂಥ ಮೆಂಬರರು ಒಟ್ಟಾಗಿ, ಈ ವರಾವನ್ನು ಸೋಲಿಸಿದರು.

ಕೌನ್ಸಿಲದ ಮುಸಲಮಾನ ಮೆಂಬರರಿಗೆ
ಸಕ್ತಮಜೂರಿಯ ತೀಕ್ಷೆ.

—೦—

ಕಲಕತ್ತೆಯ ಮ್ಯುನಸಿಪಾಲಿಟಿಯ ಹಾಗು ಬಂಗಾಲದ ಕೌನ್ಸಿಲದ ಮೆಂಬರ ಆದ ಶೇಖ ಸುಲೇಮಾನರೆಂಬವರೂ ಇನ್ನು ನಾಲ್ವರೂ ಸೇರಿ ಹಿಂದೂ ಮುಸಲಮಾನ ದಂಗೆಯಲ್ಲಿ ಸೇರಿ, ಸಮಾರಾಮಿಂಗನೆಂಬ ಪೋಲೀಸ ಸಿಪಾಯಿಯನ್ನು ಹೊಡೆದು ಘಾಯಮಾಡಿಸಿದರೆಂಬ ಆರೋಪದ ವಿಚಾರಣೆಯು ಕಳೆದವಾರ ತಿಂಗಳಿಂದ ನಡೆದಿತ್ತು. ಆಜೆ ಪೆನ್ನಿನ ದಿವಸ ಮ್ಯಾಜಿಸ್ಟ್ರೇಟನು ತೀರ್ಪು ಹೇಳಿ, ಶೇಖ ಸುಲೇಮಾನರಿಗೆ ಆರು ತಿಂಗಳ ಸಶ್ರಮ ತೀಕ್ಷೆ ಮತ್ತು ಐನೂರು ರೂಪಾಯಿ ದಂಡ ವಿಧಿಸಿ, ದಂಡದಲ್ಲಿ ಅರ್ಧ ಹಣವನ್ನು ಸಿಪಾಯಿಗೆ ಕೊಡಬೇಕೆಂದು ತೀರ್ಪು ಹೇಳಿದ್ದಾರೆ.

ವಿಜಾಪೂರದ ಬರವು-

ಈ ಜಿಲ್ಲೆಯು ಸ್ಥಿತಿಯೊಂದು ತಾಲೂಕಿನ ಯೂ ಬಾವುಂಟು. ಬರದ ಹಾಹಾಕಾರವನ್ನು ವರ್ಣಿಸುವಷ್ಟು ಬೇಸಗೆಯು ಅಲ್ಲಿಯ ವೃತ್ತಪತ್ರಿಕೆಗಳಲ್ಲಿ ಬರುತ್ತಿರುವರು. ಶ್ರೀ. ಕೌಜಲಗಿ ಶ್ರೀನಿವಾಸರಾಯರು ಹುನಗುಂದ ತಾಲೂಕಿನಲ್ಲಿ ಪ್ರವಾಸ ಮಾಡಿ ಬಂದರು. ಹುನಗುಂದದಲ್ಲಿ ಆರು ನೂರು ಜನರು ಗುಳೇ ಹೋಗಿದ್ದಾರೆ ಸಂಗನಕ್ಷೇತ್ರದಂತೂ ಹಾಳು ಸುರಿಯುತ್ತಿರುವದು. ನಾಲ್ಕು ವರ್ಷಗಳಿಂದ ಅಲ್ಲಿ ಕರಿಸಾಲಾಗಿದೆ. ಜನನ ಸತಿಯು ಗಳಿಗೆ ಇದರಲ್ಲಿ ೫೦ ಜನರು ಹೊಟ್ಟೆಯ ದೆಸೆಯಿಂದ ಗ್ರಾಮತ್ಯಾಗ ಮಾಡಿದ್ದಾರೆ. ಶಾಲೆಯಲ್ಲಿ ೧೫೦ ಹುಡುಗರಿದ್ದವು. ಆ ಸಂಖ್ಯೆಯು ೫೦ ಆಗಿದೆ. ಸಂಗನುರಿಂತೆ ಬೇರೆ ಗ್ರಾಮಗಳ ದುರವಸ್ಥಾನವನ್ನು ಹೆಚ್ಚುಕಡಿಮೆ ಪ್ರಮಾಣದಿಂದ ಊಹಿಸಬಹುದು.

ಅಸೆಂಬ್ಲಿಯೆಲ್ಲಿಯ ಪಕ್ಷ ಪ್ರಪಕ್ಷಗಳು.

—೦—

ಅಸೆಂಬ್ಲಿಗಾಗಿ ಕೂಡಿದ ಸ್ವತಂತ್ರ ಕಾಂಗ್ರೆಸ ಮತ್ತು ಪ್ರತಿಯೋಗಿ ಸಹಕಾರಿಗಳು ಸೇರಿ, ತಮ್ಮದೊಂದು ರಾಷ್ಟ್ರೀಯ ಪಕ್ಷವನ್ನು ನಿರ್ಮಾಣ ಮಾಡಿಕೊಂಡರು. ಲಾಲಾ ಲಜಪತರಾಯರು ಅಧ್ಯಕ್ಷರು, ಬ್ಯಾರಿಸ್ಟರ ಜಯಕರರು ಉಪಾಧ್ಯಕ್ಷರು ಮತ್ತು ಕಲಕತ್ತೆಯ ಬಂಗಾಲಿ ಬರ್ಮ್ಯ ಇವರು ಕೋಶಾಧ್ಯಕ್ಷರಾಗಿದ್ದಾರೆ.

ಪಂಡಿತ ಮದನ ಮೋಹನ ಮಾಲವಿಯವು ಯವರೂ ಒಂದು ಕವಿಟಿ ನೇಮಿಸುವ ವಿಚಾರದಲ್ಲಿದ್ದಾರೆ. ಇದರಲ್ಲಿ ಮುಸಲಮಾನ ಮೆಂಬರನ್ನೂ ನೇಮಿಸಿಕೊಳ್ಳಬೇಕೆಂದಿದ್ದಾರೆ.

ಇದೇ ಪ್ರಕಾರ ಸ್ವರಾಜ್ಯ ಪಕ್ಷೀಯರೂ ಕಮಿಟಿ ಕೂಡಿ, ಶ್ರೀ ಶೇಷ ಅಯ್ಯಂಗಾರ, ಪೆರುಮಲನಾಯಡು, ಮತ್ತು ಗೋಸಾಮಿ ಇವರ ದೊಂದು ಉಪ ಕವಿಟಿ ನೇಮಿಸಿ, ಇದಕ್ಕೆ ನಿಯಮಗಳನ್ನು ಏರಿಯುವ ಅಧಿಕಾರ ಕೊಟ್ಟಿದ್ದಾರೆ.

ಬ್ಯಾರಿಸ್ಟರ ಜಿನ್ನಾ ಸಾಹೇಬರು ಹಿಂದಿನ ಸಾರಿ ಸ್ವತಂತ್ರ ಪಕ್ಷದ ಧುರೀಣರಾಗಿದ್ದರು. ಪಂಡಿತ ಮಾಲವಿಯಾ ಮೊದಲಾದವರು ಇದರ ಮೆಂಬರಾಗಿದ್ದರು. ಪ್ರಸ್ತುತದಲ್ಲಿ ಬ್ಯಾರಿಸ್ಟರ ಸಾಹೇಬರಿಗೆ ಎಲ್ಲಿ ನೋಡಿದರೂ ಮುಸಲಮಾನ ವಿರೋಧವೇ ಕಂಡುಬರುತ್ತಿರುವದರಿಂದ, ಇವರು ಧುರೀಣತ್ವವು ಹೋಗಿದೆ. ಮುಸಲಮಾನರೇ ಒಂದು ಸ್ವತಂತ್ರ ಕವಿಟಿ ಮಾಡಬೇಕೆಂದಿದ್ದಾರೆ. ಅದರಲ್ಲಿ ಮಹಮ್ಮದಾಲಿಯವರು ಮುಖ್ಯರಾಗಿರುತ್ತಾರೆ.

ಶ್ರೀ. ಪಟೇಲರು ಸರ್ವಾನುಮತದಿಂದ ಅಸೆಂಬ್ಲಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಇವರ ಚುನಾವಣೆಗೆ ಸರಕಾರ ಕೂಡ ಮೊದಲಿನಿಂದ ಅನುಕೂಲವಾಗಿತ್ತೆಂಬದು ಗೌರವದ ಸಂಗತಿಯು.

ದಿಲ್ಲಿಯಲ್ಲಿ ಅಸೆಂಬ್ಲಿ, ಕೌನ್ಸಿಲ ಆಫ ಸ್ಟೇಟ್ ಮತ್ತು ನರೇಂದ್ರ ಮಂಡಲದ ಓಲಗಗಳಿಗಾಗಿ ಕಟ್ಟಿದ ಭವ್ಯ ಸಭಾಮಂದಿರವನ್ನು ಕೆಡಿಯುವ ಸಮಾರಂಭವಾಯಿತು. ಬಾದಶಾಹರು ಇದನ್ನು ಹರಸಿದ ಸಂದೇಶ ಕಳಿಸಿದ್ದಾರೆ.

ಅಬ್ದುಲ ರಶೀದನು ಹುಚ್ಚನಿದ್ದನೆಂದು ಕೊಟ್ಟ ಲಕ್ಷ ಸಾಕ್ಷಿಗಳ ಯಾದಿಯನ್ನು ಕವಿಟಿಂಗ ಮ್ಯಾಜಿಸ್ಟ್ರೇಟರು ರದ್ದು ಮಾಡಿದರು.

ನೋಟೀಸು.

ಯಲ್ಲಪ್ಪಾ ತಂದಿ ಧೂಳಪ್ಪಾ ಅಗಳಗಟ್ಟಿ ಸಾಕೀನ ಹುಲಿಕೇರಿ ಅವನಿ ಕೆ—

ಕಳಸೆ ಹೆಬ್ಬಟ್ಟಿನ ಗುರ್ತಾ ಮಾಡುವ ತಾಯವ್ವಾ ಕೋಮ ಲಕ್ಷ್ಮಣ ನಂದಿ ಸಾಕೀನ ಹುಲಿಕೇರಿ ಈಕೆಯು ನಿನಗೆ ಈ ನೋಟೀಸಿಂದ ತಿಳಿಸುವದೇನಂದರೆ-

ನೀನು ನನ್ನ ಖಾಸ ಅಣ್ಣನಾಗಬೇಕು ನೀನು ನಮನೆಯ ಅಳಿಯನಾಗಿರಬೇಕೆಂದೂ, ನನ್ನ ಮನೆತನದ ಹೊಡೆಯನ್ನು ಸಾಗಿಸಿಕೊಂಡು ಹೋಗಬೇಕೆಂದೂ ನನ್ನ ಏಳು ತಿಂಗಳ ಮಗಳನ್ನು ಮನೆ ಮಾತಿಕೊಟ್ಟಿನು ಈಗ ಮಗಳು ಏಳು ವರ್ಷದ ಕಳಾಗಿದ್ದಾಳೆ. ನನ್ನ ಮಗನು ತೀರ ಚಿಕ್ಕವಳಾದ್ದರಿಂದ, ಪ್ರಬುದ್ಧನಾದ ನಿನ್ನ ಪ್ರಪಂಚದ ದೆಸೆಯಿಂದ ಗೋ ವಿಂದಪ್ಪಾ ತಂದಿ ಫಕೀರಪ್ಪಾ ಈತನ ಪ್ರಬುದ್ಧ ಮಗಳನ್ನು ಮದಿವೆ ಮಾಡಿ ಕೊಟ್ಟೆನು ಮದಿವೆಯಾಗಿ ಎಂಟು ತಿಂಗಳಾಯಿತು ಈಗ ನೀನ ಅಜಮಾಸು ೧೫ ದಿವಸಗಳ ಹಿಂದೆ ನಿನ್ನ ಮಾವನ ಮಾತು ಕೇಳಿ, ನನ್ನ ಮನೀ ಬಿಟ್ಟು ಹೊರಗೆ ಹೋಗಿರುತ್ತೀದಿ ಹೋಗುವಾಗ ವಾಲುಗಾರಿಕೆಯಿಂದ ಮಾಡಿದ ಹೊಲದಲ್ಲಿದ್ದ ಭತ್ತದ ಪೀಕು ನೈದಿರುತ್ತೀದಿ ಇದು ನಿನಗೆ ಬಂತಕ್ಕದ್ದು ಇದರಿಂದ ನನ್ನ ಪುಸ್ಕಳ ಉಳವಾಸು ಮಾಡಿರುತೀದಿ ಮತ್ತು ನಿನ್ನ ಲಗ್ನದ ಬಾಬತು ನಿನ್ನ ಮಾವನ ಹೆಸರಿಲೆ ನಾನು ಮುನ್ನೂರು ರೂಪಾಯದ ಪ್ರಾಮಿಸರಿ ನೋಟು ಬರಕೊಟ್ಟಿರುತ್ತೇನೆ ನೀನು ನಿನ್ನ ಮಾವನ ಮಾತು ಕೇಳಿ, ನನ್ನ ಉಳವಾನ ಮಾಡಿಸ್ದರಿಂದ ನಿನಗೆ ಈ ನೋಟೀಸು ಕೊಡಬೇಕಾಯಿತು ನೀನು ನನ್ನ ಪತಿಯಿಂದ ಮಾಡಿದ ವಾಲುಗಾರಿಕೆಯ ಹೊಲದ ಪೀಕಿನ ಬಾಬತು ಆದ ಉಳವಾನ, ಪಂಚರು ಶಟ್ಟಿದ್ದನ್ನು ಮತ್ತು ನಿನ್ನ ಮೊದಲನೆಯ ಹೆಂಡತಿಯು ಪ್ರಬುದ್ಧಳಾಗುವ ತನಕ ಪೋಟಿಗೆ ಖರ್ಚು ಮತ್ತು ನಿನ್ನ ಲಗ್ನಕ್ಕಾಗಿ ವೆಚ್ಚ ಮಾಡಿದ ಮುನ್ನೂರು ರೂಪಾಯಿ ಇವನ್ನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ಕೊಟ್ಟು ನನ್ನಿಂದ ಪಾವತಿ ಶಕ್ಕಿಸಿಕೊಳ್ಳಬೇಕು ಮತ್ತು ನಿನ್ನ ಮಾವನಿಂದ ನನ್ನ ಪ್ರಾಮಿಸರೀ ನೋಟು ಪರತ ಕೊಡಿಸಬೇಕು ಪೋಟಿಗೆ ಕಾಗದ ನೋಂದಾಯಿಸಿ ಕೊಡಬೇಕು ಈ ಪ್ರಕಾರ ನೀನು ನಡಿಯದಿದ್ದಲ್ಲಿ ನಿನ್ನ ಮೇಲೆ ಕಾಯದೆ ಪ್ರಕಾರ ತಲಾಜ ಮಾಡುವೆನು ಈ ಬಾಬತು ಆಗುವ ಯಾವತ್ತು ಖರ್ಚಿನ ಬೋಜಾ ನಿನ್ನ ಮೇಲುಂಟು. ಈ ನೋಟೀಸಿನ ಖರ್ಚು ನಿನ್ನ ತಲಿಯ ಮೇಲಿರುತ್ತದೆ. ತಿಳಿಯುವದು.

ತಾ॥ ೨೦-೧-೧೯೩೭

ಈ ಎಡಸ್ಕೆ ಹೆಬ್ಬಟ್ಟಿನ ಗುರ್ತಾ ತಾಯವ್ವಾ ಕೋಮ ಲಕ್ಷ್ಮಣ ನಂದಿ ಈಕೆ ಕೈದು ಇರುತ್ತದೆ.

ಮದ್ರಾಸ ಗೌನ್ಮೆಂಟಿನ ಲೋಕಪ್ರಿಯುಕ್ತ ಮೆಂಬರರಾದ ಡಾಕ್ಟರ ಮುತ್ತಯ್ಯನವರಿಂದ ಪರಿಶೋಧಿಸಲ್ಪಟ್ಟ

ಮೆಸರ್ಸ ಪಿ. ವ್ಹಿ. ರಾಜನ ಕಂಪನಿಯ

ಸುಗಂಧ ನಶ್ಯದ ಪುಡಿಯು.

ಪ್ರಖ್ಯಾತಿ ಹೊಂದಿದ ಈ ನಶ್ಯದ ಪುಡಿಯು ಅಮೂಲ್ಯವಾದದ್ದಿದ್ದು ಲಕ್ಷಾವಧಿ ಜನರು ಇದರ ಉಪಯೋಗ ಮಾಡಿದ್ದಾರೆ. ಇದರ ಗುಣದ ಬಗ್ಗೆ ಸಾವಿರಾರು ಜನರು ಸರ್ಟೀಫಿಕೇಟುಗಳನ್ನು ಕೊಟ್ಟಿದ್ದಾರೆ ಈ ಪುಡಿಯ ಉಪಯೋಗದಿಂದ ಗುಣವಾಗುವ ವ್ಯಾಧಿಗಳು:— ಸೀನಸು, ಅರತಲೆನೋವು, ತಲೆಯಲ್ಲಿಗುನ ಮೊದಲಾದ ವಿಕಾರಗಳು ಕಣ್ಣುಗಳಲ್ಲುಂಟಾಗುವ ಎಲ್ಲ ವ್ಯಾಧಿಗಳು ದೂರಾಗಿ ಸ್ಮರಣ ಶಕ್ತಿಯು ಹೆಚ್ಚುತ್ತದೆ. ಜೇರೆ ನಶ್ಯದಲ್ಲಿ ಈ ನಶ್ಯದ ಒಂದು ಚಟಿಕೆಯನ್ನು ಕಲಿಸಿದರೆ ಎಲ್ಲವೂ ಸುಗಂಧವಾಗುವದು. ಮತ್ತಾರಿಗೆ ಉಚಿತವಾಗಿ ಮೊದಲಾಯವದು.

ಸಾದಾ ಮದ್ರಾಸ ನಸ್ಯ ೧೨೦ ತೊ ವೀಸಿ ಒಂದಕ್ಕೆ ನೆಂಬರು ೧ ೪-೦-೦
,, ೨ ೫-೮-೦

ದಯವಿಟ್ಟು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ತಂತಿ ವಿಳಾಸ- ನಸ್ಯವ್ಯ | ಪಿ. ವ್ಹಿ. ರಾಜನ ಮತ್ತು ಕಂಪನ್ಸಿ
ಬಳಿ ಗೋವಿಂದಪ್ಪ ನಾಯಿಕನ ಬೀದಿ ಜಾರ್ಜ್‌ಟೌನು, ಮದ್ರಾಸ

ನೋಟೀಸು

ಗೋವಿಂದಪ್ಪಾ ತಂದಿ ಫಕೀರಪ್ಪಾ ಜಜಾರಿ ಸಾಕೀನ ಹಾವೇರಿ ಹಾಲಿವಸ್ತು ಹುಲಿಕೇರಿ ಇವನಿಗೆ

ಕಳಸೆ ಹೆಬ್ಬಟ್ಟಿನ ಗುರ್ತಾ ಮಾಡುವ ತಾಯವ್ವಾ ಕೋಂ ಲಕ್ಷ್ಮಣ ನಂದಿ ಸಾ॥ ಹುಲಿಕೇರಿ ತಾಲೂಕ ಧಾರವಾಡ ಈಕೆಯು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನಾನು ನನ್ನ ಖಾಸ ಅಣ್ಣನಾದ ಯಲ್ಲಪ್ಪಾ ತಂದಿ ಧೂಳಪ್ಪಾ ಅಗಳಗಟ್ಟಿ ಈತನಿಗೆ ನನ್ನ ಮಗಳನ್ನು ಕೊಟ್ಟು ಮದಿವೆ ಮಾಡಿ ಕೊಟ್ಟಿರುತ್ತೇನೆ ಸದ್ಯ ಮಗಳು ತೀರ ಚಿಕ್ಕವಳಿದ್ದ ಮೂಲಕ ಪ್ರಬುದ್ಧನಾದ ನನ್ನ ಅಣ್ಣನಿಗೆ ನಿನ್ನ ಮಗಳನ್ನು ನಾನೇ ವೆಚ್ಚ ಮಾಡಿ ಮದಿವೆ ಮಾಡಿಸಿದೆನು ನನ್ನ ಅಣ್ಣನಿಗೆ ಸ್ಥಾವರ ಆಸ್ತಿಯು ಇರದ್ದರಿಂದ, ನಿನ್ನ ಮಗಳ ಹಿತದ ದೆಸೆಯಿಂದ ನಾನು ನಿನ್ನ ಹೆಸರಿನಿಂದ ಮುನ್ನೂರು ರೂಪಾಯಿಗೆ ಒಂದು ಪ್ರಾಮಿಸರಿ ನೋಟು ಬರಕೊಟ್ಟಿದ್ದೇನೆ ಈ ನೋಟಿನ ತರ್ತುಗಳ ಕರಾರ ಪತ್ರವನ್ನು ನೀನು ನನಗೆ ಬರಕೊಟ್ಟಿರುತ್ತೀದಿ ಲಗ್ನವಾಗಿ ಎಂಟು ತಿಂಗಳಾಯಿತು ಆದರೆ ಈಗ ನನ್ನ ಅಣ್ಣನು ನಿನ್ನ ಮಾತು ಕೇಳಿ ನನ್ನ ಮನೀ ಬಿಟ್ಟು ನಿನ್ನ ಮಗಳನ್ನು ಕರಕೊಂಡು ಬೇರೆ ಕಡೆಯಲ್ಲಿರುತ್ತಾನೆ ಅಣ್ಣ ಮತ್ತು ನಿನ್ನ ಮಗಳು ಕೂಡಿ ನನ್ನ ಮನೆಯಲ್ಲಿದ್ದು ಹೆಣ್ಣು ಮಗಳಾದ ನನ್ನ ಮನೆತನ ಸಾಗಿಸಿಕೊಂಡು ಹೋಗಬೇಕೆಂಬ ಕರಾರು ಮತ್ತು ಈ ಕರ್ತಿನಿಂದ ನನ್ನ ಮಗಳನ್ನು ಕೊಟ್ಟಿರುತ್ತೇನೆ ನಿನ್ನ ಮಗಳನ್ನು ಕೊಡುವಾಗ ಅದೇ ಕರ್ತು ಇತ್ತು ಆದರೆ ನಿನ್ನ ಭುಲತಾಪೆಯಿಂದ ಸದರ ನನ್ನ ಅಣ್ಣನು ಈ ಕರ್ತು ಮುರಿದು ತೊರಗೆ ಹೋಗಿರುತ್ತಾನೆ ಕಾರಣ ನಿನಗೆ ಬರಕೊಟ್ಟಂಥ ಪ್ರಾಮಿಸರಿ ನೋಟು ರದ್ದು ಜಗಿರುತ್ತದೆ ಮತ್ತು ನೀನು ಈ ನೋಟು ನನಗೆ ಕೊಟ್ಟು ನೀನು ನನಗೆ ಬರಕೊಟ್ಟ ಕಾಗದ ಪರತ ಒಪ್ಪಿಸೇಕು ಈ ನೋಟೀಸಿನ ವಿರುದ್ಧ ನೀನು ನನ್ನ ಮೇಲೆ ಇಲಾಜ ಮಾಡಿದರೆ- ಆ ಸಂಬಂಧಿ ನನಗಾಗುವ ಯಾವತ್ತು ಖರ್ಚಿನ ಬೋಜಾ ನಿನ್ನ ಮೇಲುಂಟು. ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಆದ ತಿಳಿಯುವದು ತಾ॥ ೨೦-೧-೩೭ ನೇ ಇಸ್ವಿ

ಈ ಎಡಸ್ಕೆ ಹೆಬ್ಬಟ್ಟಿನ ಗುರ್ತಾ ತಾಯವ್ವಾ ಕೋಮ ಲಕ್ಷ್ಮಣ ನಂದಿ ಈಕೆ ಕೈದು ಆದೆ.

ಜಂದಾದಾರರಿಗ ಸೂಚನೆ.

ಜಾನೇವಾರಿ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಜಂದಾದಾರರ ಹೆಸರಿನಿಂದ ಹ್ವಿ. ಪಿ. ಯನ್ನು ಕಳಿಸುವೆವು. ಜಂದಾದಾರರು ಹ್ವಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂಬ ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಜಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಪತ್ರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿತು.

R. N. B. 1448

ವಿಜಯ

ಒಳ್ಳೆಯ ಪತ್ರಿಕೆ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮: ಧಾರವಾಡ ರವಿವಾರ ತಾರೀಖು ೨೩ನೇ ಜನೇವಾರಿ ೧೯೨೩ [ಸಂಚಿಕೆ ೧೯

ಕಿರ್ಲೋಸ್ಕರ ಕಬ್ಬಿನ ಗಾಣಗಳು.



ಮೊನ್ನೆ ಫಾಲ್ಗುನ ಪ್ರದರ್ಶನದಲ್ಲಿ ಈ ಕಮಾಲ್ ಗಾಣಕ್ಕೆ ಪದಕವನ್ನು ದೊರೆತಿತ್ತು ಹೆಚ್ಚಿನ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಪೆಲ್ಹಾ, ಸಾತಾರಾ

ಧಿಧಾರವಾಡ ಅರ್ಬನ ಕೋ. ಆಪರೆಟಿವ್ವ ಬ್ಯಾಂಕ ಲಿಮಿಟಿಡ

ನುಂಗಿಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ವ ಕ್ರಾಡಿಟ ಸೊಸಾಯಟಿಯ ಆಕ ಪ್ರಕಾರ ರಚ್ಚರ ಮಾಡಿಲ್ಪಟ್ಟದ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸಾನ.

ಜಂದಿಗೆಯು ಆರು ಲಕ್ಷದ ಮೇಲುಂಟು. ಚೆಕ ಮುಂತಿ ಸಾಧಾರಣವಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ತಿಜಾವಣೆಗಳಿಗೆ ಜನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕಳಿಗೆ ಸಹೀ ಮಾಡಿದವ ಮಿಂದ ತಿಳಕೊಳ್ಳಬೇಕು.

ಮಾತ್ಯಹರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

— ೦ —

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಇರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ದಿವಾಜಿ ಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಯ್ಸ ಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಡಾಗಿನೆಗಳನ್ನು ಮತ್ತೀ ಇ ಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಕಸ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ಮೂರು ಮೋಟಾರಗಳ ಮಾರಾಟ.

ತಿನರಲಿಟಿ ಮೋಟಾರ ಲಾರಿ ಹವಿನಾರು ಜನರು ಕೂಡುವವು ಒಂದು, ಗಿಳಿ ಜನರು ಕೂಡುವವು ವ ತು, ಬೇಬಿ ೨ಟ ಸಿನ್ಹ ಲೇಟ ಟೂರಿಂಗ ಕಾರ ಈ ಮೂರು ಮೋಟಾರ ಗಳನ್ನು ಮಾರಬೇಕನುವ್ದೇನೆ. ಇವು ಒತ್ತನು ಸ್ಥಿತಿಯಲ್ಲಿದ್ದವ್ದು, ಸದ್ಯದಲ್ಲಿ ಸರ್ವೀಸದ ಲ್ಲಿರುತ್ತವೆ. ಕೊಳ್ಳಲಿಚ್ಛಿಸುವವರು ಪರೀಕ್ಷೆ ಮಾಡಿ ಕೊಳ್ಳಬಹುದು ಕ್ರಯ ಮುಂಕಾದ್ದರ ಬಗ್ಗೆ ಸಮಕ್ಷವು ಅಗರ ನಮ್ಮ ವಿಜಂಬೊವಾದ ಅಲ್ಲಾಬಕ್ಷ ಎ. ಹ ರಿಪನಹಳ್ಳಿ ವ ಜ ರಿಪೇರು ಆ್ಯಂಡ ಡೀಲರ ಪಾಲಗಿ ಎದುರಿಗ ಧಾರವಾಡ ಇವರನ್ನು ವಿಚಾರಿಸಬೇಕು.

ಎ ವಾಯ ಭಸ್ಮರಿ ಕಿರ್ಲೋಸ್ಕರ
ಕಿರ್ಲೋಸ್ಕರ ಮೋಟಾರ ಸರ್ವೀಸ

ಸೂಚನೆ— ಮೂರೂ ಮೋಟಾರ ಕೊಗೊಂಡಲ್ಲಿ ಸೋ ವಿಸಾಗಬಹುದು

ಸೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಸುಂದೆ ಪ್ರತಿಯೊಂದು ವಳಿಗೆ ಒಂದುವರಿ. ಅಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಅಣೆ ಸರ ಕಾರಿ, ಮ್ಯುನಿಸಿಪಾಲಿಟಿ ರೋಳಲರೋರ್ಡ ರೇರೆ ಬ್ಯಾಂಕ ವಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂಗ್ಲಿಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರು ಅಣೆ ಡಬಲ್‌ಕಾಲಮಿನ ಒಳಿಗಳಿಗೆ ಇಮ್ಮಡಿ ತಾರ್ಜು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ರಕ್ಕೆ ಪತ್ರವ್ಯವಹಾರ ಮಾಡಬಹುದು. ವ್ಯಾ. ವಿಜಯ

ವಿಜಯದ ವರ್ಗಣೀ ದರ

— ೦ —

ಏಕಪತ್ರಕ್ಕೆ		
೧೨	ತಿಂಗಳಿಗೆ	೧೨—೦—೦ ರೂ
೬	,,	೭—೦—೦ ರೂ
೩	,,	೪—೦—೦ ರೂ
ದಾವಪತ್ರಕ್ಕೆ	೧ ವರ್ಷಕ್ಕೆ	೨೦—೦—೦ ರೂ

ವಿಶೇಷ ಮಾಹಿತಿ ಕಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ಬು- ೨೫-೧-೧೯ ನೇ ಇಸ್ವಿ

ರಾವಬಹಾದ್ದೂರ ಕಂಬಳಿ ಮತ್ತು ಮುಂಡಿದೋಸಾದ ಮಹಾಸಭೆಯು.

ಹುಬ್ಬಳ್ಳಿಯಲ್ಲಿ ಕೂಡಬೇಕಾಗಿದ್ದ ವೀರಶೈವ ಮಹಾಸಭೆಗೆ ಏಕೆ ಮುಂದೋಡಿದೆವೆಂಬ ಕಾರಣವನ್ನು ಸ್ಪಷ್ಟವಾದ ಶಬ್ದಗಳಿಂದ ವೀರಶೈವ ಪತ್ರಿಕೆಗಳಾದ ಬಸವರಾಜ ಮತ್ತು ಲೋಕಮತಗಳು ಹೇಳಿಕುತ್ತವೆ. ಇವೆರಡೂ ಪತ್ರಗಳ ಅನಕರಣಗಳನ್ನು ಬೇರೆ ಕಡೆಯಲ್ಲಿ ಕೊಟ್ಟಿರುತ್ತೇವೆ. ರಾ. ಬ. ಕಂಬಳಿಯವರು ದಿವಾನಗಿರಿಯ ಆಶೆಯಲ್ಲಿ ಸಭೆಯನ್ನು ಮುಂದೋಡ್ಡಿದ್ದಾರೆಂಬಾದಂಥ ಮಹಾಸಭೆಯನ್ನು ಮುರಿಯಲು ನಿಮಿತ್ಯವಾದರೆಂದು ಹೇಳುವದೂ, ಅರಸನನ್ನು ಕಂಡು ಸುರುಸುನೆನ್ನು ಮಳಿಸರೆಂದು ಹೆಣ್ಣುಮಕ್ಕಳು ಹೇಳುವ ಗಾದೆಯ ಪ್ರಕಾರ ಹಿಂದೇ ಆಗುತ್ತದೆ. ರಾ. ಬ. ಕಂಬಳಿಯವರು ದಿವಾನರಾಗಿದ್ದಾಗಿ- ವೀರಶೈವ ಮಹಾಸಭೆಯು ಕೂಡುತ್ತಿತ್ತು, ಆಗದಿದ್ದರೆ- ಕೂಡುತ್ತಿದ್ದಿಲ್ಲೆಂಬಂತಿಲ್ಲ, ರಾ. ಬ. ತಮನು ಕೇವಲ ಸ್ವಾರ್ಥಪ್ರಿಯತೆಯಿಂದ ಇಂದು ದೊಡ್ಡ ಅಪಕೀರ್ತಿಯನ್ನು ತಮ್ಮ ಹಾಲಿಗೆ ಕಟ್ಟಿಕೊಂಡರೆಂದು ಹೇಳುವಂತಾಯಿತು. ಈ ಅಪಕೀರ್ತಿಯು ವೈಕ್ತಿಕ ರಾ. ಬ. ಕಂಬಳಿಯವರಿಗಿದ್ದರೂ, ಹುಬ್ಬಳ್ಳಿಯ ಇಡೀ ವೀರಶೈವರಿಗೇ ಇರುತ್ತದೆಂಬದನ್ನು ಮರೆಯ ತಕದು. ರಾ. ಬ. ಕಂಬಳಿಯವರು ದಿವಾನಗಿರಿಯಲ್ಲಿ ತೊಡಗಿದ್ದಿರಿಂದಿಳಿದ ಅತಿಥಿ ಮಹಾರಥಿಗಳು ಒಂದಾಗಿ, ಇವರನ್ನು ಹಿಂದಕ್ಕೆ ಸರಿಸಿ, ತಾವು ಈ ಕೆಲಸವನ್ನು ನಿರ್ವಹಿಸಬೇಕೆಂಬಾಕಾಂಕ್ಷೆಯಿಂದ ಸಹಜವಾದ ಪ್ರಶ್ನೆ ಹೊಮ್ಮುತ್ತದೆ.

ರಾ. ಬ. ಕಂಬಳಿಯವರ ಈ ಶಪ್ಪ ಕ್ಷಮ್ಯವೋ? ಅಕ್ಷಮ್ಯವೋ? ಎಂಬದನ್ನು ವೀರಶೈವರೇ ಸೂಚಿಸಕ್ಕಿದ್ದು. ಇದು ಅಕ್ಷಮ್ಯವೆಂದು ಕಂಡು ಬಂದಪಕ್ಷದಲ್ಲಿ- ಇವರನ್ನು ಯಾವದೊಂದು ಸಾರ್ವಜನಿಕ ಕೆಲಸ ಕಾರ್ಯಗಳಲ್ಲಿ ಮುಂದೆ ಮಾಡದೆ, ಅನ್ಯೊಬ್ಬರನ್ನು ಮುಂದಾಳು ಮಾಡಿಕೊಂಡು ಎಲ್ಲ ಕೆಲಸಗಳನ್ನು ನಡೆಯಿಸುವದೇ ಲೇಸು. ಇಂಗ್ಲಂಡದಲ್ಲಿ ಒಮ್ಮೆ ಮುಖ್ಯ ಮಂತ್ರಿಯಾಗಿದ್ದ ಮಿ. ಲಾಯಿಡ್ ಜಾರ್ಜ್‌ಸಾಹೇಬರನ್ನು ಲಿಬರಲ್ ಪಾರ್ಟಿಯವರು ಲೀಡರ ಕೆಲಸದಿಂದ ಪದಚ್ಯುತ ಮಾಡಿದ್ದನ್ನು ವಿಜಯದಲ್ಲಿ ಬರೆದದ್ದನ್ನು ಪ್ರಮುಖರಾದ ವೀರಶೈವರು ಓದಿದ್ದಾರೆಂದು ಹೇಳಲು ಪ್ರತ್ಯವಾಯವಿಲ್ಲ. ವಿಲಾಯತಿಯ ಪದ್ಧತಿಯ ಅನುಕರಣ ಮಾಡಿ, ರಾ. ಬ. ರವರನ್ನು ಹಿಂದಕ್ಕೆ ಸರಿಸುವಂಥ ಮನೋಧೈರ್ಯವಿದ್ದ ಹೊರ್ತು ಸಮಾಜಕ್ಕೆ ಇಂಥ ದೂಷಣವು ಏಗಾಗ್ಗೆ ಬರುವದು ತಪ್ಪಲಾರದು. ಸಮಾಜ ಹಿತದ ವಿರುದ್ಧ ಯಾವದೊಂದು ಕೃತ್ಯ ಮಾಡಿದರೆ- ಅದರಿಂದ ಯೋಗ್ಯ ಶಾಸನವಾಗುತ್ತದೆಂದು ಕಂಡುಬಂದ ಹೊರ್ತು ಯಾರನೂ ಎಚ್ಚರಾಗಲಾರನು. ಮುಂದಿನವನಿಗೆ ಕೂತ ಕಡತದಿಂದ ಹಿಂದಿನವನು ಎಚ್ಚರಾಗುವನೆಂಬ ನುಡಿಯು ಪ್ರಕಾರ, ಎರಡನೆಯವರು ಇಂಥ ಪ್ರಮಾದ ಮಾಡಲಾರರು.

ರಾ. ಬ. ಕಂಬಳಿಯವರ ಮೇಲೆ ಈ ಎಂಡು ಪತ್ರಗಳು ಹೊಡಿಸಿರುವ ಆರೋಪವು ಅಸಾಧಾರಣವಾದದ್ದು. ಇದರಿಂದ ಇವರ ಪ್ರತಿಷ್ಠೆಗೆ ನಿರಂತರವಾದ ಕಲಂಕ ಹತ್ತುವಂತಿದೆ. ಆದುದರಿಂದ ಮಹಾಸಭೆಯು ಬಂದಾಗಲಿಕ್ಕೆ ತಾವೇ ಪ್ರತ್ಯಕ್ಷ ಕಾರಣರೋ? ಅಥವಾ ತಮ್ಮ ದಿವಾನಗಿರಿಯ ಅಧಿಕಾರಕ್ಕಿಂತ ಬೇರೊಂದು ಪ್ರಬಲವಾದ ಕಾರಣವಿತ್ತೋ? ಎಂಬದನ್ನು ರಾ. ಬ ರವಿರು ಆದಷ್ಟು ಬೇಗನೆ ಪ್ರಸಿದ್ಧ ಮಾಡಿ ತಮ್ಮ ನೇಲೆ ಬಂದ ಆರೋಪವನ್ನು ದೂರ ಮಾಡಿಕೊಳ್ಳಬೇಕೆಂದು ಅವತ್ತಲೋಚನೆ ಹೇಳುತ್ತೇವೆ.

ರಾ. ಕಂಬಳಿಯವರು ದಿವಾಣಗಿರಿಯ ಆಕಾಂಕ್ಷೆಗಾಗಿ ಮಹಾಸಭೆಯನ್ನು ಡಬ್ಬಾಹಾಕಿದರು

—೦—

" ಯತ್ನೇನ ಸರ್ವಮ ವಶಃ ಎಂಬ ಈ ವೀತಿಯ ವಾಕ್ಯದ ಅರ್ಥವನ್ನು ಸ್ವಾರ್ಥಪರವಾಗಿ ಕಂಡಿ ರಾ ಬ. ಕಂಬಳಿಯವರು ಮಂತ್ರಿಪದಕ್ಕಾಗಿ ನಿಶ್ಚಪ್ರಯತ್ನ ಪಟ್ಟರು. ಅದಕ್ಕಾಗಿ ಬ್ರಾಹ್ಮನೇತರರಲ್ಲಿ ದೂರದೃಷ್ಟಿಯ ಸ್ವಾರ್ಥಬುದ್ಧಿ ಪ್ರಯೋಗಿಸಿದರು. ಮಹಾರಾಜರಿಂದಲೂ ಸರಕಾರಕ್ಕೆ ಹೇಳಿಸಿದರು. ಅಂತೂ ಹಲವು ತಂತ್ರೋಪತಂತ್ರಗಳನ್ನು ರಚಿಸಿದರು. ಆದರೂ ಇವರ ಪ್ರಯತ್ನವು ಸಾಫಲ್ಯವಾಗಲಿಲ್ಲ. ಈ ಅಪಜಯ ಮೊಬ್ಬಿನಲ್ಲಿ ಇವರ ಭಬ್ಬುದಿವಸಗಳಲ್ಲಿಂದ ಶಕ್ತಿಹ್ರಾಸವಾಗಿದ್ದ ಮಹಾಸಭೆಯ ಮಹತ್ಕಾರ್ಯವನ್ನು ಇವರ ವಿಚಾರ ಶೂನ್ಯದಲ್ಲಿ ಅಪ್ರಜ್ಞಾಪೂರ್ವಕವಾಗಿ ಕಂಡು ಒಪ್ಪಿಬಿಗೆ ಬಿದ್ದುಬಿಟ್ಟಿತು.

ಅಜಾ ಎಲ್ಲಿ ಧರ್ಮೋದ್ಧಾರ, ಲೋಕಜಾಗೃತಿ, ಸಮಾಜೋನ್ನತಿ, ನಿಸ್ವಾರ್ಥತೆ, ದಕ್ಷತೆ ಇತ್ಯಾದಿಗಳ ಪ್ರಗತಿ ಇದೆಯೋ ಎಲ್ಲಿ ಇಂಥ ಪವಿತ್ರ ಕಾರ್ಯದ ಸೇವೆಯಿಂದ ಪುಣ್ಯವು ಲಭಿಸುವದಿದೆಯೋ, ಅತ್ತ ತಲೆಗೆ ಏನೂ ಲಕ್ಷಿಸಬಾರದೇ? ಅಯ್ಯೋ ಇವರಿಗೆ ಮೆಂತ್ರಿಪದವು ಮುಖ್ಯವೋ? ಮಹಾಸಭೆಯಿಂದ ಸಮಾಜ ಸೇವೆಯು ಮಹತ್ಕಾರ್ಯವು ಸ್ಮಮುಖ್ಯವೋ? ಈ ವಿಷಯವನ್ನು ಬುದ್ಧಿವಂತರಾದ ಮುಖಂಡರೆಲ್ಲರೂ ವಿಚಾರಿಸಿ ಹೇಳಲಿ ತಾವೇನೊ, ಸಮಾಜಕ್ಕೇತಿ ಘನವಾದ ಲೀಡರರು. ಕಾರ್ಯಾಡಳನವನ್ನು ನೋಡಿದರೆ ಹೀಗೆ ವಿವರೀತವು. ಕೌನ್ಸಿಲದ ಮೆಂಬರತನವನ್ನು ದೊರೆಕಿಸುವದಕ್ಕಾಗಿ ಎಷ್ಟು ಪ್ರಯತ್ನ ಪಟ್ಟರು! ಮತ್ತು ರಾಮಭಟ್ಟ ಜೋತಿಯವರ ಭವಿಷ್ಯವನ್ನು ಕೇಳಿ ಎಷ್ಟು ಧೈರ್ಯಗೊಂಡರು! ಇವರ ಅತಿರಥಮಹಾರಥರಂಥ ಅನುಯಾಯಿಗಳು ದೊಕ್ಕ ಗಣಿತ ಹಾಕಿ ಎಲ್ಲ ವೀರಶೈವರ ಮತಗಳನ್ನು ಇವರಿಗೇ ಹಾಕಿಸಲಿಕ್ಕೆ ಪ್ರಯತ್ನಪಟ್ಟರು. ಪದಿನಾರು ಸಾವಿರದ ಮೇಲೆ ಹಾಕಿಸಿ ಜಯವನ್ನುಂಟು ಮಾಡಿದರು. ಇವರ ಈ ಕೃತಿಯಿಂದ ಕೌನ್ಸಿಲಕ್ಕೆ ನಿಂತಬಂದೇ ಬರತಕ್ಕ ಇನ್ನೊಬ್ಬ ವೀರಶೈವ ಮೇಲಾದ ಮುತ್ಸದ್ದಿಗಳು ಅಪಜಯವನ್ನು ಹೊಂದಿದರು. ಇಂಥ ಇವರ ಗಣೇಜ್ಞಾನವಿದ್ದ ಮೇಲೆ ಸಮಾಜಕ್ಕೆ ಅಪಯಶ ಒದಗುವದು ಏನು ಕಡವು? ಅದು ಏನೇ ಇರಲಿ, ಮಹಾ ಸಭೆಯ ಮಹತ್ಕಾರ್ಯಗಳಲ್ಲಿ ಇವರ ಅನುಯಾಯಿಗಳೆಲ್ಲಿಗೆ ಕೆಲಿದರು!! ಶ್ರೇಷ್ಠರಾದ ಅಣ್ಣಾ ಮಹಾಜನಗಳೆಲ್ಲಿ ಅಡಗಿದಿರಿ!!! ಕರ್ನಾಟಕದ ವೀರಶೈವ ಲೀಡರರಾದ ರಾ. ಬ. ಕಂಬಳಿಯವರ ನೇತೃತ್ವದ ಕೆಳಗೆ ಮಹಾಸಭೆಯು ಡಬ್ಬಾಹಾಕಿದರೆ! ಎಂಬ ವಿಷಯವು ಲೋಕ ಮಧ್ಯದಲ್ಲಿ ಅಪಹಾಸಕ್ಕೆ ಕಾರಣವು. ಆದ ಕಾರಣ ಲೀಡರರೂ, ಸಮಾಜದ ಪ್ರಮುಖರೂ ಇನ್ನಾದರೂ ಸಭೆಯ ವಿಷಯಕ್ಕೆ ಮಾತನಾಡುವಾಗ ಬಾಯಿಮುಚ್ಚಿಟ್ಟ ಕತ್ತರಿಯನ್ನು ತೆಗೆದು ಮಾತಾಡಿರಿ ಮಹಾಸಭೆಯನ್ನು ಡಬ್ಬಾಗೆಡವಿದರೆ ನಿನುಗೇನು ಹೆಸರು ಬರುವದು? ಸ್ವಲ್ಪ ಹಿಡವರಿತು ವಿಚಾರಿಸಿರಿ

ಬಸವರಾಜ

ಮಂತ್ರಿಪದ ವಿಚಾರದಲ್ಲಿ ಮನಸ್ಸು ಹರಿದ ರಾ. ಬ. ಕಂಬಳಿಯವರಿಗೆ ಮಹಾಸಭೆ ಮಾಡುವ ವಿಚಾರವು ಅಂತಃಪ್ರೇರಣಪೂರ್ವಕ ಅಧಿಮತವಿದ್ದುದಾದರೂ, ಕಾರ್ಯರೂಪದಲ್ಲಾಗಲು ಅವಕಾಶವಿಲ್ಲದಾದುದೇ ಮಹಾಸಭೆಯನ್ನು ನಿಶ್ಚಿಂತ ಪ್ರಬಲ ಕಾರಣವಾಗಿದೆ. ಈ ಸಮಯ ಸಾಧಿಸಿದ, ಬೀರೂರಿಗೆ ಟಂಕಿದ್ದ ಆ ಧೂಪವೊಂದು ಹುಬ್ಬಳ್ಳಿಯ ಸ್ವಾಗತ ಸಂಘವನ್ನು ಹೊಕ್ಕು ಪ್ರಮುಖ ಸ್ವಾಗತ ಪತ್ರಗಳಿಗೆ ಸ್ಪಾಂಪು ಹಚ್ಚಿ ರವಾನಿ

ಸುಖ ಕೆಲಸವನ್ನು ಕಡೆದಿತು. ಮತ್ತು ಸ್ವಾಗತ ಸಂಘವನ್ನು ಛಿದ್ರಿಸಿ ತನ್ನಭಿಮತಕ್ಕೆ ಕೆಲಸವನ್ನು ಒಳಪಡಿಸಿಕೊಂಡು ಮಹಾ ಸಭೆಯನ್ನು ಮುಣುಗಿಸಿತು. ಛಲರೇ ಭೂತವೇ! ನಿನ್ನ ಸಾಹಸವು ಹೆಚ್ಚಿನದು. ಬಿರೂರ್ಲಿ ಜನಸಿ, ಬೆಂಗಳೂರು ಮೈಸೂರುಗಳಲ್ಲಿ ಸುಳಿದಾಡಿ, ಧಾರವಾಡ ಮಾರ್ಗವಾಗಿ ಹುಬ್ಬಳ್ಳಿಯನ್ನು ತೊಕ್ಕು, ಮಹಾಸಭೆಯ ಸುದ್ದಿಯನ್ನಡಗಿಸಿದ ನಿನ್ನ ಶೌರ್ಯವು ಹೆಚ್ಚಿನದು. ಹೆಚ್ಚಿಸದೆಂದು ಹೇಳಿ, ಸದ್ಯ ಪತ್ರವಿಸ್ತಾರವಾದುದಕ್ಕೆ ವಿರಮಿಸುವೆನು. ಲೋಕಮತ.

ಇಲಿಗಳ ಭಯಂಕರ ಹಾವಳಿಯು.

—o—

ನೆಲ ಕಾಣಿಸದಂತೆ ಹೋಗುತ್ತಿರುವವು.

—o—

ಬಮೇರಿಕೆಗೆ ಸೇರಿದ ಕ್ಯಾಲಿಫೋರ್ನಿಯಾ ದೇಶದಲ್ಲಿ ಇಲಿಗಳ ಹಾವಳಿಯು ಕಲ್ಪನಾತೀತವಾಗಿರುತ್ತದೆ. ಇವು ಲಕ್ಷ ಅಥವಾ ದಶಲಕ್ಷ ಸಂಖ್ಯೆಯಿಂದ ಹೊಂಬಿದ್ದವೆ. ಇದೊಂದು ಪಿಡುಗೇ ಸರಿ. ಹೊಲಗಳಲ್ಲಿಯ ಬೆಳೆ, ಮನೆಯಲ್ಲಿಯ ಅರಿವೆ ಉಳಿಯದಾಗಿದೆ. ಬಂಡಿ, ಮೋಟಾರುಗಳ ಪ್ರವಾಸ ಕೂಡ ತಡೆದಿದೆ. ಶಾಲೆಗಳಲ್ಲಿ ವಿಷ ಹಾಕಿ, ಇವನ್ನು ಕೊಲ್ಲುವ ಪ್ರಯತ್ನವು ನಿಷ್ಫಲವಾಯಿತು ಮಹಾಯುದ್ಧದಲ್ಲಿ ವಿಷವಾಯು ಮತ್ತು ಅಡವೀ ಬೆಕ್ಕುಗಳನ್ನು ಬಿಟ್ಟು, ಇವನ್ನು ಕೊಂದರು. ಅದೇ ಪ್ರಕಾರ ಇನ್ನಿಯೂ ಮಾಡಬೇಕೆನ್ನುತ್ತಾರೆ.

ಕೈನೂಲು ಮತ್ತು ಕೈ ಮಗ್ಗದ ಬಟ್ಟೆಯ ಮೇಲೆ ಜಕಾತಿ ತಕ್ಕೊಳ್ಳಕ್ಕದ್ದಲ್ಲೆಂದು ಪೂನೆಯ ಮ್ಯುನಿಸಿವಾಲಿಟಿಯಲ್ಲಿ ತೀರಾವು ಪಾಸಾಯಿತು.

ವೆಲಿಟಾಣಾದ ಶತ್ರುಂಜಯದ ಯಾತ್ರೆಗೆ ಜೈನರು ಹೋಗತಕ್ಕದ್ದಲ್ಲೆಂದು ಸರತಾಳವಾಗಿರುವದರಿಂದ ಧಾವನಗರ ಮತ್ತು ಕಾಡವಾಶದ ರೇಲ್ವೆ ಗಳಿಗೆ ನಾಲ್ಕು ಲಕ್ಷದ ಹಾನಿಬಿದ್ದಿದೆ.

ಮೈ. ಶಕಲಾತವಾಲಾ ಇವರಿಗೆ ಸವಸರಿ ಮ್ಯುನಿಸಿವಾಲಿಟಿಯವರು ಧಾನಪತ್ರ ಕೊಟ್ಟರು. ಇವರು ನಾಗಪೂರಕ್ಕೆ ಹೋದಾಗ, ಮಾನಪತ್ರ ತೊಡದೇಕೆಂಬ ಸೂಚನೆ ಬಂದಿದ್ದು, ಅದಕ್ಕೆ ವಿಚಾರವು ಇಂದು ನಾಳೆಯಾಗತಕ್ಕದ್ದುಂಟು.

ವಿಮಾಯತಿಯಿಂದ ಚೀನಕ್ಕೆ ದಂಡಿನ ಪ್ರಯಾಣ.

—o—

ವಿಲಾಯತಿಯಲ್ಲಿ ಮುಖ್ಯವಾಗಿ ಇಂಗ್ಲೆಂಡ ಫ್ರಾನ್ಸ, ಸ್ಪೇನ ಮತ್ತು ಪೋರ್ತುಗಾಲ ರಾಜ್ಯಗಳು ಚೀನಕ್ಕೆ ದಂಡು ಕಳಿಸುತ್ತಿರುವವು. ಇಂಗ್ಲೆಂಡದ ದಂಡು ಬ್ಯಾಂಡು ಸಹಿತ ದೊಡ್ಡ ಮೆರವಣಿಗೆಯಿಂದ ಹೊರಟಿತು. ಸ್ತ್ರೀಯರೂ ಹುಡುಗರೂ ಜಯ-ಘೋಷ ಮಾಡಿದರು. ಇಂಗ್ಲಿಷ ಪದ್ಧತಿ ಪ್ರಕಾರ ಅನೇಕ ಯುವತಿಯರು ಸೈನಿಕರಿಗೆ ಚುಂಬನ ಕೊಟ್ಟರು.

ಚೀನ ದೇಶಿಯರ ರಾಷ್ಟ್ರೀಯ ಮಹತ್ವಾಕಾಂಕ್ಷೆಗಳನ್ನು ಪೂರ್ಣ ಮಾಡಲು ಮತ್ತು ಸಮಾಧಾನದಿಂದ ಅದರ ಬೇಡಿಕೆಗಳ ವಿಚಾರ ಮಾಡಲು ಇಂಗ್ಲೆಂಡವು ಸದಾ ತತ್ಪರವಾಗಿರುತ್ತದೆ ಆದರೆ ಬಲಮಂತಿಕೆಯಿಂದ ತನ್ನ ಹಕ್ಕು ಸ್ವಾತಂತ್ರ್ಯವನ್ನು ಸ್ಥಿರಪಡಿಸಿಕೊಳ್ಳಬೇಕೆಂದರೆ- ಇಂಗ್ಲೆಂಡವು ಸಮ್ಮತಿಸಲಾರದೆಂದು ಮಂತ್ರಿಗಳು ಜಾಹೀರ ಮಾಡಿದ್ದಾರೆ.

ಚೀನದೇಶದಲ್ಲಿ ವಿದ್ಯಾರ್ಥಿಗಳಂತೆ ವಿದ್ಯಾರ್ಥಿನಿಯರೂ ದೊಂಬಿಯಲ್ಲಿ ಸೇರಿದ್ದಾರೆ. ವಿದ್ಯಾರ್ಥಿನಿಯರು ಉಂಗುರುಗೂಡಲು ಮಾಡಿಕೊಂಡು, ಕನ್ನಡಕಗಳನ್ನು ಹಾಕಿಕೊಂಡು ಕಂತಾನಾದ ಸೈನಿಕರ ವೇಷುಗಾರರಾಗಿ ಪೂಚಾನಲ್ಲಿರುವ ಮಿಶನರಿಗಳ ವಾಸಸ್ಥಾನಕ್ಕೆ ಹೋದರು. ಅಲ್ಲಿರುವ ದೇಪದಾಸಿಯರನ್ನು ಹಿಡಿದು, ಅವರನ್ನು ಪರಿಪರಿಯಿಂದ ಪೀಡಿಸಿ, ದೆಸೆಗೇಡಾಗಿ ಪಲಾಯನ ಮಾಡಲು ಒತ್ತಾಯ ಪಡಿಸಿದರು.

ಪೂಚಾನಲ್ಲಿರುವ ೮೦೦ ಪರಕೀಯರಿಗೆ ಗ್ರಾಮತ್ಯಾಗ ಮಾಡಲು ಆಜ್ಞೆಯಾಗಿದೆ. ಚೀನ ಸುರಕ್ಷಿತೆಯ ಜವಾಬದಾರಿಯನ್ನು ಹೊಂಲಿಕ್ಕಾಗುವದಿಲ್ಲೆಂದು ಹೇಳಿ, ಇವರಿಗೆ ಸ್ವಾನತ್ಯಾಗ ಮಾಡಲು ತಿಳಿಸಿದ್ದಾರೆ. ಆದರೆ ವಾಹನಗಳ ಅನುಕೂಲತೆ ಇಲ್ಲದ್ದರಿಂದ ಇವರು ಒಳ್ಳೇ ಪೇಚಿನಲ್ಲಿ ಸಿಕ್ಕಿದ್ದಾರೆ. ಕೆಲ ಮಿಶನರಿಗಳು ಹಡಗ ಹತ್ತುವಾಗ, ಪುಂಡರು ಇವರ ಒಡ್ಡೆಗಳನ್ನು ಕಸಕೊಂಡು ಇವರನ್ನು ಬತ್ತಲೆ ಮಾಡಿದರು.

ಚಾಂಗನಾ ಎಂಬಲ್ಲಿಯ ಇಂಗ್ಲಿಷ ಸರಕಾರದ ಎಲ್ಲ ಕಛೇರಿಗಳನ್ನೂ, ಅಂಗಡಿಗಳನ್ನೂ ಜಿಂದಾದವು ಚೀನಿಜನರು ಸೂರು ಮಾಡಿ, ಎಲ್ಲ ವ್ಯವಹಾರವನ್ನು ನಿಲ್ಲಿಸಿಬಿಟ್ಟಿದ್ದಾರೆ.

ವಿವಿಧ ವರ್ತಮಾನಗಳು

—o—

ಶ್ರೀಮನ್ಮಹೀಸೂರ ಮಹಾರಾಜರ ಲಾಸ್ಯ ಜುಬಲಿಯ ಸಮಾರಂಭವನ್ನು ಮಾಡಬೇಕೆಂದು ಮೈಸೂರ ನಾಡಿನ ಪ್ರಮುಖರು ವಿಚಾರ ಹಡೆದು, ಈ ಬಗ್ಗೆ ವಿಹಿತವಾದ ಏರ್ಪಾಡುಗಳನ್ನು ಮಾಡಲು ಪ್ರತಿಷ್ಠಿತ ಗೃಹಸ್ಥರ ಒಂದು ಸಂಘ ನೇಮಿಸಿದ್ದಾರೆ.

ಶ್ರೀಮನ್ಮಹಾರಾಜರ ಅರಮನೆಯಿಂದ ಶ್ರೀ ಪರಕಾಲಸ್ವಾಮಿಗಳ ಮಠಕ್ಕೆ ನಗದು ಮತ್ತು ನೋಟು ಸೇರಿ ಎರಡು ಸಾವಿರ ರೂಪಾಯಿಗಳನ್ನು ಕಳಿಸಿದರು. ಮಠದಲ್ಲಿ ಇವನ್ನು ಕಳವು ಮಾಡಿ, ನೋಟುಗಳನ್ನು ತೋಟದಲ್ಲಿ ಹುಗಿದು, ನಗದು ಬಗಲಿಗೆ ಹಾಕಿ, ಪಲಾಯನ ಹೇಳಿಸಿದ್ದಾರೆ.

ಚೀನದೇಶದಲ್ಲಿ ೧೬೦೦೦ ಇಂಗ್ಲಿಷ ಜನರಿದ್ದಾರೆ

ಒಬ್ಬನಿಗೆ ಒಬ್ಬಳೇ ಹೆಂಡತಿ ಇರಬೇಕು. ಆ ಮಳ ಹಿತಕ್ಕೆ ಬಾಧೆ ತಟ್ಟದಂತೆ ಮತ್ತು ಯೋಗ್ಯ ಕಾರಣವುಂಟಾದ ಹೊರ್ತು ಆಕಾವನೊಬ್ಬನು ಎರಡನೆಯ ಹೆಂಡತಿಯನ್ನು ಮಾಡಿಕೊಳ್ಳಬಾರದೆಂದು ಇಜಿಪ್ತದಲ್ಲಿ ಕಾಯದೆಯಾಗುವದು.

ಇದೇ ಪ್ರಕಾರ ಹೆಂಡತಿಯನ್ನು ಬಿಟ್ಟಿನೆಂದು ಮೂರು ಸಾರೆ ಕಲ್ಲಾಪೇಸು ಕೂಗುವ ಪದ್ಧತಿಯಲ್ಲಿಯೂ ತಿದ್ದುಪಡಿಯಾಗತಕ್ಕದ್ದಿರುತ್ತದೆ.

ಹಿಂದುಸ್ಥಾನ ಮತ್ತು ಇಂಗ್ಲೆಂಡದ ನಡುವೆ ಪರಸ್ಪರ ವಿಚಾರ ವಿನಿಮಯ ಮಾಡುವದಕ್ಕಾಗಿ ಇಂಗ್ಲೆಂಡದಲ್ಲಿ ಒಂದು ಕಮೀಟಿ ರಚನೆಯಾಗಿದೆ. ಲಾರ್ಡ ರೀಡಿಂಗನಾಹೇದರು ಜೇರಮನ್ನರಾಗಿದ್ದಾರೆ!!!

ಸಿಂಧ, ಕಾಠೆವಾಡಕ್ಕೆ ಒಂದಿದ್ದ ಮಿಡತೆಯ ಹಿಂಡು ಗುಜರಾತಕ್ಕೆ ಬಂದು ಬೆಳೆಯನ್ನು ನಾಶ ಮಾಡುತ್ತಿರುವದು.

ಧಾರವಾಡ—

ಮಿ. ಕೃಷ್ಣಲಾಲ ಕೃಪಾರಾಮ ತಾಳೋರರವರು ಧಾರವಾಡದಲ್ಲಿ ಅಸಿಸ್ಟಂಟ ಜಜ್ಜರಾಗಿ ನೇಮಿಸಲ್ಪಟ್ಟಿದ್ದಾರೆ.

ಇಷ್ಟರಿಂದ ಅಲ್ಲಿಯ ಮ್ಯುನಸಿಪಾಲಿಟಿಯಲ್ಲಿ ಒಬ್ಬ ಮೊಕ್ತೆಸರನು ಆರಿಸಿ ಬಂದಂತಾಯಿತು.

ಧಾರವಾಡ ಮ್ಯುನಿಸಿಪಾಲಿಟಿಯ ಆಕ್ಷೇರಿಸಿ ಪ್ರಕರಣವು.

ಇಲ್ಲಿಯ ಮ್ಯುನಿಸಿಪಾಲಿಟಿಯಲ್ಲಿಗೆ ಹಣದ ವಿನಿಯೋಗದ ಪ್ರಕರಣವುಪೋಲೀಸ ಕಛೇರಿಯ ಕಟ್ಟಡವನ್ನು ಎರಿತೇಂದಿತು. ಧಾರವಾಡ ಪಟ್ಟಣದ ಸಬ್ಬು ಇನ್ಸಪೇಕ್ಟರರಾದ ಮಿ. ಪರ್ವತಿಕರ ಇವರ ಕಡಿಗೆ ಅಧ್ಯಕ್ಷರಾದ ಮೆ. ಪರಾಣಸಾಕೇಬರ ಜವಾಬು ಆಯತೆಂದೂ ಕೇಳುತ್ತೇನೆ.

ನೋಟೀಸು

ತಾ| ರಾ| ರುದ್ರಗೌಡಾ ತಂದಿ ತಿನಸಗೌಡಾ ಆರಳಿಕೊಂಡದ ಸಾ| ಕಡ್ಯಾನಿರಲಗಿ ತಾ| ಬಂಕಾಪೂರ ಇವರಿಗೆ

ಕೆಳಗೆ ಸಹಿ ಮಾಡುವವರ ಕಡಿಂದ ಈ ನೋಟೀಸಿನದ್ವಾರ ತಿಳಿಸುವದೇನಂದರೆ- ನೀನು ನನ್ನ ಕಡಿಂದ ಈಗ ಅಜಮಾನ ೮-೧೦ ತಿಂಗಳ ಕೆಳಗೆ ಬಂಕಾಪೂರ ತಾಲೂಕಾ ಕಡಕ್ಕಿನೀರಲಗಿ ಗ್ರಾಮದಲ್ಲಿರುವ ನನ್ನ ಮಾಲಕಿ ವಹಿವಾಟಿಯಲ್ಲಿರುವ ಜಮೀನುಗಳನ್ನು ವ ಮನಿಯನ್ನು ನನ್ನನ್ನು ಜೋವಾನೆ ಮಾಡುತ್ತೇನೆ ಅಂತಾ ನೆನಗೆ ಬೋಧ ಹೇಳಿ ಮೋಸಮಾಡಿ ನನ್ನ ಕಡಿಂದ ಪೋಕಳ ಖರೀದಿಪತ್ರ ಬರಿಸಿಕೊಂಮ ನೋಂದಣಿ ಮಾಡಿಸಿಕೊಂಡಿರುತ್ತೀದಿ ಈಗ ನನಗೆ ೯೦ ವರ್ಷ ಆಗಿದ್ದು ನಂನ ತಲಿ ಸ್ವಸ್ಥ ಇರುವದಿಲ್ಲ ನುಷ್ಟು ನನಗೆ ಮೋಸಮಾಡಿದ್ದು ಸಕಾ ಸ್ಟಾ ಹೀಗಿದ್ದು ನೀನು ನಂನ ಸ್ವಭಾವದಿ ಫಾಯಿದೆ ತೆಗೆದುಕೊಂಡು ನಮಗೆ ಅಗಲಾದದ ಜನರ ಚಿತಾವಣಿಯಿಂದ ನನಗೆ ಏನೂ ಹಣಾ ಕೊಡದೆ ನನ್ನ ಕಡಿಂದ ಪೋಕಳ ವ ಜಿನಾಮಿ ಖರೀದಿಪತ್ರ ಮಾಡಿಸಿಕೊಂಡು ನನಗೆ ಅನ್ನ ನೀನು ಇಲ್ಲದೆ ಹೊರಗೆ ಹಾಕಿ ನನ್ನ ಆಸ್ತಿ ಅ ಪಹಾರ ಮಾಡಿಕೊಂಡು ನಿನ್ನ ತಾಬಾ ಮಾಡಿಕೊಂಡಿರುತ್ತೀದಿ ಜದಕಾರಣ ನನಗೆ ಈ ನೋಟೀಸು ಕೊಡುವ ಭಾಗ ಬಿದ್ದು ಕಾರಣ ಈ ನೋಟೀಸು ಮುಟ್ಟಿದ ಎಳು ದಿವಸದಲ್ಲಿ ನೀನು ತಕರಾರು ಕೊಡಬೇಕು ಇಲ್ಲದಿದ್ದರೆ ನಿನ್ನ ಮೇಲೆ ಕಾಯಿದೆ ಪ್ರಕಾರ ಶ್ರೀಮಿನಲ್ಲಿನಲ್ಲಿ ಆಗಲಿ ದಿವಾಣಿದುಲ್ಲಿ ಆಗಲಿ ರೀತಿ ಪ್ರಕಾರ ಕೆಲ್ಲ ನಡಿಸಲಾದೀತು . ಜದ್ದರಿಂದ ನೀನು ನನ್ನ ಆಸ್ತಿ ನನಗೆ ಪರತ ಬಿಟ್ಟು ಖರೀದಿ ಮಾಡಿಕೊಡಬೇಕು ಇಲ್ಲದೆ ಇದ್ದರೆ ಕಾಯಿದೆ ಪ್ರಕಾರ ಖರೀದಿ ಪತ್ರ ರದ್ದ ಮಾಡ್ಸಲಾದೀತು ನೀನು ನನಗೆ ಮೋಸ ಮಾಡಿದ ಬಗ್ಗೆ ನಿನ್ನ ಮೇಲೆ ಇಂಡಿಯನ್ನ ಪೀನಲ ಕೋಡ ಕಲ್ಮ ಪ್ರಕಾರ ಕೆಲ್ಲ ನಡಿಸುವದರಲ್ಲಿ ಜಂದೀತು ಆದ್ದರಿಂದ ಈ ನೋಟೀಸು ಮುಟ್ಟಿದ ಕೂಡಲೆ ನನ್ನ ಕಡಿಗೆ ಬಂದು ಪರತ ಖರೀದಿಪತ್ರ ಬರಕೊಟ್ಟು ನಿಕಾಲೆ ಮಾಡಿ ಹೊಗಬೇಕು ಇಲ್ಲದೆ ಇದ್ದರೆ ಕಲಸ ನಡಿಸುತ್ತೇನೆ ಆ ಬಾಬತ ಯಾವ ತ್ತು ಖರ್ಚು ನೀನೇ ಕೊಡಬೇಕಾಗುತ್ತದೆ ತಿಳಿಯೋದು ತಾರೀಖು ೧೪-೧೧-೨೭ ನೇ ಇಸ್ವಿ

ಸಹಿ- ಗುರಸಿಗವಡಾ ಈರನಗವಡಾ

ಶಿಕ್ಷಕರೇ! ಇತ್ತ ಲಕ್ಷಕೊಡಿರಿ

ವಿದ್ಯಾರ್ಥಿಗಳೆ ಕೂಲಕರೇ! ಇದನ್ನು ಓದಿರಿ.

ಶ್ರೀ-೩-೪ ಹಾಗೂ ೫ ನೆಯ ಇಯತ್ತೆಗಳ
ಅಂದವಾದ ರೂಲಿನಿಂದ ಎಸೆವ
ಹಂದವಾದ ಕವ್ಹಾಣಿಂದ ಒಪ್ಪುವ
ಸುಂದರವಾದ ಕಾಪೀಬುಕ್ಕುಗಳು ನಮ್ಮಲ್ಲಿ ಸಿಗುವವು
ಪ್ರತಿಯೊಂದು ಕಾಪಿಯ ಬುಕ್ಕಿಗೆ ಒಂದು ಆಜೆ.
ತೆಗೆಸಿಕೊಳ್ಳುವವರಿಗೆ ವಿಶೇಷ ಸವಲತ್ತು ಕೊಡುವೆವು
ಜದಾಜಿಯ ಪೋಸ್ಟ ಟಿಕೀಟುಗಳನ್ನು ಕಳಿಸಿದಲ್ಲಿ
ಪ್ರತಿಯೊಂದು ಇಯತ್ತೆಗೆ ಒಂದರಂತೆ
ಕಾಪಿಬುಕ್ಕುಗಳನ್ನು ನಮೂನೆಗೆ ಕಳುಹಿಸುವೆವು.
ಕಾಪಿಯ ಮುಖ್ಯಗೆಳಲ್ಲಿ ವಿಳಾಸವನ್ನು ಬರೆಸಿದಲ್ಲಿ
ಪ್ರತಿ ಪೆನ್ಸಿಲ್ಲಿಗೆ ಒಂದರಂತೆ ಕಳುಹಿಸಲಾಗುವದು
ಇನ್ನು ಎಲ್ಲಾ ಬಗೆಯ ಸ್ಟೇಶನರಿ ಸಾಮಾನುಗಳು
ಯೋಗ್ಯದರದಿಂದ ದೊರೆಯುವವು.

ವಿಶೇಷ ಮಾಹಿತಿಗಾಗಿ ತಿಳಿಸಿದ ಎರಡು ವಿಳಾಸಗಳಲ್ಲಿ
ಬೇಕಾಗಿ ಒಂದು ವಿಳಾಸಕ್ಕೆ ಬರೆದುಕೊಳ್ಳಲು ಅಪೇಕ್ಷೆ.

ಗ ಅಜಮಾಸ್ತಿ ಜೂಕ ಪ್ರಪರ್ಸ ಕಂಪನಿಸ್
ಎ ವಿಜಯ ಆಫೀಸ ಧಾರವಾಡ

ಮುದ್ರಾಸ ಗೌನ್ಮೆಂಟಿನ ಲೋಕಶಿಯುಕ್ತ ಮೇಜರರಾದ ಹಾಕ್ಟರ ಹುಡ್ಡಯ್ಯನವರಿಂದ
ಪರಿಶೋಧಿಸಲ್ಪಟ್ಟ
ಮೆಸರ್ಸ ಪಿ. ವ್ಹಿ. ರಾಜಪ ಕಂಪನಿಯ

ಸುಗಂಧ ನಶ್ಯದ ಪುಡಿಯು.

ಪ್ರಖ್ಯಾತಿ ಹೊಂದಿದ ಈ ನಶ್ಯದ ಪುಡಿಯು ಅಮೂಲ್ಯವಾದದ್ದಿದ್ದು ಲಕ್ಷಾವಧಿ ಜನರು ಇದರ ಉಪಯೋಗ ಮಾಡಿದ್ದಾರೆ. ಇದರ ಗುಣದ ಬಗ್ಗೆ ಸಾವಿರಾರು ಜನರು ಸರ್ಟೀಫಿಕೇಟುಗಳನ್ನು ಕೊಟ್ಟಿದ್ದಾರೆ. ಈ ಪುಡಿಯ ಉಪಯೋಗದಿಂದ ಗುಣವಾಗುವ ವ್ಯಾಧಿಗಳು:— ಸೀನು, ಆರಳಿಲೆನೋವು, ತಲೆಯಲ್ಲಿ ಗುವ ಬೇರೆ ಪ್ರಕಾರಗಳು ಕಣ್ಣುಗಳಲ್ಲುಂಟಾಗುವ ಎಲ್ಲ ವ್ಯಾಧಿಗಳು ದೂರಾಗಿ ಸ್ಮರಣ ಶಕ್ತಿಯು ಹೆಚ್ಚುತ್ತದೆ. ಬೇರೆ ನಶ್ಯದಲ್ಲಿ ಈ ನಶ್ಯದ ಒಂದು ಬಟಿಕೆಯನ್ನು ಕೂಡಿಸಿದರೆ ಎಲ್ಲವೂ ಸುಗಂಧವಾಗುವದು. ಮಾದರಿ ತಿಕೆ ಉಚಿತವಾಗಿ ದೊರೆಯುವದು.

ಸಾದಾ ಮದ್ರಾಸ ನಸ್ಯ ಗಿ೦ ತೊ ವೀಸಿ ಒಂದಕ್ಕೆ ನಂಬರ ೧ ೪-೦-೦
,, ೨ ೫-೮-೦

ದಪ್ಪವಿಟ್ಟು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಕಂತಿ ವಿಳಾಸ- **ನಸ್ಯವೆ** | **ಪಿ. ವ್ಹಿ. ರಾಜಪ್ಪ ಮತ್ತು ಕಂಪನಿಯ**
೪೪ ಗೋವಿಂದಪ್ಪ ನಾಯಕನ ಬೀದಿ ಬಾರ್ಮಟಾವ್ನು, ಮದ್ರಾಸ

ನೋಟೀಸಿನ ದರಗಳು.

ಇಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ನುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಪದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಸೇಲೆಡ್ಯಾಂಗ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆಯಾ ಡಬರ್‌ಕಾಲಮಿನ ಒಳಗೆಗೆ ಇಮ್ಮಡಿ ತಾಯಿರಿ ಚಾರ್ಜೀರಾಹುಗಳನ್ನು ಕೊಡುವವರು ತಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು. ಮ್ಯಾ. ವಿಳಾಸ

ವಿಶೇಷ ವರ್ಗದ ಜಾಹಿರಾತು

ನಿಯಮಿತ ಕಾಲಾವಧಿಗೆ ಜಾಹಿರಾತು ಕೊಡುವವರಿಗೆ ಕಡಿಮೆ ದರದಲ್ಲಿ ಜಾಹಿರಾತು ಪ್ರಕಟಿಸಲಾಗುವದು.

ನಿಯಮಪತ್ರಕ್ಕೆ	
೧೨ ತಿಂಗಳಿಗೆ	೧೫—೦—೦ ರೂ
೬ ,,	೮—೦—೦ ರೂ
೩ ,,	೪—೦—೦ ರೂ
ದಾರಪತ್ರಕ್ಕೆ ೧ ಪೈಸೆಗೆ	೩—೦—೦ ರೂ

ವಿಶೇಷ ಮಾಹಿತಿ ತಿಳಿಸಿದ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಶಾಯಿ ಬಾಳಪ್ಪಾಯಿ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಕಾಶಾಲ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನವ ಪತ್ರ ವಿಜಯ ವಿಜಯ ಬೆಲೆ ಅರ್ಧ ಆಣೆ

ಸಂಪಾದಕರು— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ಸಂ ೮ ಧಾರವಾಡ ಸೋಮವಾರ ತಾರೀಖು ೨೨ನೇ ಜಾನೇವಾರಿ ೧೯೨೭ [ಸಂಚಿಕೆ ೩೦

ಕಿರ್ಲೋಸ್ಕರ ಕಬ್ಬಿನ ಗಾಣಗಳು.



ಮೊನ್ನೆ ಹೊಸ ಪ್ರಕಾರದಲ್ಲಿ ಈ ಕಬ್ಬಿನ ಗಾಣಗಳ ಪದಾರ್ಥ ಮೊದಲಿನ ಹಳ್ಳಿ ಯ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ವಿಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮುಂಗಸಕಾರ ಹೇಟೆ ಧಾರವಾಡ.

ಈ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಿಜಿಸ್ಟರ ಮಾಡಲ್ಪಟ್ಟದೆ.

ಶಾಖೆಗಳೆಲ್ಲಿ ಬ್ಯಾಂಕಿನ ವ್ಯವಹಾರದ್ದೆ

ಕ್ರೀಯಮಾಡ ಸಿತು.

ಹಿಂದಿಗಿಯು ಆರು ಲಕ್ಷದ ಮೇಲುಮಟ್ಟು ಜನ ಸಂಘಂ ಪೊಕರಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲ್ಪಡುವದು. ಠೇವಿಣಿ ಮತ್ತು ಚೆಕ್ ಶರದ ಮೇಲಾಡುಗಳಿಗೆ ಹಣವನ್ನು ಬಡ್ಡಿ ದಯೆಯುವದು.

ವಿಶೇಷ ಸಂಗತಿಗಳನ್ನು ಕಳಗೆ ಸಹೀ ಮಾಡಿರುವ ಯಿಂದ ತಿಳಿಸಿಕೊಳ್ಳಬೇಕು.

ಮಾನ್ಯವರಾವ ಬಿ. ಜಳಾತಿ,
ಮ್ಯಾನೆಜಿಂಗ ಡಾಯರೆಕ್ಟರ

ವಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ಐದು ಅರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ದಿವಾಜಿ ಟು ಇಟ್ಟುಕೊಳ್ಳಲಾಗುವದು. ದರವನ್ನು ನೆಮಸ್ಕರು ತಿಳಿಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ವತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಅನ್ನೆರಡು ಆಣೆಯಂತಿರುತ್ತದೆ.

ಎ. ಶಿ. ಶಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸು

ಧಾರವಾಡ ಜಿಲ್ಲಾ ಲೋಕಲಬೋರ್ಡಿನಿಂದ—

ಜಾಲಿ ಸಾಲಿನಲ್ಲಿ ಕೆಳಗೆ ಬರೆದ ಸಾಲಿಗಳನ್ನು ಕಟ್ಟತಕ್ಕದ್ದಿದ್ದು ದುರಸ್ತಿಯುಂಟಾ ಮಾಡಲಿಚ್ಛಿಸುವವರು ಕೆಳಗೆ ಸಹಿ ಮಾಡಿದವರ ಕಡಿಗೆ ತಮ್ಮ ಟೆಂಡರ ಅರ್ಜಿಗಳನ್ನು ೧೫೩೭ ನೇ ಇಸ್ವಿ ಜನೆವರಿ ೩೧ ನೇ ತಾ॥ ನ ವಳಗಾಗಿ ಕೊಟ್ಟು ಕಳ್ಳಬೇಕು. ಅರ್ಜಿಕೂಡಾ ಯಸ್ಟಿಮೇಟಿನ ರಕಮಿನ ಮೇಲೆ ೧೫೦ ಕ್ಕೆ ಪಂದು ರೂಪಾಯಿಯಂತೆ ಅವಾನತ ಹಣವನ್ನು ಕಳ್ಳಬೇಕು. ಸದರ ಸಾಲಿಗಳ ನಕಾಶ ಮತ್ತು ಕೆಲಸದ ಕಪತ್ತೇಲುಗಳು ನಮ್ಮ ಕಛೇರಿಯಲ್ಲಿ ನೋಡಲಿಕ್ಕೆ ಸಿಗುವವು.

ಹೆಸರು	ಯಸ್ಟಿಮೇಟಿನ ರಕಂ
(೧) ದುಬ್ಬಳ್ಳಿ ತಾ॥ ಬ್ಯಾಹಟ್ಟಿ	ರೂ. ೧೧,೦೨೦
(೨) ತಿರಗುಪ್ಪಿ	ರೂ. ೯,೫೭೪
(೩) ಗದಗ ತಾ॥ ಹೊಸಳ್ಳಿ	ರೂ. ೪,೧೮೩

C. C. HULKOTI,
ಪ್ರೆಸಿಡೆಂಟ,
ಡಿಸ್ಟ್ರಿಕ್ಟ ಲೋಕಲಬೋರ್ಡ, ಧಾರವಾಡ

ಮೂರು ಪೋಟೋರಗಳ ಮೂರಾಟ್ಟ

ಶಿವರಲೆಟ ಮೋಟಾರ ಲಾರಿ ಹದಿನಾರು ಜನರು ಕೂಡುವದು ಒಂದು. ೧೪ ಜನರು ಕೂಡುವದು ೪ ಟನ್ನು ಪೇಬಗ್ಗೆಟ ಸಿವ್ವರಲೆಟ ಟೂರಿಂಗ ಕಾರ ಈ ಮೂರು ಪೋಟೋರಗಳನ್ನು ಮಾರತಕ್ಕವರಿದ್ದೇವೆ. ಇವೆ ಖಾತ್ರಿಮೆ ಸ್ಥಿತಿಯಲ್ಲಿದ್ದು, ಸದ್ಯದಲ್ಲಿ ಸರ್ವೀಸಿಗೆ ಬಿರುತ್ತವೆ. ತಿಳಿಸ್ಕಲಿಚ್ಛಿಸುವವರು ಪರೀಕ್ಷೆ ಮಾಡಿ ತಿಳಿಯಬಹುದು. ಕ್ರಯ ಮುಂತಾದ್ದರ ಬಗ್ಗೆ ನಮ್ಮ ಪ್ರತಿನಿಧಿಗಳಾದ ಬಿಜಾಪುರದ ಅಲ್ಲಿಬಕ್ಷ ಎ. ಹರಪನಹಳ್ಳಿ ದಾಜ ರಿಪೇರರ ಶ್ರೀಯುತ ಸೀಲರ ಹಾಲಗೇರಿ ಎಂದುಗೆ ಧಾರವಾಡ ಇವರನ್ನು ವಿಚಾರಿಸಬೇಕು.

ಎ. ವಾಯ ಭಸ್ಮರಿ ಕಂಪ್ಯಾನಿ
ಕಿರ್ಲೋಸ್ಕರ ಮೋಟಾರ ಸರ್ವೀಸ
ಸೂಚನೆ— ಮೂರರ ಮೋಟಾರ ಸೊಗೊಂಡಲ್ಲಿ ಸೋವಿ ಯಾಗಬಹುದು

ವಿಜಯ.

ಧಾರವಾಡ ತಾ- ೨೪-೧ ೨೭ ನೇ ಇಸ್ವಿ

ಸವದತ್ತಿಯ ಮ್ಯುನಿಸಿಪಾಲಿಟಿಯು ವಿರುದ್ಧ ದ್ರವ್ಯ ಸಂಪಾದನೆಯ ಆಕ್ಷೇಪಣೆಯು.

ಸವದತ್ತಿಯ ಹತ್ತರಿರುವ ಯಲ್ಲಮ್ಮನ ಗುಡ್ಡದ ಪ್ರಸಿದ್ಧಿಯು ಕರ್ನಾಟಕ ಮತ್ತು ಮಹಾರಾಷ್ಟ್ರ ಪ್ರಾಂತಗಳಲ್ಲಿ ಸರಿಯಾಗಿರುತ್ತದೆ. ಕನ್ನಡಿಗರೂ, ಮರಾಟರೂ ಯಲ್ಲಮ್ಮನ ದರ್ಶನಕ್ಕೆ ತಂಡ ತಂಡಾಗಿ ಬರುತ್ತಾರೆ. ಯಮನೂರ ಜಾತ್ರೆಗೆ ವರ್ಷದಲ್ಲಿ ಒಮ್ಮೆ ಜನ ಕೂಡುವದು. ಆದರೆ ದೇವಿಯ ಯಾತ್ರೆಗೆ ವರ್ಷದಲ್ಲಿ ನಾಲ್ಕು ಸಾರೆ ಬಹು ಸಂಖ್ಯೆಯಿಂದ ಭಾವಿಕರು ಬರುವರು.

ಈ ಜಾತ್ರೆಯಲ್ಲಿ ಆರೋಗ್ಯದ ವ್ಯವಸ್ಥೆಯಿಡಿಪ ಅಧಿಕಾರವು ಸವದತ್ತಿಯ ಮ್ಯುನಿಸಿಪಾಲಿಟಿಗಳುಂಟು ಮ್ಯುನಿಸಿಪಾಲಿಟಿಗೆ ಸವದತ್ತಿ ಯಲ್ಲಮ್ಮಾ ಮ್ಯುನಿಸಿಪಾಲಿಟಿ ಎಂಬ ಹೆಸರುಂಟು. ವಾಸ್ತವಿಕವಾಗಿ ಮ್ಯುನಿಸಿಪಾಲಿಟಿಗೆ ಬರುವ ವ್ಯಾಪ್ತಿಯು ಜಾತ್ರೆಯಿಂದಿರತ್ತದೆ. ಸವದತ್ತಿಯಲ್ಲಿ ನಾಲ್ಕು ಸಾವಿರ ಜನ ವಾಸ್ತೀಕ ಇದಾಯವಿದ್ದರೆ- ಗುಡ್ಡದಿಂದ ೧೯೦೦೦ ರೂಪಾಯಿಯಾಗುತ್ತದೆ. ಆದರೆ ಇಷ್ಟು ದೊಡ್ಡ ರಕಮಿನ ವಿನಿಯೋಗವೆಲ್ಲ ಸವದತ್ತಿಯ ಹಿತ ಹಿತಕ್ಕಾಗಿಯೇ ಆಗುತ್ತದೆ. ೧೯೦೦೦ ದಲ್ಲಿ ಕೆಳಗೆ ಕಂಡಂತೆ ದೊಡ್ಡ ದೊಡ್ಡ ರಕಮುಗಳ ವಿನಿಯೋಗವು ಸವದತ್ತಿ ಗ್ರಾಮಕ್ಕಾಗಿ ಆಗುತ್ತದೆ.

೧ ಇಂಗ್ಲಿಷ ಶಾಲೆ	೫೦೦೦
೨ ಆಸ್ಪತ್ರೆ	೫೦೦೦
೩ ಸ್ಯಾನಿಟೇಶನ	೨೦೦೦
೪ ಕಚೇರಿ ಖರ್ಚೆ	೩೦೦೦

ಈ ಪ್ರಕಾರ ೧೯ ಸಾವಿರ ರೂಪಾಯಿಗಳು ಸವದತ್ತಿಯ ಭಾಗಕ್ಕೆ ಹೋಗಿ, ಯಾತ್ರಿಕರಿಗೆ ಶೀ ರ್ಷಾಸು ಲಾಭ ದೊರೆಯುತ್ತದೆ. ಜಾತ್ರೆಯಿಂದ ಆಸ್ಪತ್ರೆ ವನ್ನು ಇಂತಿಷ್ಟೇ ಪ್ರಮಾಣದಿಂದ ಮಾಡ ಬೇಕೆಂದು ಸರಕಾರದವರು ಶರ್ತು ಹಾಕಿದ್ದರೂ, ಮ್ಯುನಿಸಿಪಾಲಿಟಿಯು ಲಕ್ಷ್ಯಗೊಡವದಿಲ್ಲ. ಮ್ಯುನಿಸಿಪಾಲಿಟಿಯು ಕೈ ಕಟ್ಟಬೇಕು. ಜಾತ್ರೆಯ ಆಸ್ಪತ್ರೆ ವನ್ನು ಯಾತ್ರಿಕರ ದೆಸೆಯಿಂದ ನೀರು ಮತ್ತು ಸೌಕರ್ಯಕ್ಕಾಗಿ ವಿನಿಯೋಗಿಸಬೇಕೆಂದು ಕೆಲವರು ಜಳ ವಳಿ ಎಬ್ಬಿಸಿರುತ್ತಾರೆ. ಈ ಜಳವಳಿಯಲ್ಲಿ ಯಲ್ಲಮ್ಮನ ಮತ್ತು ಸವದತ್ತಿಯ ಸಂಬಂಧವನ್ನೇ ತಪ್ಪಿಸಬೇಕೆಂದಿರುತ್ತಾರೆ.

ಈ ಪ್ರಕಾರ ಸಂಬಂದ ತಪ್ಪಿಸುವದು ಮಾತ್ರ ಯೋಗ್ಯವಲ್ಲ. ಸವದತ್ತಿಯಿಂದಲೇ ಜಾತ್ರೆ ಸ್ಥರ ಅನೇಕ ಸೋಯಿಗಳಾಗುತ್ತಿರುವವು. ಈಗಿನಂತೆ ಅಧಿಕಾರವನ್ನು ಸವದತ್ತಿಯ ಮ್ಯುನಿಸಿಪಾಲಿಟಿಯು ವಶದಲ್ಲಿಟ್ಟು, ಜಾತ್ರೆಯಿಂದ ಬರುವ ದ್ರವ್ಯವನ್ನು ಯೋಗ್ಯ ಪ್ರಮಾಣದಿಂದ ಜಾತ್ರೆಯ ಜನರ ಹಿತಕ್ಕಾಗಿಯೇ ವೆಚ್ಚ ಮಾಡಬೇಕೆಂದು ನಿರ್ಬಂಧ ಪಡಿಸಿದರೆ- ಉದ್ದೇಶವು ಈಡೇರುವದು.

ಅಸೆಂಬ್ಲಿಯ ಅಧ್ಯಕ್ಷರು.

ಶ್ರೀ. ವಿ ಜೆ. ಪಟೇಲರು ಅಸೆಂಬ್ಲಿಯ ಅಧ್ಯಕ್ಷರಾಗಿ ಎರಡನೆಯ ಸಾರೆ ಆರಿಸಲ್ಪಟ್ಟದ್ದು ಸ್ವರಾಜ್ಯ ಪಕ್ಷಕ್ಕೂ ರಾಷ್ಟ್ರಕ್ಕೂ ಭೂಷಣವಾದದ್ದು. ವಿಲಾಯತಿಯಲ್ಲಿ ವಾರ್ಲಮೆಂಟ ಸಭೆಯ ಸ್ಪೀಕರರೆಂಬ ಉದ್ಗಾನದ ಅಧ್ಯಕ್ಷರಿಗೆ ಇರುವಂಥ ಮಾನವೇ ಅಸೆಂಬ್ಲಿಯ ಅಧ್ಯಕ್ಷರಿಗಿರುವದು. ಇದು ಲೋಕನಿಯುಕ್ತವಾದ ಸ್ಥಳವು ಜುವಾವಣೆಯು ಪೂರ್ವದಲ್ಲಿ ಇವರು ಯಾವ ಮತಪವರಿದ್ದರೂ, ಅಧ್ಯಕ್ಷಪದಾರೂಢರಾದ ಕೂಡಲೆ, ಪಕ್ಷ ಸರಪಕ್ಷ ಗಳೆಂಬದನ್ನು ಮರೆತು, ನಿಃಪಕ್ಷವಾತ ನ್ಯಾಯಾಧೀಶನಂತೆ ವರ್ತಿಸಬೇಕಾಗುತ್ತದೆ ಏಕಂದರೆ- ಅಸೆಂಬ್ಲಿಯಲ್ಲಿ ನಡೆಯುವ ಯಾವಕ್ಕು ಕೆಲಸಗಳ ಸೂತ್ರಗಳು ಇವರ ಕಯ್ಯಲ್ಲಿರುತ್ತವೆ. ಲೋಕನಿಯುಕ್ತ ಅಧ್ಯಕ್ಷರನ್ನು ಆರಿಸುವ ಹಕ್ಕು ಹೋದ ಸಾರೆ ದೊರೆಯಿತು. ಆಗ ನಾಮದಾರ ಪಟೇಲರಿಗೆ ಪ್ರತಿಸ್ಪರ್ಧಿಯಿದ್ದರು ಆದರೆ ಈ ಸಾರೆ ಒಬ್ಬರೂ ಎನುವರ್ವಾದಿಯಾಗಿ ನಿಲ್ಲಲಿಲ್ಲ. ಕಳೆದ ಮೂರು ವರ್ಷಗಳಲ್ಲಿ ಇವರು ಭೇದಭಾವವೆನಿಸದೆ, ಎಲ್ಲ ಮೆಂಬರರಿಗೂ ಒಪ್ಪಿಗೆಯಾಗುವಂಥ ರೀತಿಯಿಂದ ಕರ್ತವ್ಯ ಮಾಡಿದ್ದರಿಂದ, ಇವರ ವಿಷಯವಾಗಿ ಪ್ರತಿಯೊಬ್ಬರಲ್ಲಿ ಆದರ ಬುದ್ಧಿ ಹುಟ್ಟಿತು. ಯುರೋಪಿಯನ್ನ ಮೆಂಬರರ ಹೊರ್ತು ಎಲ್ಲ ಪಕ್ಷಗಳ ಮೆಂಬರರು ಏಕಮತದಿಂದ ಇವರೇ ಅಧ್ಯಕ್ಷರಾಗಬೇಕೆಂದು ಮತಕೊಟ್ಟರು. ಚುನಾವಣೆಯಾದ ಕೂಡಲೆ, ಸಂಕಾರ ಪಕ್ಷದ ಯುರೋಪಿಯನ್ನ ಮೆಂಬರರು ಮೊದಲು ಮಾಡಿಕೊಂಡು, ಪಂಡಿತ ಮೋತೀಲಾಲ, ಲಾಲಾ ಲಜಪತರಾಯ ಮತ್ತು ಬ್ಯಾರಿಸ್ಟರ ಜಿನ್ನಾ ಮೊದಲಾದವರು ಇವರ ಅಭಿನಂದನ ಮಾಡಿದರು. ಆಗ ನಾಮದಾರ ಪಟೇಲರು ಎಲ್ಲರ ಉಪಕಾರ ಸ್ಮರಿಸಿ " ನನ್ನ ಕರ್ತವ್ಯ ಮಾಡುವಾಗ ಯಾರಿಗಾದರು ಕ್ಲೇಶವಾದರೆ- ಅವರು ನನ್ನೆಡೆಗೆ ಬಂದು, ಆ ವಿಷಯವಾಗಿ ಪ್ರಶಾಪ ಮಾಡಬೇಕು; ವಿನಹಕಾರಣ ಮನಸ್ಸಿನಲ್ಲಿ ತಿಂಕರ ಪತಾರದು. ಇದರಿಂದಲೇ ಉಭಯರ ಅಂತಃಕರಣವು ಸ್ವಚ್ಛವಾಗುವದು " ಎಂಬದಾಗಿ ಭಾಷಣ ಮಾಡಿ, ತಮ್ಮ ಹೃದಯವು ನಿರ್ವಿಕಾರವಾಗಿರುತ್ತದೆಂಬದನ್ನು ತೋರಿಸಿದರು

ನಾಮದಾರ ಪಟೇಲರು ಸಾಮಾನ್ಯರಲ್ಲ. ಪ್ರಸಿದ್ಧ ಅಸಹಕಾರಿಗಳು; ಸ್ವರಾಜ್ಯ ಪಕ್ಷದ ಧುರೀಣರು. ವಾಙ್ಮಾಶಕ್ತಿಯುಳ್ಳವರೂ, ಮುತ್ಸದ್ದಿಗಳೂ ಆಗಿರುವರು. ಸ್ಪಶ್ನೋತ್ತರಗಳನ್ನು ಪಡಿಸುವದರಲ್ಲಿ ಚತುರರು. ಇಂಥವರು ಅಧ್ಯಕ್ಷರಾಗುವದಕ್ಕಿಂತ, ಸ್ವರಾಜ್ಯ ಪಕ್ಷದ ಒಬ್ಬ ಧುರಂಧರರಾಗಿರುವದು ಲೇಸಾಗಿತ್ತು. ಆದರೆ ಇದರಲ್ಲಿ ಪಂಡಿತ ಮೋತೀಲಾಲ, ಶ್ರೀ ಶ್ರೀನಿವಾಸ ಆಯ್ಯಂಗಾರರಂಥವರು ಇರುವದರಿಂದ ಇವರು ಅಧ್ಯಕ್ಷರಾದದ್ದು ವಿಹಿತವೇ ಸರಿ. ಇನ್ನು ಮೂರು ವರ್ಷಗಳೊಳಗಾಗಿ ರಾಜಮಲ ಕಮಿಷನ ಬಂದು, ಕೇಂದ್ರಪುಟ್ಟಗಾದರೂ ಹೆಚ್ಚಿಗೆ ರಾಜಕೀಯ ಹಕ್ಕುಗಳು ದೊರೆತು, ಅಸೆಂಬ್ಲಿಯ ಗೌರವವು ಹೆಚ್ಚುವದು. ಯುರೋಪಿಯನ್ನ ಮೆಂಬರರು ಅಸೆಂಬ್ಲಿಗೆ ಭಾವೀ ಸ್ವರಾಜ್ಯದ ಪಾರ್ಲಮೆಂಟ ಸಭೆಯೆಂದು ತಾವಾಗಿ ಉದ್ಗಾರ ತೆಗೆದಿದ್ದಾರೆ. ಆ ಪ್ರಕಾರ ನಾಮದಾರ ಪಟೇಲರು ಆ ಪಾರ್ಲಮೆಂಟ ಸಭೆಯ ಅಧ್ಯಕ್ಷರೂ ಆಗಲೆಂದು ಹಾರೈಸುತ್ತೇವೆ.

ಅಸೆಂಬ್ಲಿಯಲ್ಲಿ ಸ್ವರಾಜ್ಯ ಪಕ್ಷದ ಮೊದಲನೆಯ ಜಯ.

ಅಸೆಂಬ್ಲಿಯಲ್ಲಿ ಅಧ್ಯಕ್ಷರನ್ನು ಆರಿಸುವ ಕೆಲಸ ಮುಗಿದ ಕೂಡಲೆ, ಬಂಗಾಲದ ದಬ್ಬಾಳಿಕೆಯ ಕಾಯದೆಯನ್ನು ವಿರೋಧಿಸುವದಕ್ಕಾಗಿ ಕಾಪೊಂದು ಸ್ಪೇಶಲ ಠರಾವು ತರುವಂತೆ ಪಂಡಿತ ಮೋತಿಲಾಲರು ಅಧ್ಯಕ್ಷರಿಗೆ ತಿಳಿಸಿದರು. ಅಧ್ಯಕ್ಷರು ಈ ಠರಾವನ್ನು ಒಪ್ಪಿ, ಇದರ ಉದ್ದಾಪೋಹವು ಮುಂದುವರಿಸಬೇಕೆಂದರೆ- ಶುಕ್ರವಾರವಾಗಬೇಕೆಂದು ಅಪ್ಪಣೆಮಾಡಿದರು. ಆ ಪ್ರಕಾರ ಅಂದು ಸರಿಯಾಗಿ ೧೧ ಗಂಟೆಗೆ ಪಂಡಿತ ಮೋತಿಲಾಲರು ಠರಾವು ತಂದರು.

ಬಂಗಾಲಕ್ಕೆ ಸೇರಿದ ಚಿತಗಾಂಗ ಭಾಗದಿಂದ ಶ್ರೀ. ಮಿತ್ರರು ಅಸೆಂಬ್ಲಿಯ ಮೆಂಬರರಾಗಿ ಆರಿಸಲ್ಪಟ್ಟಿದ್ದಾರೆ. ಪ್ರಥಮತಿ ಪ್ರಕಾರ ಅಸೆಂಬ್ಲಿಗೆ ಬರಬೇಕೆಂಬ ಪತ್ರವು ಎಲ್ಲರಂತೆ ಇವರಿಗೂ ಹೋಯಿತು. ಬಂಗಾಲ ಸರಕಾರದವರು ದಬ್ಬಾಳಿಕೆಯ ಕಾಯ್ದೆಯಿಂದ ಇವರನ್ನು ಮಂಡಾಲೆಯ್ಲು ತಂ

ಂಗದಲ್ಲಿಟ್ಟದ್ದರಿಂದ, ಇವರಿಗೆ ಬರುವ ಮಾರ್ಗವಿ ಇಲ್ಲಿಲ್ಲ.

ವಿಶಾಯತಿಯಲ್ಲಿ ಪಾರ್ಲಮೆಂಟ ಸಭೆಯ ಯಾನಸೊಬ್ಬ ಮೆಂಬರನು ಅಪರಾಧ ಮಾಡಿದರೆ. ಆತನ ವಿಚಾರಣೆಯನ್ನು ಪಾರ್ಲಮೆಂಟ ಸಭೆಯವರೇ ಮಾಡುತ್ತಾರೆ. ಆದರೆ ಆತನಿಗೆ ಪಾರ್ಲಮೆಂಟಕ್ಕೆ ಬರಲು ಯಾವ ಪ್ರಕಾರದ ಆತಂಕವಿಹುದಿಲ್ಲ. ಅದೇ ಪ್ರಾತಿ ಪ್ರಕಾರ ಮಿ. ಮಿಶ್ರರು ಅಸೆಂಬ್ಲಿಗೆ ಬರಬೇಕು. ಅವರು ಮೆಂಬರರಾಗಿ ಕೆಲಸ ಮಾಡಬೇಕೆಂದು ಪಂಡಿತ ಮೋತಿಲಾಲರು ತರಾವಿನ ಮೇಲೆ ಭಾಷಣ ಮಾಡಿದರು.

ಇವರಿಗೆ ಶ್ರೀ ಶ್ರೀನಿವಾಸ ಅಯ್ಯಂಗಾರರು ಅನುಮೋದನ ಕೊಟ್ಟರು. ಇವರು ಅಡಹೋಕೇಟ ಜನರಲರಾಗಿ, ಕಾಯದೆಯಲ್ಲಿ ಪೂರ್ಣ ವಾರಂಗತರು. ಇವರು ತಮ್ಮ ವಿದ್ವತ್ತಿಗೆ ಅನುಸರಿಸಿ ಉತ್ಕೃಷ್ಟ ಭಾಷಣ ಮಾಡಿ, ಸರಕಾರ ಪಕ್ಷದ ಆಸ್ಪಯೋಜಕ ವಿಚಾರಗಳನ್ನು ಹೊಡೆದು ಹಾಕಿದರು. ಪಂಡಿತ ಮಾಲವಿಯಾ ಮತ್ತು ಬ್ಯಾರಿಸ್ಟರ ಜಿನ್ನಾ ಸಾಹೇಬರೂ ಸದ ಮುದಿಮನ್ನ ಸಾಹೇಬರ ವರ್ತನದ ಸ್ವರೂಪವೆಷ್ಟೂ ಉಳಿಸಲಿಲ್ಲ. ದಾಲಾ ಲಜಪತರಾಯರು ದಬ್ಬಾಳಿಕೆಯಲ್ಲಿ ಸಿಕ್ಕು ದೇಶಾಂತರ ದ್ವೀವಾಂತರಕ್ಕೆ ಹೋಗಿ ಬಂದವರು. ಇವರೂ ಈ ಅನ್ಯಾಯವನ್ನು ಹಳಿದರು.

ಈ ಪ್ರಕಾರ ಸ್ವರಾಜ್ಯ, ಸ್ವತಂತ್ರ ಮತ್ತು ಪ್ರತಿನಿಧಿಗಳು ಸಭಕಾರಿಗಳು ಒಗ್ಗಟ್ಟಾಗಿ, ಸರಕಾರದ ಮೇಲೆ ಪಾತುಪತಾಸ್ತ್ರವನ್ನು ಬಿಟ್ಟರು. ಇದನ್ನು ನಿರೋಧಿಸಲು ಸರಕಾರವು ತನ್ನ ಎಲ್ಲ ಮೆಂಬರರನ್ನು ಕೂಡಹಾಕಿತ್ತು. ಆದರೂ ಸ್ವರಾಜ್ಯ ಪಕ್ಷಕ್ಕೆ ೬೪ ಮತ್ತು ವಿರುದ್ಧ ಪಕ್ಷಕ್ಕೆ ೪೬ ಮತಗಳು ಬಿದ್ದು ಸ್ವರಾಜ್ಯ ಪಕ್ಷವು ಅಸೆಂಬ್ಲಿಯಲ್ಲಿ ಮೊದಲನೆಯ ಜಯ ಸಂಪಾದಿಸಿತು.

ಅಸೆಂಬ್ಲಿಯ ಸ್ಕ್ಯಾಂಡಿಂಗ ಕಮಿಟಿಯು.

—•—

ಅಧ್ಯಕ್ಷರ ಚುನಾವಣೆಯ ನಂತರ ಎರಡನೆಯ ಗೌಹತ್ವದ ಕೆಲಸವು ಹಿಂದುಸ್ಥಾನ ಸರಕಾರದ ಆದಾಯ ವೆಚ್ಚದ ಮೇಲೆ ದೃಷ್ಟಿ ಇಡುವ ಕಮಿಟಿಗಾಗಿ ಮೆಂಬರರನ್ನು ಆರಿಸುವದಿತ್ತು. ಇದಕ್ಕೆ ಫಾಯನ್ಯಾನ್ಸ ಸ್ಕ್ಯಾಂಡಿಂಗ ಕಮಿಟಿ ಎಂಬ ಹೆಸರು. ೧೪ ಜನರನ್ನು ಆರಿಸುವದು. ೧೪ ಜನರೇ ಅಮೇದವಾರರಾದ್ದರಿಂದ ಹೋಟು ಹಾಕಿ ಆರಿಸುವ ಅಗತ್ಯವೇ ಉಂಟಾಗಲಿಲ್ಲ. ಅವರ ಹೆಸರುಗಳು.

೧ ನೆ. ಹಾಜಿ ಚವಧರಿ ಮಹಮ್ಮದ ಇಸ್ಮಾಯಿಲಖಾನ, ೨ ರಾಜಾ ಗಜಪತಿ ಉಡ್ಡಿಯಾನ, ೩ ಪಂಡಿತ ನೀಲಕಂತದಾಸ, ೪ ಮಿ. ಅಮೃತನಾಥ ದತ್ತ, ೫ ಮಿ. ಗಯಾಪ್ರಸಾದಸಿಂಗ ೬ ಮಿ. ರಾಮ ನಾರಾಯಣ ಸಿಂಗ, ೭ ಮಿ. ಶೇಷ ಅಯ್ಯಂಗಾರ, ೮ ಮಿ. ವಿದ್ಯಾಸಾಗರ ವಾಂಡಿಯಾ, ೯ ಮಿ. ಬಿರ್ಲಾ, ೧೦ ಮಿ. ಕೇಳಕರ, ೧೧ ಸರ ಪುರುಷೋತ್ತಮದಾಸ ತಾಕುರದಾಸ, ೧೨ ಮಿ, ಎಸ್ ಎನ ಹಾಜೆ, ೧೩ ಮಿ. ಲಿಂಡಸೆ, ೧೪ ಮಿ. ಮೂರ.

ಮುಂಬಯಿ ಕೌನ್ಸಿಲದ ನಾಮನೇಡಿಡ ಮೆಂಬರರು.

—o—

ಎಂಟೇ ಸ್ಥಳಗಳ ದೆಸೆಯಿಂದ ನಾಲ್ಕುಹೂರು ಅರ್ಜಿಗಳು ಹೋದ ಸಂಗತಿಯನ್ನು ಈ ಮೇದಲು ಒರೆದಿರುತ್ತೇವೆ. ಈ ಎಲ್ಲ ಅರ್ಜಿದಾರರಲ್ಲಿ ತೀವ್ರವಾದ ನಿರಾಶೆ ಹುಟ್ಟುವಂತೆ ಕೆಳಗಿನವರು ನಾಮನೇಟ ಮಾಡಲ್ಪಟ್ಟಿದ್ದಾರೆ.

೧ ಮಿ. ಆಲಿಮೊಹಮ್ಮದ ಹಿಂದೂ ಕ್ರಿಶ್ಚನ್ನರ ವತಿಯಿಂದ

೨ ಮೆಸರ್ಸ ಥಾರ್ನಬರ ಮತ್ತು ಎಲಿಸ- ಆಂಗ್ಲೋ ಇಂಡಿಯನ್ನರ ವತಿಯಿಂದ

೩ ಮೆಸರ್ಸ ನೀತಾರಾಮ ಕೇಕವ ಬೋಲೆ, ಸಯ್ಯದ ಮುನವರ ಮತ್ತು ಮಿ. ಜೋತಿ ಎಸ. ಸಿ. ಇವರು ಕೂಲಿಕಾರರ ವತಿಯಿಂದ

೪ ಬ್ಯಾರಿಸ್ಟರ ಆಂಬೆಡೆಕರ, ಡಾಕ್ಟರ ಸಾಳುಂಕೆ ಅಸ್ಪೃಶ್ಯರ ವತಿಯಿಂದ

ಈ ಎಂಟು ಜನರ ಹೊರತು ಸರ ವಸಂತರಾವ ದಾಭೋಳಕರರನ್ನು ಒಂಭತ್ತನೆಯವರಾಗಿ ನೇಮಿಸಿದ್ದಾರೆ. ಸರಕಾರೀ ಖಾತೆಸಾರರು ೧೬ ಜನರು ಇರತಕ್ಕದ್ದು. ಇವರಲ್ಲಿ ಒಬ್ಬರನ್ನು ಕಡಿಮೆ ಮಾಡಿ, ಸರ ದಾಭೋಳಕರರನ್ನು ನಾಮನೇಟ ಮಾಡಿದ್ದು, ಇದಕ್ಕೆ ಎಂಥ ಅಗಾಧ ಕಾರಣ ವೇನಾಯಿತೆಂಬದು ತಿಳಿಯದಾಗಿದೆ.

ಸರಕಾರಿ ಕಾಮದಾರರಾಗಿ ನೇಮಿಸಲ್ಪಟ್ಟಂಥವರಲ್ಲಿ ಮೆ. ಪೆಂಟ, ಮಿ. ಬಾಲಕರಾಮ, ಮಿ. ಜೆ. ಮಾಂಟೀಥ, ಮಿ. ಫೆಸಾಳರು ಮೆಂಬರರಾಗಿದ್ದಾರೆ.

ಹಿಂದೂ ವಾಹನೋತ್ಸವಕ್ಕೆ ಕ್ರಿಶ್ಚನ್ನರ ವಿರೋಧ!!

ಸ್ತ್ರೀಯರ ಭಯಂಕರ ದೊಂಬೆಯು.

—o—

ಲಂಕಾವಲ್ಲಿ ಕೊಲೊಂಬೋವಿಂದ ೨೨ ಮೈಲುಗಳ ಮೇಲಿನವ ನೆಗಾಂಬೋ ಎಂಬಲ್ಲಿ ಹಿಂದೂ ಜನರ ಶ್ರೀ. ಸುಬ್ರಮ್ಮಣ್ಯದೇವರ ಮೆರವಣಿಗೆಯು ಕೋವಿನ ಕ್ಯಾಥಲಿಕರು ಮಾಡಿದ ತಕರಾರ ಅರ್ಜಿಯ ವಿಚಾರ ಮಾಡಿ, ಮ್ಯಾಜಿಸ್ಟ್ರೇಟರು ಹಿಂದೂ ಜನರ ದಾಪನೋತ್ಸವಕ್ಕೆ ಅಪ್ಪಣೆ ಕೊಟ್ಟರು ಆದರ ಮೂರು ಸಾವಿರ ಕ್ರಿಶ್ಚನ್ನ ಸ್ತ್ರೀಯರೂ ಹುಡುಗರೂ ಶಂಡತಂಡಾಗಿ ಸೇರಿ, ವಾಹನಕ್ಕೆ ವಿಘ್ನ ತರುವ ನೆತ್ಯಾಗ್ರಹ ಪ್ರಾರಂಭಿಸಿದರು. ವಾಹನ ಬರುವದನ್ನು ಕಂಡು, ದಾರಿಯಲ್ಲಿ ಪ್ರಾರ್ಥನೆ ಮಾಡುವಂತೆ ಮೊಣಕಾಲೂರಿ ಕೂತುಕೊಂಡು, ಕಣ್ಣು ಮುಚ್ಚಿ ಜಪಮಾಲೆಯ ಮಣಿಗಳನ್ನು ಒತ್ತರದಿಂದ ತಿರುವ ಪತ್ತಿದರು. ಪೋಲೀಸರೂ ಮ್ಯಾಜಿಸ್ಟ್ರೇಟರೂ ಇದೊಂದು ದೊಡ್ಡ ಅನಾಯತವಾಗವದೆಂದು ಊಹಿಸಿ, ದಂಡು ಕಳಸುವಂತೆ ಕೊಲೊಂಬೋಕ್ಕೆ ಟೇಲಿಫೋನ ಕೊಟ್ಟರು. ದಂಡು ಬರುವದರೊಳಗಾಗಿ ಕೂಡಿದಸರು ಪಾದ್ರಿಭಟ್ಟರ ಅಪ್ಪಣೆಯಿಲ್ಲದೆ ದೇವಾಲಯದ ಗಂಟೆ ಬಾರಿಸಿದರು. ಇವರಿಗೆ ಸಹಾಯವಾಗಿ ಅನೇಕ ಜನರು ಕೂಡಿದರು. ಬಲಾತ್ಕಾರದಿಂದ ಗುಡಿಯ ಬಾಗಿಲ ತೆರೆದು, ಒಳಗೆ ಹೊಕ್ಕು, ಕನ್ನಡಿಯ ಕಿಡಕಿಗಳನ್ನೂ ಬಿಜಿಗಳನ್ನೂ ಛಿದ್ರ ಮಾಡಿದರು. ಇದೇ ಸಮಯವೆಂದು ಪೋಲೀಸರೂ ಮ್ಯಾಜಿಸ್ಟ್ರೇಟರೂ ದೊಂಬಿಗಾರರು ಬೀದಿಗೆ ಬಂದಂತೆ ಅಟ್ಟೀ ಕಟ್ಟಿದರು. ಆಗ ದೊಂಬಿಗಾರರು ಮ್ಯಾಜಿಸ್ಟ್ರೇಟರಿಗೆ ಕಸವಿನಿಂದ ಕಲ್ಲು ಹೊಡೆದರು. ಕೆಲ್ಲು ಹಡೆಗೆ ಕೂರು, ಸಾಮೆಂಬರು ನೆಲಕ್ಕೆ ಬಿದ್ದರು. ಕೆಲ ಹೊತ್ತಿನ ಮೇಲೆ ಎದ್ದರು. ಇವರಂತೆ ಬಂದೋಬಸ್ತಿಗಾಗಿ ಬಂದ ಸೋಲ್ಜರರಿಗೂ ಕಲ್ಲು ಹೆಂಚಿಗಳನ್ನು ಹೊಡೆದು, ಅನೇಕರಿಗೆ ಬಲವಾದ ಪೆಟ್ಟು ಕೂಡಿಸಿದರು. ಆದರೆ ಯಾರೂ ನಿಂತ ಸ್ಥಳ ಬಿಟ್ಟು ಸರಿಯಲಿಲ್ಲ. ಆದರೂ ಪೋಲೀಸ ಅಥವಾ ಸೋಲ್ಜರರು ಯಾರ ಮೇಲೂ ಗುಂಡು ಹಾಕಲಿಲ್ಲ. ಪೋಲಿಸ ವರ್ತು ದೊಂಬಿಗಾರರ ಆಗ್ಗಾಟದಲ್ಲಿ ಶ್ರೀ ಸುಬ್ರಮ್ಮಣ್ಯದೇವರ ವಾಹನವು ದೇವಾಲಯ ಪಾಟಿ, ಮುಂದೆ ಹೋಯಿತು. ಮತ್ತು ದಂಗೆಗಾಗದು ತಂತಮ್ಮ ಮನೆಯ ದಾರಿ ಹಿಡಿದರು.

ಮುಂಬಯಿಯಲ್ಲಿ ಬೊಲ್ಸೆವಿಕ ನಿಶಾನೆ.

ಮುಂಬಯಿಯಲ್ಲಿ ಮ್ಯುನಸಿಪಾಲಿಟಿಯ ಉಪಚುನಾವಣೆಯಾಯಿತು. ಮಿ. ಪೆಟಿಟ ಮತ್ತು ಫೈರೆಂಟ ಗೃಹಸ್ಥರು ಅಮೇದವಾರರಾಗಿದ್ದರು. ಮಿ. ಪೆಟಿಟರು ಪಾರ್ಸಿಯು. ಇವರು ತಮ್ಮ ಮತದಾರರನ್ನು ಕರಕೊಂಡು ಬರುವ ಮೋಟಾರಗಳ ಮೇಲೆ ಕೆಂಪು ನಿಶಾನೆಗಳನ್ನು ಹಚ್ಚಿದ್ದರು. ಕೆಂಪು ನಿಶಾನೆಯು ಬೊಲ್ಸೆವಿಕರ ನಿಶಾನೆಯಾಗಿರುತ್ತ

ಜಾಹೀರ ನೋಟೀಸು.

ನಾನು ಧಾರವಾಡ ವಿಜಯ ವರ್ತಮಾನಪತ್ರವನ್ನಲ್ಲಿ ತಾ|| ೧೧ ಜನವರಿ ೧೯೩೬ ನೆಯ ಪತ್ರದಲ್ಲಿ ನನ್ನ ಇಬ್ಬರು ಗುಳ್ಳಳಾದ ಬಿ| ಕರಬಸಪ್ಪಾ ಮತ್ತು ಬಿ| ಗುರುಶಿದ್ದಪ್ಪಾ ಇವರಿಬ್ಬರ ಬಾಬತು ಕೊಟ್ಟ ನೋಟೀಸಿನಲ್ಲಿ ಬಿ|| ಗುರುಸಿದ್ದಪ್ಪಾ ಈತನ ಮಟ್ಟಿಗೆ ಸದರ ನೋಟೀಸ ವಜಾಕೂರು ರದ್ದು ಪಡಿಸಿದೆ. ಈತನ ಕೂಡ ವ್ಯವಹಾರ ಮಾಡಲಿಕ್ಕೆ ನನ್ನ ಸಮ್ಮತಿಯುಂಟು. ಮತ್ತು ಇನ್ನೊಬ್ಬ ಬಿ|| ಶರಣಪ್ಪಾ ಈತನ ಬಾಬತು ತಿರ್ದ ಸದರ ನೋಟೀಸಿನ ಪಜಿಕಾಯಿದೆ ಈತನೆವಿಲ್ಲೆಂದೂ ತಿಳಿಯಬೇಕು. ತಿಳಿಯುವದು

ತಾರೀಖು ತಿಂ ೧೬-೧೯೩೬

ಸಹಿ ಚಿನ್ನಪ್ಪ ಸಂಗಪ್ಪ ಲಕಮನಹಳ್ಳಿ
ಧಾರವಾಡ

ನೋಟೀಸು

ರಾ|| ರಾ|| ಈರಪ್ಪ ಇಂದಿ ಮಲ್ಲಪ್ಪಾ ನಿಗ ದಿಯವರ ಕಾ| ನಂ ೨೨೭ ನಾಗರ

ಕೆಳಗೆ ಗತಕಾ ವಿಷಯದ ಜಾಹೀರಪ್ಪಾ ಕೋಮ ಈರಪ್ಪಾ ನಿಂಗಪ್ಪನವರ ನಾ|| ಬೊಗರಿ ನಾನು ಈ ನೋಟೀಸಿನಿಂದ ತಿಳಿಸುವದೇನಂದರೆ ನೀನು ನನ್ನ ಲಗ್ನದ ಗಂಡಸಿರುತ್ತೀದಿ ನಾನು ಸಣ್ಣ ಕೂಸು ಇದ್ದಾಗ ಲಗ್ನ ಮಾಡಿಕೊಂಡಿ ನಾನು ಆಜ ಮಾನು ೧೪ ವರ್ಷದ ಕೆಳಗೆ ಹೈನಲೆದೆ ನೀನು ನನ್ನನ್ನು ಎಂದೂ ಕರಕೊಂಡು ಹೋಗಲಿಲ್ಲಾ ನನ್ನ ಹಣೆಬರ ತಾಯಿಮುಖ ಸಹಾ ನಾನು ಸಣ್ಣ ಕೂಸು ಇದ್ದಾಗ ನತ್ತಿರಕಾಳೆ ನನಗೆ ಮಲತಾಯಿ ಇದ್ದು ಆಕೆಯು ನನ್ನನ್ನು ಪೋಷಿಸವದಿಲ್ಲಾ ನನ್ನ ಜನಕ ಲಕ್ಷ್ಮಣ ದತ್ತಾತ ಹೋಗಿದ್ದು ನಾನು ಹೈನಲೆದ ನಂತರ ಹತ್ತು ವರ್ಷದ ನಂತರ ನನ್ನನ್ನು ಕರಕೊಂಡು ಹೋಗಲಿಕ್ಕೆ ನಿನಗೆ ಪುರ್ಸತ್ತಳ ನಾವರೆ ಹೇಳಿದರೂ ಬಾದ ಮಾಡಿಲಿಲ್ಲ ನಾನು ಅಲ್ಲೆ ಇದ್ದು ದುಡಿದು ಬೇರೆ ಜನರ ಕಟ್ಟಿಯ ಮೇಲೆ ವಾಸ ಮಾಡಿ ಕಮ್ಮಿ ಬಿದ್ದ ಹಣದ ಬಗ್ಗೆ ಸಾಲ ಮಾಡಿ ಹಾಗೂ ಹೀಗೂ ಪ್ರಪಂಚ ಜೀವನ ಆಗಿಕೋತಾ ಬಂದೆ ನನಗೆ ಈಗ ಸಾಲ ಹುಟ್ಟವಲ್ಲದು ದುಡಿಯುವದರಿಂದ ಹೊಟ್ಟೆ ತುಂಬವಲ್ಲದು ಇಂಥ ಸ್ಥಿತಿ ನೋಡಿ ಒಣಿಯ ತೆಲವು ಹಿರಿಯರು ಈಗ ಸುಮಾರು ಎಂದು ತಿಂಗಳ ಹಿಂದೆ ನನ್ನನ್ನು ಕರಕೊಂಡು ನಿನ್ನ ಮನೆಗೆ ಬಂದು ಬಹಳ ರೀತಿಯಿಂದ ಹೇರಿ ಇಟ್ಟು ಹೋದರು ಆದರೆ ನೀನು ನನ್ನ ಸಂಗೂಡ ಪ್ರಪಂಚ ಮಾತಿಲ್ಲಾ ಹಾಗು ನನ್ನ ಹೊಟ್ಟಿಗೆ ಸಹಾ ಹಾಕಲಿಲ್ಲಾ ನಾನು ನಿನ್ನ ಮನೆಯಲ್ಲಿ ವ್ಯವವಾಸ ಬೀಳಬೇಕಾಯಿತು. ನಾನು ಮಾಡಿದ ಅಡಿಗೆಯನ್ನು ಸಹಾ ನೀನು ಮತ್ತು ನಿನ್ನ ತಂದೆ ತಾಯಿಗಳು ತಿನ್ನಲಿಲ್ಲಾ ಈ ಪ್ರಕಾರ ನನಗೆ ತ್ರಾಸ ಮಾಡಿ ಹೊರಗೆ ಹಾಕಿದಿ ಕಾರಣ ನಾನು ನನ್ನ ವ್ಯವಹಾರದ ವೈಮನಸ್ಯೆಯ ಮಾರ್ಗ ನೋಡಿಕೊಳ್ಳುವಿಕಾಗಿ ಈ ನೋಟಿಸು ಕೊಡುವ ಭಾಗ ಬಿಟ್ಟು ಇರುವ ಮನೆಯ ಬಿದ್ದ ಪಿಠೋಪಕರಣಗಳಾಗಿ ಒಂದು ರಾತ್ರಿ ಗೋಲಪ್ಪ ಭಟ್ಟ ಈತನಲ್ಲಿ ಮಾಡಿದ ಬೇಕು ಬಿಡಿಗೂ ಊರಲ್ಲಿಯ ಬಿಲ್ಲರ ಬೇಕಿ ಸೂಡಿ ಅಜಮಾಸು ಎಂದು ನೂರು ರೂಪಾಯಿ ಸಾಲ ತೀರಿಸಿದ್ದಕ್ಕಾಗಿ ಕರಕೊಂಡು ಹೋಗಿ ನನ್ನ ಕೂಡ ಸುರಳೀತ ಪ್ರೀತಿ ಮಾಡಲಿಕ್ಕು ಜಾ ಇದಕ್ಕೆ ತಪ್ಪಿದರೆ ನಾನು ನನ್ನ ಮಗನಿಗೆ ಬಂದೂಕನ್ನು ವ್ಯಡಿಕೆ ಮಾಡಿಕೊಂಡು ಹೋಗಿ ನಿಮ್ಮುಂಡೆ ನನ್ನ ಮೇಲೆ ನಿನ್ನದು ಯಾವ ತರದಿಂದಾ ನೂ ಹಕ್ಕು ಬುಳಿಯಲಿಕ್ಕಿಲ್ಲಾ ಮತ್ತು ತಿಳಿಸಬೇಕಂದರೆ ನನ್ನ ಪ್ರಪಂಚನದ ಬಗ್ಗೆ ಪೋಟಗಿ ಪ್ರೈವೇಟ ಸ್ಕೈ ಮಾಡಿ ಸದರೀ ಸಾಲಾ ಫೇಡ ಮಾಡಿದಲ್ಲಿ ನಾನು ವ್ಯಡಕೆ ಆಗುವ ವಿಚಾರ ಸಹಾ ಮಾಡುವದಿಲ್ಲಾ ನಿನ್ನಲ್ಲಿ ಆಗರ ನಿನ್ನ ಹೆಸರಿನ ಮೇಲೆ ಪರಭಾರೆ ಬಲ್ಲಿ ಯಾದರೂ ಇದ್ದು ಸಂಬಳ್ಳಣಿ ಆಗವೇನೆ ತೀರ್ಪ ಅತ್ತರ ಕೊಡಬೇಕು ಇಲ್ಲವೆ ಬಿಡಬೇಕು. ಈ ನೋಟೀಸಿನ ಖರ್ಚು ನಿನ್ನ ಮೇಲೆ ಜದೆ ತಿಳಿಯೋದು.

ತಾರೀಖು ೨೩-೧೧-೧೯೩೬ ಇಸ್ವಿ

ಈ ಯಡಗೈ ಜೆಜ್ಜಟ್ಟಿನ ಗುತ್ತಾ ಜನವೀರ ವ್ವಾ ಕೋಮ ಈರವ್ವಾ ನಿಗದಿಯವರ ಈಕಿಯ ಕೈ ಬರಹ ಆದೆ.

ಮದ್ರಾಸ ಕೌನ್ಸಿಲಿನ ಮೆಂಬರರಾದ ಡಾಕ್ಟರ ಮುತ್ತುಲಕ್ಷ್ಮಿಯವರಿಂದ ಪರಿಶೋಧಿಸಲ್ಪಟ್ಟ

ಮೆಸರ್ಸ ಪಿ. ಸ್ಟ್ರಿ. ರಾಜನ ಕಂಪನಿಯ

ಸುಗಂಧ ನಶ್ಯದ ಪುಡಿಯು.

